ಸಂಪುಟ: 04 ಸಂಚಿಕೆ: 317 ಪುಟಗಳು: 08 ಬುಧವಾರ 29 ಜನವರಿ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
9448225696 +91 8035841833 ₹5


# ಉದಯ ವಾಹಿನಿ

UV ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ನೀವು ನಿಮ್ಮ ಜೀವನದಲ್ಲಿ ಯಶಸ್ವಿಯಾಗಬೇಕೆಂದರೆ ನೀವು ಜ್ಞಾನ ಮತ್ತು ಶಿಸ್ತನ್ನು ಬೆಳೆಸಿಕೊಳ್ಳಲೇಬೇಕು, ಜ್ಞಾನ ಮತ್ತು ಶಿಸ್ತುಗಳು ನಿಮ್ಮನ್ನು ಅನಾವಶ್ಯಕ ಸಮಸ್ಯೆಗಳಿಂದ ರಕ್ಷಿಸುತ್ತವೆ.

## ಇಡಿ ನೋಟಿಸ್ ನೀಡಿದ್ದು ಅಚ್ಚರಿ ಮೂಡಿಸಿತ್ತು



**ನನ್ನ ಪಾತ್ರ ಏನಿತ್ತು**

• ಉದಯವಾಹಿನಿ, ಬೆಂಗಳೂರು

ಮುಡಾ ಹಗರಣದಲ್ಲಿ ಜಾರಿ ನಿರ್ದೇಶನಾಲಯ ನನಗೆ ನೋಟೀಸ್ ನೀಡಿದ್ದು ಅಚ್ಚರಿ ಮೂಡಿಸಿತ್ತು. ಇದರಲ್ಲಿ ನನ್ನ ಪಾತ್ರ ಏನಿತ್ತು ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಪ್ರಶ್ನಿಸಿದ್ದಾರೆ.ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಡಾ ಹಗರಣ ನಡೆದಾಗ ನಾನು ಸಚಿವನಾಗಿರಲಿಲ್ಲ. ಅದಾದ ನಂತರ ನಾನು ಯಾರಿಗೂ ಸೈಟು ಕೊಟ್ಟಿಲ್ಲ. ತೆಗೆದುಕೊಂಡೂ ಇಲ್ಲ. ಹಾಗಿದ್ದರೂ ನನಗೇಕೆ ನೋಟೀಸ್ ಕೊಟ್ಟರು ಎಂದು ಅಚ್ಚರಿಯಾಗಿತ್ತು ಎಂದು ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿಯವರಿಗೆ ನಿವೇಶನ ನೀಡಿದ್ದು ನ್ಯಾಯಯುತವಾಗಿತ್ತು. ನ್ಯಾಯಾಲಯ ಅದರ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದಾಗ ನಿವೇಶನವನ್ನು ವಾಪಸ್ ಮಾಡಲಾಗಿದೆ. ಅದರ ನಂತರವೂ ಇ.ಡಿ ತನಿಖೆ, ನೋಟಿಸ್ ಇದೆಲ್ಲಾ ಏಕೆ ಎಂಬ ಪ್ರಶ್ನೆ ಉದ್ಭವಿಸಿದೆ ಎಂದರು. ಜಾರಿ ನಿರ್ದೇಶನಾಲಯದ ನೋಟಿಸ್ ಸೂಕ್ತ ಅಲ್ಲ ಎಂದು ಹೈಕೋರ್ಟ್ ನ್ಯಾಯಮೂರ್ತಿಗಳಿಗೆ ಮನವರಿಕೆಯಾಗಿದೆ.

ಅದಕ್ಕಾಗಿಯೇ ನೋಟಿಸ್‌ಗೆ ತಡೆ ನೀಡಿದ್ದಾರೆ. ಇಡೀ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರದಾಗಲೀ, ಅವರ ಪತ್ನಿ ಪಾರ್ವತಿಯವರದಾಗಲೀ ಪಾತ್ರ ಇಲ್ಲ. ಪಾತ್ರ ಇದ್ದಿದ್ದರೆ ನ್ಯಾಯಾಲಯ ನೋಟಿಸ್‌ಗೆ ತಡೆ ನೀಡುತ್ತಿರಲಿಲ್ಲ ಎಂದು ಹೇಳಿದರು.

ನನ್ನನ್ನೂ ಸೇರಿದಂತೆ ಕಾಂಗ್ರೆಸ್‌ನ ಎಲ್ಲಾರೂ ನ್ಯಾಯಾಲಯ ಮತ್ತು ಸಂವಿಧಾನದ ಮೇಲೆ ಪೂರ್ಣ ಪ್ರಮಾಣದ ನಂಬಿಕೆ ಇಟ್ಟುಕೊಂಡಿದ್ದೇವೆ. ನ್ಯಾಯಮೂರ್ತಿಗಳು ಏನು ಹೇಳುತ್ತಾರೊ ಅದನ್ನು ಪಾಲನೆ ಮಾಡುತ್ತೇವೆ. ಜಾರಿ ನಿರ್ದೇಶನಾಲಯದ ಹಿಂದೆ ರಾಜಕೀಯ ಇದೆ ಎಂದು ನಾನು ಹೇಳಲು ಬಯಸುವುದಿಲ್ಲ. ಜನರಿಗೆ ಅರ್ಥವಾಗುತ್ತದೆ ಎಂದರು.

## 'ಮೈಕ್ರೋ ಫೈನಾನ್ಸ್' ಕಿರುಕುಳ ತಡೆಗೆ 'ಸುಗ್ರೀವಾಜ್ಞೆ' ಜಾರಿ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಕಿರುಕುಳದಿಂದ ಸರಣಿ ಆತ್ಮಹತ್ಯೆ ಪ್ರಕರಣಗಳು ನಡೆಯುತ್ತಿವೆ. ಈ ಹಿನ್ನೆಲೆಯಲ್ಲಿ ಇತ್ತೀಚಿಗೆ ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಮಹತ್ವದ ಸಭೆ ನಡೆದಿದ್ದು, ಮೈಕ್ರೋ ಫೈನಾನ್ಸ್ ಕಿರುಕುಳ ತಡೆಗಟ್ಟಲು ಸುಗ್ರೀವಾಜ್ಞೆ ಜಾರಿ ಮಾಡಲಾಗುತ್ತದೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದ್ದರು.

ಈ ವಿಚಾರವಾಗಿ ಮುಂದಿನ ಸಂಪುಟ ಸಭೆಯಲ್ಲಿ ಸುಗ್ರೀವಾಜ್ಞೆ ಜಾರಿ ಮಾಡುತ್ತೇವೆ ಎಂದು ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ ನೀಡಿದರು. ಇನ್ನು ಮೂಡ ಹಗರಣಕ್ಕೆ ಸಂಬಂಧಪಟ್ಟಂತೆ ಪತ್ನಿ ಪಾರ್ವತಿ ಅವರಿಗೆ ಇಡೀ ನೋಟಿಸ್ ನೀಡಿದ ವಿಚಾರವಾಗಿ, ಮುಡಾ ಕೇಸ್ ನಲ್ಲಿ ಪತ್ನಿ ಪಾರ್ವತಿಗೆ ನೀಡಿದ್ದ ಸಮನ್ಸ್ ಗೆ ತಡೆ ನೀಡಿದೆ. ಲೋಕಾಯುಕ್ತ ತನಿಖೆ ನಡೆಯುತ್ತಿರುವಾಗ ಯಾಕೆ ಇಷ್ಟು ಆತುರ ಎಂದಿದೆ. ಜಾರಿನಿರ್ದೇಶನಲಯದ ಸಂಬಂಧಿಸಿದೆ ಹೈಕೋರ್ಟ್ ತಡೆಯಾಜ್ಞೆ ನೀಡಿದೆ.ಸಿಬಿಐ ತನಿಖೆಗೆ ನೀಡಬೇಕೆ ಅಥವಾ ಬೇಡವೇ ಎಂದು ಚರ್ಚೆಯಾಗುತ್ತಿದೆ. ಹೈಕೋರ್ಟ್ ವಾದ ಪ್ರತಿವಾದವನ್ನು ಆಲಿಸಿ ತೀರ್ಪನ್ನು ಕಾಯ್ದಿರಿಸಿದೆ. ನನಗೆ ಈ ಒಂದು ಪ್ರಕರಣದಲ್ಲಿ ಯಾವುದೇ ಆತಂಕವಿಲ್ಲ ನ್ಯಾಯ ಸಿಗುವ ಭರವಸೆ ಇದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಗಳೂರಿನ ವಿಧಾನಸೌಧದಲ್ಲಿ ಮಾಧ್ಯಮ ಪ್ರತಿನಿಧಿಗಳು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದರು.

## ಜಿಟಿ ದೇವೇಗೌಡ ವಿರುದ್ಧ ಲೋಕಾಯುಕ್ತಕ್ಕೆ ದೂರು ಸಲ್ಲಿಕೆ

• ಉದಯವಾಹಿನಿ, ಮೈಸೂರು



ಮುಡಾ ಹಗರಣಕ್ಕೆ ಸಂಬಂಧಪಟ್ಟಂತೆ ದೂರುದಾರ ಸ್ನೇಹಮಯಿ ಕೃಷ್ಣ ಇದೀಗ ಜೆಡಿಎಸ್ ಶಾಸಕ ಜಿಟಿ ದೇವೇಗೌಡ ವಿರುದ್ಧ 50:50 ಅನುಪಾತದಲ್ಲಿ ಸೈಟ್ ಮಾರಾಟ ಮಾಡಿ ಅಕ್ರಮವಾಗಿ ಪರಿಹಾರ ಪಡೆದ ಆರೋಪದ ಹಿನ್ನೆಲೆಯಲ್ಲಿ ಮೈಸೂರಿನ ಲೋಕಾಯುಕ್ತ ಕಚೇರಿಯಲ್ಲಿ ದೂರು ನೀಡಿದ್ದಾರೆ. ಹೌದು ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಶಾಸಕ ಜಿಟಿ ದೇವೇಗೌಡ ವಿರುದ್ಧ ಸ್ನೇಹಮಯಿ ಕೃಷ್ಣ ದೂರು ನೀಡಿದ್ದು ಜಿಟಿ ದೇವೇಗೌಡ ಮಹೇಂದ್ರ ಹೆಸರಿನಲ್ಲಿ ಬೇನಾಮಿಯಾಗಿ ಪರಿಹಾರ ಪಡೆದಿದ್ದಾರೆ ಎಂದು ಆರೋಪಿಸಿದ್ದಾರೆ. ಜೆಡಿಎಸ್ ಶಾಸಕ ಜಿಟಿ ದೇವೇಗೌಡ ಸಹೋದರಿ ಪುತ್ರ ಮಹೇಂದ್ರ, ದೇವನೂರು ಸರ್ವೇ ನಂಬರ್ 81/2 ರಲ್ಲಿ 2.22 ಎಕರೆ ಜಮೀನನ್ನು ಖರೀದಿಸಿದ್ದಾರೆ. ಬಳಿಕ ಆ ಜಮೀನಿಗೆ 50:50 ಅನುಪಾತದಲ್ಲಿ ಅಕ್ರಮವಾಗಿ ಪರಿಹಾರ ಪಡೆದ ಆರೋಪ ಕೇಳಿ ಬರುತ್ತಿದೆ. 19 ಸೈಟ್ ಪಡೆದಿರುವ ಬಗ್ಗೆ ತನಿಖೆ ನಡೆಸಿ ಕ್ರಮ ತೆಗೆದುಕೊಳ್ಳಲು ಮನವಿ ಮಾಡಿದ್ದಾರೆ. ಮೈಸೂರು ಲೋಕಾಯುಕ್ತ ಎಸ್ ಪಿ ಉದೇಶಗೆ ಸ್ನೇಹಮಯಿ ಕೃಷ್ಣ ದೂರು ನೀಡಿದ್ದಾರೆ.

## ನಮಲ್ಲಿ ಯಾವುದೇ ಗೊಂದಲವಿಲ್ಲ ಚಲುವರಾಯಸ್ವಾಮಿ ಸ್ಪಷ್ಟನೆ..

• ಉದಯವಾಹಿನಿ, ಬೆಂಗಳೂರು

ನಮಲ್ಲಿ ಆಂತರಿಕ ಪ್ರಜಾಪ್ರಭುತ್ವದಿಂದಾಗಿ ಶೇಕಡಾ 2 ರಷ್ಟು ಮಂದಿ ಅವರ ಅಳತೆಮಿತಿಯಲ್ಲಿ ಮಾತನಾಡಬಹುದು. ಆದರೆ ಬಿಜೆಪಿಯಲ್ಲಿದ್ದಂತೆ ತೊಡೆ ತಟ್ಟಿ ರಾಜಕಾರಣ ಮಾಡುವುದಿಲ್ಲ ಎಂದು ಕೃಷಿ ಸಚಿವ ಚಲವರಾಯಸ್ವಾಮಿ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷದಲ್ಲಿ ಯಾವುದೇ ಗೊಂದಲಗಳಿಲ್ಲ. ಹೈಕಮಾಂಡ್ ಸೂಚನೆ ನೀಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಹಲವು ಬಾರಿ ಸ್ಪಷ್ಟನೆ ನೀಡಿಯಾಗಿದೆ. ಇದರ ನಂತರ ಯಾರಾದರೂ ಮಾತನಾಡಿದರೆ ಅದು ಲೆಕ್ಕಕ್ಕೆ ಉಳಿಯುವುದಿಲ್ಲ ಎಂದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರ ಮುನ್ನಡೆಸುತ್ತಿದ್ದಾರೆ. ಎಐಸಿಸಿ ಅಧ್ಯಕ್ಷರು ಯಾವುದೇ ಗೊಂದಲಗಳಿಗೆ ಆಸ್ಪದ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಹೀಗಿರುವಾಗ ಬೇರೆ ಯಾರೋ ಏನೋ ಹೇಳಿದರೆ ಅದಕ್ಕೆ ಆದೇಶ ನೀಡಬೇಕಿಲ್ಲ ಎಂದು ತಿಳಿಸಿದರು. ಎಲ್ಲಾರಿಗೂ ತಾಳೆ ಇರುವುದಿಲ್ಲ. ಸಣ್ಣಪುಟ್ಟ ಮಾತುಗಳನ್ನಾಡಿದರೂ ಅದನ್ನು ದೊಡ್ಡದಾಗಿ ಬಿಂಬಿಸಲಾಗುತ್ತದೆ. ಬಿಜೆಪಿಯಲ್ಲಿರುವಂತೆ ಹುಚ್ಚ, ಭ್ರಷ್ಟ ಎಂಬೆಲ್ಲಾ ಟೀಕೆಗಳಾಗುತ್ತಿಲ್ಲ. ಅವರಲ್ಲಿ ತೊಡೆ ತಟ್ಟಿ ನೇರವಾಗಿ ಸವಾಲು ಹಾಕುತ್ತಿದ್ದಾರೆ. ಇಂತಹುದ್ದೆಲ್ಲ ನಮಲ್ಲಿ ನಡೆಯುತ್ತಿಲ್ಲ ಎಂದು ಹೇಳಿದರು.

# ನಮೋ -ಟ್ರಂಪ್ ಭೇಟಿ ಬಾಂಧವ್ಯ ಗಟ್ಟಿ

ಭಾರತ-ಅಮೆರಿಕ ದ್ವಿಪಕ್ಷೀಯ ವ್ಯಾಪಾರ ಸಂಬಂಧ, ಜಾಗತಿಕ ಶಾಂತಿ ಮತ್ತು ಭದ್ರತೆ ಕುರಿತು ಪ್ರಧಾನಿ ಮೋದಿ ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸೋಮವಾರ ದೂರವಾಣಿಯಲ್ಲಿ ಪರಸ್ಪರ ಮಾತುಕತೆ ನಡೆಸಿದರು. ಆತ್ಮೀಯ ಸ್ನೇಹಿತನೊಂದಿಗೆ ಮಾತನಾಡಿದ್ದು ಖುಷಿ ತಂದಿದೆ-ಮೋದಿ: "ಪರಸ್ಪರ ಪ್ರಯೋಜನಕಾರಿ ಮತ್ತು ವಿಶ್ವಾಸಾರ್ಹ ಸಹಭಾಗಿತ್ವಕ್ಕೆ ಉಭಯ ದೇಶಗಳು ಬದ್ಧವಾಗಿವೆ. ಆತ್ಮೀಯ ಸ್ನೇಹಿತ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ಮಾತನಾಡಿದ್ದು ಖುಷಿ ತಂದಿದೆ. ಎರಡನೇ ಬಾರಿ ಅಧ್ಯಕ್ಷರಾಗಿರುವ ಟ್ರಂಪ್ ಅವರನ್ನು ಅಭಿನಂದಿಸಿದ್ದೇನೆ" ಎಂದು ಎಕ್ಸ್‌ನಲ್ಲಿ ಮೋದಿ ತಿಳಿಸಿದ್ದಾರೆ.

**ದೊಡ್ಡಣ್ಣನ ಜತೆ ಸ್ನೇಹಸೇತು**

• ಉದಯವಾಹಿನಿ, ನವದೆಹಲಿ

ಪ್ರಧಾನಿ ಮೋದಿ ಜೊತೆಗಿನ ದೂರವಾಣಿ ಮಾತುಕತೆ ಫಲಪ್ರದವಾಗಿದೆ. ನ್ಯಾಯಸಮ್ಮತ ದ್ವಿಪಕ್ಷೀಯ ಸಂಬಂಧ ಮತ್ತು ಭಾರತ-ಅಮೆರಿಕ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸಲು ಟ್ರಂಪ್ ಬಯಸಿದ್ದಾರೆ. ಇಬ್ಬರೂ ನಾಯಕರು ದೇಶಗಳ ಮಧ್ಯೆ ಸಹಕಾರ ವಿಸ್ತರಿಸುವ ಕುರಿತು ಮಾತನಾಡಿದ್ದಾರೆ ಎಂದು ಶ್ವೇತ ಭವನ ಪ್ರಕಟಣೆ ಹೊರಡಿಸಿದೆ.

ಮೊದಲ ಅವಧಿಯಲ್ಲಿ ಅಧ್ಯಕ್ಷ ಟ್ರಂಪ್ ಕೊನೆಯ ವಿದೇಶ ಪ್ರವಾಸವಾಗಿ ಭಾರತಕ್ಕೆ ಬಂದಿದ್ದರು. 2019ರ ಸೆಪ್ಟೆಂಬರ್‌ನಲ್ಲಿ ಹೂಸ್ಟನ್ ಮತ್ತು 2020ರ ಫೆಬ್ರವರಿಯಲ್ಲಿ ಅಹಮದಾಬಾದ್‌ನಲ್ಲಿ ಟ್ರಂಪ್ ಮತ್ತು ಮೋದಿ ಬೃಹತ್ ರಯಾಲಿಗಳಲ್ಲಿ ಜೊತೆಯಾಗಿ ಕಾಣಿಸಿಕೊಂಡಿದ್ದರು. 2024ರ ನವೆಂಬರ್‌ನಲ್ಲಿ ಟ್ರಂಪ್ ಅವರ ಚುನಾವಣಾ ಗೆಲುವಿನ ನಂತರ ಅವರೊಂದಿಗೆ ಮಾತನಾಡಿದ ಅಗ್ರ ಮೂರು ವಿಶ್ವ ನಾಯಕರಲ್ಲಿ ಮೋದಿ ಕೂಡ ಒಬ್ಬರು. ವಾಷಿಂಗ್ಟನ್ ಡಿಸಿಯ ಕ್ಯಾಪಿಟಲ್ ಹೌಸ್‌ನಲ್ಲಿ ಅಮೆರಿಕದ 47ನೇ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಿದ ಡೊನಾಲ್ಡ್ ಟ್ರಂಪ್ ಗೆ ಯುಎಸ್ ಜನರಿಂದ ಅಭೂತಪೂರ್ವ ಬೆಂಬಲ ದೊರಕಿದ್ದು, ಟ್ರಂಪ್ 2.0 ಯುಗಾರಂಭಕ್ಕೆ ಚಾಲನೆ ಸಿಕ್ಕಾಗಿದೆ. ಅಮೆರಿಕಾದ ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸುತ್ತಿದ್ದಂತೆಯೇ ಭರ್ತಿ 200 ಆದೇಶಕ್ಕೆ ಸಹಿ ಹಾಕಿದ ಟ್ರಂಪ್, ಅಕ್ರಮವಾಗಿ ಭಾರತದಿಂದ ವಲಸೆ ಬಂದವರನ್ನು ಈಗ ಅಮೆರಿಕಾದಿಂದ ಓಡಿಸಲು ಸಜ್ಜಾಗಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರಧಾನಿ ಮೋದಿ ಮತ್ತು ಡೊನಾಲ್ಡ್ ಟ್ರಂಪ್ ನಡುವೆ ದೂರವಾಣಿ ಕರೆಯಲ್ಲಿ ಸಂಭಾಷಣೆ ನಡೆದಿದೆ.

**1** ಕುತೂಹಲ ಮೂಡಿಸಿದ ಪಿಎಂ ಮೋದಿ-ಟ್ರಂಪ್ ಫೋನ್ ಮಾತುಕತೆ, ಪ್ರಧಾನಿ ಅಮೆರಿಕ ಪ್ರವಾಸದ ಸುಳಿವು

**2** ವಲಸಿಗರ ವಿಚಾರದಲ್ಲಿ ಭಾರತ ಸೂಕ್ತ ಕ್ರಮ ಕೈಗೊಳ್ಳಲಿದೆ; ಡೊನಾಲ್ಡ್ ಟ್ರಂಪ್ ಹೇಳಿಕೆ

**ನಮೋ,ಟ್ರಂಪ್ ಯುಗಾರಂಭ**

**ಹಲೋ, ಡಿಯರ್ ಫ್ರೆಂಡ್..**

**ಜಾಗತಿಕ ಶಾಂತಿಗೆ ಭಾರತ ಬದ್ಧ**

**ಇತರ ರಾಷ್ಟ್ರಗಳಿಗೆ ಅಮೆರಿಕ ಕಠಿಣ ಸಂದೇಶ!**



### ಅಮೆರಿಕ ಮತ್ತು ಭಾರತದ ನಡುವೆ ಹೆಚ್ಚಲಿದೆ ಸಹಕಾರ

ವೈಟ್ ಹೌಸ್ ಹೇಳಿಕೆಯಲ್ಲಿ, ಟ್ರಂಪ್ ಮತ್ತು ಪ್ರಧಾನಿ ಮೋದಿ ಅಮೆರಿಕ ಮತ್ತು ಭಾರತದ ನಡುವಿನ ಸಹಕಾರವನ್ನು ಹೆಚ್ಚಿಸುವ ಮತ್ತು ಆಳಗೊಳಿಸುವ ಬಗ್ಗೆ ಚರ್ಚಿಸಿದ್ದಾರೆ ಎಂದು ತಿಳಿಸಿದೆ. ಇಂಡೋ-ಪೆಸಿಫಿಕ್, ಮಧ್ಯಪ್ರಾಚ್ಯ ಮತ್ತು ಯುರೋಪ್ ಸೇರಿದಂತೆ ವಿವಿಧ ಪ್ರಾದೇಶಿಕ ವಿಷಯಗಳ ಬಗ್ಗೆಯೂ ಚರ್ಚಿಸಿದ್ದಾರೆ. ಅಧ್ಯಕ್ಷ ಟ್ರಂಪ್, ಭಾರತವು ಅಮೆರಿಕದಿಂದ ಶಸ್ತ್ರಾಸ್ತ್ರಗಳ ಖರೀದಿಯನ್ನು ಹೆಚ್ಚಿಸುವ ಮತ್ತು ನ್ಯಾಯಯುತ ದ್ವಿಪಕ್ಷೀಯ ವ್ಯಾಪಾರ ಸಂಬಂಧಗಳ ಕಡೆಗೆ ಸಾಗುವ ಮಹತ್ವವನ್ನು ಒತ್ತಿ ಹೇಳಿದ್ದಾರೆ.

**ಕೈಲಾಸ ಮಾನಸ ಸರೋವರ ಯಾತ್ರೆ ನೇರ ವಿಮಾನ ಸಂಪರ್ಕ**

**ಪುನರಾರಂಭಿಸಲು ಭಾರತ-ಚೀನಾ ನಿರ್ಧಾರ**

### ಮೋದಿ ಮತ್ತು ಟ್ರಂಪ್ ಸಂಭಾಷಣೆ ಏನು..


ಶ್ವೇತಭವನ ಹೊರಡಿಸಿರುವ ಹೇಳಿಕೆಯಲ್ಲಿ, 'ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪ್ರಧಾನಿ ಮೋದಿ ಅವರೊಂದಿಗೆ ಅರ್ಥಪೂರ್ಣ ಮಾತುಕತೆ ನಡೆಸಿದ್ದಾರೆ. ಉಭಯ ನಾಯಕರು ಸಹಕಾರವನ್ನು ವಿಸ್ತರಿಸುವ ಮತ್ತು ಆಳಗೊಳಿಸುವ ಕುರಿತು ಚರ್ಚಿಸಿದರು. ಇಂಡೋ-ಪೆಸಿಫಿಕ್, ಮಧ್ಯಪ್ರಾಚ್ಯ ಮತ್ತು ಯುರೋಪ್‌ನಲ್ಲಿ ಭದ್ರತೆ ಸೇರಿದಂತೆ ಹಲವು ಪ್ರಾದೇಶಿಕ ವಿಷಯಗಳ ಬಗ್ಗೆಯೂ ಚರ್ಚಿಸಲಾಯಿತು. ಭಾರತವು ಅಮೆರಿಕ ನಿರ್ಮಿತ ಭದ್ರತಾ ಸಲಕರಣೆಗಳ ಖರೀದಿ ಮತ್ತು ನ್ಯಾಯಯುತ ದ್ವಿಪಕ್ಷೀಯ ವ್ಯಾಪಾರ ಸಂಬಂಧಗಳ ಖರೀದಿಯನ್ನು ಹೆಚ್ಚಿಸಲು ಅಧ್ಯಕ್ಷ ಟ್ರಂಪ್ ಒತ್ತಿ ಹೇಳಿದ್ದಾರೆ.

**ಇಂಡೋ-ಪೆಸಿಫಿಕ್ ಕ್ವಾಡ್ ಪಾಲುದಾರಿಕೆ ಹೆಚ್ಚಿಸಲು ಒತ್ತು**

ಪ್ರಧಾನಿ ಮೋದಿ ಅವರ ವೈಟ್ ಹೌಸ್ ಭೇಟಿಯ ಯೋಜನೆಯ ಬಗ್ಗೆ ಮಾತುಕತೆ ನಡೆದಿದೆ ಎಂದು ವೈಟ್ ಹೌಸ್ ತಿಳಿಸಿದೆ. ಪ್ರಧಾನಿ ಮೋದಿ ಮತ್ತು ಟ್ರಂಪ್ ಅಮೆರಿಕ-ಭಾರತ ಕಾರ್ಯತಂತ್ರದ ಪಾಲುದಾರಿಕೆ ಮತ್ತು ಇಂಡೋ-ಪೆಸಿಫಿಕ್ ಕ್ವಾಡ್ ಪಾಲುದಾರಿಕೆಯನ್ನು ಮುಂದಕ್ಕೆ ಕೊಂಡೊಯ್ಯುವುದರ ಮೇಲೆ ಒತ್ತು ನೀಡಿದ್ದಾರೆ. ಭಾರತ ಈ ವರ್ಷದ ಕೊನೆಯಲ್ಲಿ ಮೊದಲ ಬಾರಿಗೆ ಕ್ವಾಡ್ ನಾಯಕರ ಸಭೆ ಆಯೋಜಿಸಲಿದೆ''. ಟ್ರಂಪ್ ಮತ್ತು ಮೋದಿ ನಡುವೆ ಉತ್ತಮ ಸ್ನೇಹ ಸಂಬಂಧವಿದೆ ಎಂಬುದು ಗಮನಾರ್ಹ. ಅಧ್ಯಕ್ಷರಾಗಿ ಮೊದಲ ಅವಧಿಯಲ್ಲಿ ಟ್ರಂಪ್ ಅವರ ಕೊನೆಯ ವಿದೇಶ ಪ್ರವಾಸ ಭಾರತಕ್ಕೆ ಆಗಿತ್ತು. ಇಬ್ಬರೂ 2019 ರ ಸೆಪ್ಟೆಂಬರ್‌ನಲ್ಲಿ ಹೂಸ್ಟನ್‌ನಲ್ಲಿ ಮತ್ತು 2020ರ ಫೆಬ್ರವರಿಯಲ್ಲಿ ಅಹಮದಾಬಾದ್‌ನಲ್ಲಿ ಎರಡು ಪ್ರತ್ಯೇಕ ಸಮಾವೇಶಗಳಲ್ಲಿ ಸಾವಿರಾರು ಜನರನ್ನು ಉದ್ದೇಶಿಸಿ ಮಾತನಾಡಿದ್ದರು.

## ಹಿಂದೂ ಧರ್ಮದ ಬಗ್ಗೆ ಅವಹೇಳನಕಾರಿ ಮಾತು ಕಾಂಗ್ರೆಸ್‌ಗೆ ಹವ್ಯಾಸವಾಗಿದೆ: ಎನ್.ರವಿಕುಮಾರ್

• ಉದಯವಾಹಿನಿ, ಬೆಂಗಳೂರು



ಹಿಂದೂ ಧರ್ಮದ ಬಗ್ಗೆ ಅವಹೇಳನಕಾರಿ ಮಾತನಾಡುವುದು ಕಾಂಗ್ರೆಸ್‌ಗೆ ಹವ್ಯಾಸವಾಗಿದೆ ಎಂದು ವಿಧಾನಪರಿಷತ್ ಸದಸ್ಯ ಎನ್. ರವಿಕುಮಾರ್ ಅವರು ಆಕ್ಷೇಪಿಸಿದರು.ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಮಲ್ಲಿಕಾರ್ಜುನ ಖರ್ಗೆಯವರು ಅಮಿತ್ ಶಾ ಅವರ ವಿರುದ್ಧ ವ್ಯಂಗ್ಯವಾಗಿ ಟೀಕಿಸಿದ್ದನ್ನು ಖಂಡಿಸಿದ ಅವರು, ಹಿಂದೂ ಧರ್ಮ ಎಂದೊಡನೆ ಇಷ್ಟೊಂದು ಕನಿಷ್ಠವಾಗಿ ಮಾತನಾಡುವುದು ಸರಿಯಲ್ಲ. ಅಮಿತ್ ಶಾ ಅವರು ಮಹಾ ಕುಂಭಮೇಳಕ್ಕೆ ಹೋಗಿ ತ್ರಿವೇಣಿ ಸಂಗಮದಲ್ಲಿ ಸ್ನಾನ ಮಾಡಿದ್ದಾರೆ. ಮೆಕ್ಕಾ, ಮದೀನಾಕ್ಕೆ ಹೋದರೆ ಸ್ವರ್ಗ ಸಿಗುತ್ತದೆಯೇ ಬಡತನ ಹೋಗುತ್ತದೆಯೇ ಎಂದು ಹೇಳುವ ಧೈರ್ಯ ಅವರಿಗೆ ಇದೆಯಾ ಹಿಂದೂ ಧರ್ಮದ ಬಗ್ಗೆ ಅವಹೇಳನಕಾರಿ ಮಾತನಾಡುವುದು ಕಾಂಗ್ರೆಸ್ಸಿಗೆ ಅಭ್ಯಾಸ, ಹವ್ಯಾಸವಾಗಿದೆ. ಮಲ್ಲಿಕಾರ್ಜುನ ಖರ್ಗೆಯವರು ಕೂಡಲೇ ಕ್ಷಮೆ ಯಾಚಿಸಬೇಕು. ಕಾಂಗ್ರೆಸ್ಸಿನ ಅಖಿಲ ಭಾರತ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಇನ್ನೂ ವಿಜಯಪುರ ಮಹಾನಗರ ಪಾಲಿಕೆ ಮೇಯರ್, ಉಪ ಮೇಯರ್ ಚುನಾವಣಾ ಪ್ರಕ್ರಿಯೆ ಮುಂದೂಡಿರುವುದು ಸರಿಯಲ್ಲ. ಮೇಯರ್, ಉಪಮೇಯರ್ ಚುನಾವಣೆಗೆ ನಾವು 24 ಜನ ಮತದಾನ ಮಾಡಿದ್ದೇವೆ. ಅವರು 22 ಜನ ಮತದಾನ ಮಾಡಿದ್ದಾರೆ. ಚುನಾವಣೆ ಪ್ರಕ್ರಿಯೆ ಪೂರ್ಣಗೊಂಡಿತ್ತು. ಉಪಮೇಯರ್‌ಗೆ ಚುನಾವಣೆ ವೇಳೆ ನಾವು 24 ಜನ ಕೈ ಎತ್ತಿದ್ದೆವು. ಸೋಲು ಖಚಿತವಾದುದನ್ನು ಮನಗಂಡು ಚುನಾವಣೆ ಮುಂದೂಡಲು ಪ್ರಯತ್ನ ಮಾಡಿದ್ದಾರೆ ಎಂದು ಟೀಕಿಸಿದರು.

## ಶ್ರೀರಾಮುಲು ಪಕ್ಷ ಸಿದ್ಧಾಂತ ಒಪ್ಪಿ ಬಂದ್ರೆ ಸ್ವಾಗತ: ಕೆ.ಎನ್ ರಾಜಣ್ಣ

• ಉದಯವಾಹಿನಿ, ಬೆಂಗಳೂರು



**ಇಡಿ ನೋಟಿಸ್ ರಾಜಕೀಯ ಪ್ರೇರಿತ**

ಶ್ರೀರಾಮುಲು ಕಾಂಗ್ರೆಸ್ ಸೇರ್ಪಡೆಗೆ ನಾವು ಒತ್ತಡ ಹಾಕಲ್ಲ. ಪಕ್ಷ ಸಿದ್ಧಾಂತ ಒಪ್ಪಿ ಬಂದರೆ ಸ್ವಾಗತ ಮಾಡ್ತೇವೆ ಎಂದು ಸಹಕಾರ ಸಚಿವ ಕೆ.ಎನ್ ರಾಜಣ್ಣ ಹೇಳಿದರು.ವಿಧಾನಸೌಧದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಶ್ರೀರಾಮುಲು ಕಾಂಗ್ರೆಸ್ ಸೇರ್ಪಡೆಯಾಗಲಿದ್ದಾರೆಯೇ ಎಂಬ ವಿಚಾರಕ್ಕೆ ಪ್ರತಿಕ್ರಿಯಿಸಿದರು. ಶ್ರೀರಾಮುಲು ಕಾಂಗ್ರೆಸ್ ಸೇರ್ಪಡೆಗೆ ನಾವು ಒತ್ತಡ ಹಾಕಲ್ಲ. ಪಕ್ಷ ಸಿದ್ಧಾಂತ ಒಪ್ಪಿ ಬಂದರೆ ಸ್ವಾಗತ ಮಾಡ್ತೇವೆ. ರಾಜಕಾರಣ ನಿಂತ ನೀರಲ್ಲ. ಹಾಗೆಯೇ ಮೇಲಿನಿಂದ ಹರಿಯುವ ನೀರನ್ನು ಕೆಳಗೆ ನಿಂತು ನೋಡಲು ಆಗೋದಿಲ್ಲ ಎಂದು ತಿಳಿಸಿದರು. ಇದೇ ವೇಳೆ ಶಾಸಕರಿಗೆ ಅನುದಾನ ಬಿಡುಗಡೆ ಕೊರತೆ ವಿಚಾರವಾಗಿ ಮಾತನಾಡಿ, ಶಾಸಕರು ಕೇಳುತ್ತಾ ಇರೋದು ನ್ಯಾಯ ಸಮ್ಮತವಾಗಿಯೇ ಇದೆ. ಶಾಸಕರು ಅವರ ಮನೆಗೆ ಏನೂ ಅನುದಾನ ಕೇಳ್ತಿಲ್ಲ.

ಹಂತ-ಹಂತವಾಗಿ ಅವರಿಗೆ ಅನುದಾನ ಬಿಡುಗಡೆ ಮಾಡುವ ಕೆಲಸವನ್ನು ನಮ್ಮ ಸರ್ಕಾರ ಮಾಡುತ್ತದೆ ಎಂದರು.

ಸಿಎಂ ಪತ್ನಿ ಹಾಗೂ ಸಚಿವ ಬೈರತಿ ಸುರೇಶ್‌ಗೆ ಇಡಿ ನೋಟಿಸ್ ವಿಚಾರವಾಗಿ ಮಾತನಾಡಿ, ಇಡಿ ನೋಟಿಸ್ ರಾಜಕೀಯ ಪ್ರೇರಿತವಾಗಿದೆ. ನೋಟಿಸ್ ಕೊಟ್ಟಿರುವ ಸತ್ಯಾಸತ್ಯತೆ ವಿಚಾರ ಕೋರ್ಟ್ ಮುಂದೆ ಬಂದಿದೆ. ಕೋರ್ಟ್‌ನಲ್ಲಿರುವ ವಿಚಾರದ ಬಗ್ಗೆ ನಾನು ಈಗಲೇ ಏನೂ ಮಾತಾಡಲ್ಲ ಎಂದು ಹೇಳಿದರು.

# 48,000 ಕೋಟಿ ರೂ. ಸಾಲ ಮಾಡಲು ರಾಜ್ಯ ಸರ್ಕಾರ ಸಿದ್ಧತೆ

● ಅಭಿವೃದ್ಧಿ ವೆಚ್ಚಕ್ಕಾಗಿ ರಾಜ್ಯ ಸಂಗ್ರಹಿಸುವ ತೆರಿಗೆ ಆದಾಯದ ಹಣ ಸಾಲುತ್ತಿಲ್ಲ ● ಅಭಿವೃದ್ಧಿ ವೆಚ್ಚಕ್ಕಾಗಿ ಸರ್ಕಾರ ಸಾಲವನ್ನೇ ನೆಚ್ಚಿಕೊಂಡಿದೆ

• ಉದಯವಾಹಿನಿ, ಬೆಂಗಳೂರು

**ಪಂಚ ಗ್ಯಾರಂಟಿ ಕೇಂದ್ರಿತ ಆಡಳಿತ**

ರಾಜ್ಯ ಸರ್ಕಾರ ತೆರಿಗೆ ಆದಾಯವನ್ನು ಪಂಚಗ್ಯಾರಂಟಿ, ಬದ್ಧ ವೆಚ್ಚಕ್ಕಾಗಿ ಬಳಕೆ ಮಾಡುತ್ತಿದೆ. ಇತ್ತ ಅಭಿವೃದ್ಧಿಗಾಗಿನ ಬಂಡವಾಳ ವೆಚ್ಚಕ್ಕಾಗಿ ಸಂಪೂರ್ಣ ಸಾಲವನ್ನೇ ನೆಚ್ಚಿಕೊಂಡಿದೆ. ಹೀಗಾಗಿ ಮುಂದಿನ ಮೂರು ತಿಂಗಳಲ್ಲಿ ರಾಜ್ಯ ಸರ್ಕಾರ ಅಭಿವೃದ್ಧಿ ಕೆಲಸಗಳಿಗಾಗಿ 48,000 ಕೋಟಿ ರೂ.ಸಾಲ ಮಾಡಲು ಯೋಜಿಸಿದೆ. ಆರ್ಥಿಕ ವರ್ಷದ ಮುಕ್ಕಾಲು ಭಾಗ ಪೂರ್ಣವಾಗಿದೆ. ಕೊನೆಯ ತ್ರೈಮಾಸಿಕ ಚಾಲ್ತಿಯಲ್ಲಿದೆ. ಕಾಂಗ್ರೆಸ್ ಸರ್ಕಾರ ಪಂಚ ಗ್ಯಾರಂಟಿ ಕೇಂದ್ರಿತ ಆಡಳಿತ ನಡೆಸುತ್ತಿದೆ. ತನ್ನ ಸ್ವಂತ ತೆರಿಗೆ ಆದಾಯದ ಬಹುಪಾಲನ್ನು ಪಂಚ ಗ್ಯಾರಂಟಿಗಾಗಿ ಬಳಸುತ್ತಿದೆ ಹಾಗೂ ಬದ್ಧ ವೆಚ್ಚಕ್ಕೆ ಬಳಸಲಾಗುತ್ತಿದೆ. ಇನ್ನು ರಾಜ್ಯದ ಆಸ್ತಿ ಸೃಜಿಸುವ ಅಭಿವೃದ್ಧಿ ವೆಚ್ಚಕ್ಕಾಗಿ ರಾಜ್ಯ ಸಂಗ್ರಹಿಸುವ ತೆರಿಗೆ ಆದಾಯದ ಹಣ ಸಾಲುತ್ತಿಲ್ಲ. ಹೀಗಾಗಿ ಅಭಿವೃದ್ಧಿ ವೆಚ್ಚಕ್ಕಾಗಿ ರಾಜ್ಯ ಸರ್ಕಾರ ಸಾಲವನ್ನೇ ನೆಚ್ಚಿಕೊಂಡಿದೆ. ಒಟ್ಟು ನಾಲ್ಕು ಪ್ರಮುಖ ತೆರಿಗೆಗಳ ಮೂಲಕ ಡಿಸೆಂಬರ್‌ವರೆಗೆ 1,25,101 ಕೋಟಿ ರೂ. ರಾಜಸ್ಥ ಸಂಗ್ರಹವಾಗಿದೆ. ಗಳಿಸಿದ ಆದಾಯವೆಲ್ಲವೂ ರಾಜಸ್ವ ವೆಚ್ಚಕ್ಕೆ ವ್ಯಯವಾಗುತ್ತಿದೆ. ಈ ಬಾರಿ ಅಭಿವೃದ್ಧಿ ಕಾಮಗಾರಿಗಳಿಗಾಗಿನ ಬಂಡವಾಳ ವೆಚ್ಚಕ್ಕೆ 55,877 ಕೋಟಿ ರೂ. ಅನುದಾನ ಹಂಚಿಕೆ ಮಾಡಲಾಗಿದೆ. ರಾಜ್ಯ ಸರ್ಕಾರ ನವೆಂಬರ್‌ವರೆಗೆ ಮೂಲಸೌಕರ್ಯ ಅಭಿವೃದ್ಧಿ ಸೇರಿ ಇತರೆ ಅಭಿವೃದ್ಧಿ ಕಾರ್ಯಗಳಿಗೆ ಒಟ್ಟು 21,493 ಕೋಟಿ ರೂ. ಖರ್ಚು ಮಾಡಿದೆ.ಈ ಅಭಿವೃದ್ಧಿ ವೆಚ್ಚಕ್ಕೆ ರಾಜ್ಯ ಸರ್ಕಾರ ಬಹುವಾಗಿ ಸಾಲವನ್ನೇ ಬಳಸಿಕೊಂಡಿದೆ. ಇನ್ನು ಉಳಿದಿರುವ ಮೂರು ತಿಂಗಳಲ್ಲಿ ರಾಜ್ಯ ಸರ್ಕಾರ ಅಭಿವೃದ್ಧಿ ವೆಚ್ಚಕ್ಕಾಗಿ ಇನ್ನೂ ಹೆಚ್ಚಿನ ಸಾಲ ಮಾಡಲಿದೆ. ಡಿಸೆಂಬರ್‌ವರೆಗೆ 53,000 ಕೋಟಿ ರೂ. ಸಾಲ ಎತ್ತುವಳಿ ರಾಜ್ಯ ಸರ್ಕಾರ 2024-25 ಸಾಲಿನಲ್ಲಿ ಅಂದಾಜು 1,05,246 ಕೋಟಿ ರೂ. ಸಾಲ ಮಾಡಲು ನಿರ್ಧರಿಸಿದೆ. ಅದರಂತೆ ಕೇಂದ್ರ ಸರ್ಕಾರದಿಂದ 6,855 ಕೋಟಿ ರೂ. ಸಾಲ ಪಡೆಯಲು ಅಂದಾಜಿಸಲಾಗಿದೆ. ಬಹಿರಂಗ ಮಾರುಕಟ್ಟೆ ಮೂಲಕ 96,840 ಕೋಟಿ ರೂ. ಸಾಲ ಮಾಡಲು ಮುಂದಾಗಿದೆ. ಇನ್ನು ಈಗಾಗಲೇ ಡಿಸೆಂಬರ್‌ವರೆಗೆ ಆರ್‌ಬಿಐ ಮೂಲಕ ಮುಕ್ತ ಮಾರುಕಟ್ಟೆಯಿಂದ 47,000 ಕೋಟಿ ರೂ. ಮತ್ತು ಇತರ ಮೂಲಗಳಿಂದ 6 ಸಾವಿರ ಕೋಟಿ ರೂ. ಸೇರಿ ಒಟ್ಟು 53 ಸಾವಿರ ಕೋಟಿ ರೂ. ಸಾಲ ಮಾಡಿದೆ. ಆರ್ಥಿಕ ವರ್ಷದ ಎರಡು ತ್ರೈಮಾಸಿಕದಲ್ಲಿ ರಾಜ್ಯ ಹೆಚ್ಚಿನ ಸಾಲದ ಮೊರೆ ಹೋಗಿರಲಿಲ್ಲ. ಸಾರ್ವಜನಿಕ ಸಾಲವಾಗಿ ಐದು ತಿಂಗಳಲ್ಲಿ ಸುಮಾರು 7,000 ಕೋಟಿ ರೂ. ಸಾಲ ಮಾಡಿದೆ. ಮೊದಲ ಎರಡು ತ್ರೈಮಾಸಿಕಗಳಲ್ಲಿ ರಾಜ್ಯ ಸರ್ಕಾರ ಆರ್‌ಬಿಐ ಮೂಲಕ ಬಹಿರಂಗ ಸಾಲ ಎತ್ತುವಳಿಗೆ ಹೋಗಿರಲಿಲ್ಲ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸೆ.24ರಿಂದ ಆರ್‌ಬಿಐ ಮೂಲಕ ಸಾಲ ಎತ್ತುವಳಿ ಮಾಡಲು ಆರಂಭಿಸಿತ್ತು.ಆರ್ಥಿಕ ಇಲಾಖೆ ನೀಡಿದ ಅಂಕಿ-ಅಂಶದಂತೆ ಇತರ ಮೂಲಗಳಿಂದ ರಾಜ್ಯ ಸರ್ಕಾರ ಏಪ್ರಿಲ್ ತಿಂಗಳಲ್ಲಿ 660 ಕೋಟಿ ರೂ. ಸಾರ್ವಜನಿಕ ಸಾಲ ಮಾಡಿತ್ತು. ಮೇ ತಿಂಗಳಲ್ಲಿ 1,455 ಕೋಟಿ ರೂ. ಸಾಲ ಮಾಡಲಾಗಿತ್ತು. ಜೂನ್‌ನಲ್ಲಿ ರಾಜ್ಯ 165 ಕೋಟಿ ರೂ. ಸಾರ್ವಜನಿಕ ಸಾಲ ಮಾಡಿದೆ. ಜುಲೈ ತಿಂಗಳಲ್ಲಿ 1,180 ಕೋಟಿ ರೂ, ಆಗಸ್ಟ್ ತಿಂಗಳಲ್ಲಿ 540 ಕೋಟಿ ರೂ., ನವೆಂಬರ್ ತಿಂಗಳವರೆಗೆ ಒಟ್ಟು 32,884 ಕೋಟಿ ರೂ. ಸಾಲ ಮಾಡಲಾಗಿತ್ತು. ಆರ್‌ಬಿಐ ಮೂಲಕ ಮುಕ್ತ ಮಾರುಕಟ್ಟೆಯಿಂದ ಹೆಚ್ಚಿನ ಸಾಲ ಎತ್ತುವಳಿ ಮಾಡಲು ಆರಂಭಿಸಿದ ಸರ್ಕಾರ ಡಿಸೆಂಬರ್ ತಿಂಗಳಲ್ಲೇ 20,000 ಕೋಟಿ ಸಾಲ ಎತ್ತುವಳಿ ಮಾಡಿದೆ.



### ಬಂಡವಾಳ ವೆಚ್ಚದ ಗುರಿ ಮುಟ್ಟಲು ಆರ್ಥಿಕ ಇಲಾಖೆ ತೀರ್ಮಾನಿಸಿದೆ

ಕೊನೆಯ 3 ತಿಂಗಳಲ್ಲಿ 48,000 ಕೋಟಿ ಸಾಲ ಎತ್ತುವಳಿ ರಾಜ್ಯ ಸರ್ಕಾರ ಆರ್ಥಿಕ ವರ್ಷದ ಕೊನೆಯ ಮೂರು ತಿಂಗಳಲ್ಲಿ ಆರ್‌ಬಿಐ ಮೂಲಕ ಮುಕ್ತ ಮಾರುಕಟ್ಟೆಯಿಂದ 48,000 ಕೋಟಿ ರೂ.ಸಾಲ ಮಾಡಲಿದೆ. ಆ ಸಾಲದ ಮೊತ್ತವನ್ನು ಅಭಿವೃದ್ಧಿಗಾಗಿ ಬಂಡವಾಳ ವೆಚ್ಚಕ್ಕೆ ಬಳಸಲು ತೀರ್ಮಾನಿಸಿದೆ. ಕೊನೆಯ ತ್ರೈಮಾಸಿಕದಲ್ಲಿ ಅಭಿವೃದ್ಧಿ ಕೆಲಸಗಳಿಗೆ ವೇಗ ನೀಡಿ ಬಂಡವಾಳ ವೆಚ್ಚದ ಗುರಿ ಮುಟ್ಟಲು ಆರ್ಥಿಕ ಇಲಾಖೆ ತೀರ್ಮಾನಿಸಿದೆ. ಅದರಂತೆ ರಾಜ್ಯ ಸರ್ಕಾರ ಆರ್‌ಬಿಐ ಮೂಲಕ ಮುಕ್ತ ಮಾರುಕಟ್ಟೆಯಲ್ಲಿ ಕೊನೆಯ ತ್ರೈಮಾಸಿಕದಲ್ಲಿ 48,000 ಕೋಟಿ ರೂ. ಸಾಲ ಎತ್ತುವಳಿ ಮಾಡುವುದಾಗಿ ಮಾಹಿತಿ ನೀಡಿದೆ. ಆ ರೀತಿ ಜನವರಿಯಲ್ಲಿ 16,000 ಕೋಟಿ ರೂ., ಫೆಬ್ರವರಿಯಲ್ಲಿ 16,000 ಕೋಟಿ ರೂ. ಹಾಗೂ ಮಾರ್ಚ್‌ನಲ್ಲಿ 16,000 ಕೋಟಿ ರೂ. ಸಾಲ ಮಾಡಲು ಮುಂದಾಗಿದೆ. ವಿತ್ತೀಯ ಹೊಣೆಗಾರಿಕೆಯ ಮಿತಿ ಮೀರದಂತೆ ಸಾಲ ಮಾಡಲಾಗುವುದು ಎಂದು ಆರ್ಥಿಕ ಇಲಾಖೆ ಅಧಿಕಾರಿ ತಿಳಿಸಿದ್ದಾರೆ.

**ಈ ದಿನದ ದರ** | ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹8,193 /Gram24ct ₹7,510/Gram22ct | ಬೆಳ್ಳಿ: ₹96.50/Gram



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
**ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ ರಾಮೋಹಳ್ಳಿ**

# ನಾಲ್ವರು ಸಂನ್ಯಾಸಿಗಳು

ಕೌಪೀನವಂತಃ ಖಲು ಭಾಗ್ಯವಂತಃ = ಕೌಪೀನಧಾರಿಗಳು ಭಾಗ್ಯಶಾಲಿಗಳು ಎಂಬ ಮಾತಿದೆ. ತಂದೆ ತಾಯಿ ಸಹಿತ ರಕ್ತ – ಜಾತಿ ಸಂಬಂಧ ಪ್ರಾಪಂಚಿಕತೆ ಬಿಟ್ಟು ತನ್ನ ನಿಜಸ್ವರೂಪದಲ್ಲಿ ನೆಲೆ ನಿಂತು ಎಲ್ಲರಲ್ಲಿ ತನ್ನನ್ನು ಕಾಣುವ ವಿಶ್ವರೂಪಿ ಸಂನ್ಯಾಸಿ. ಆದ್ದರಿಂದಲೇ ರಾಜ ಮಂತ್ರಿ ಅಧಿಕಾರಿ ಧನಿಕ ಎಲ್ಲರೂ ಸಂನ್ಯಾಸಿಯ ಪಾದಕ್ಕೆರಗುವರು. ಸಂಬಂಧ ತೊರೆದ ಸಂನ್ಯಾಸಿ ಮಠಾಧೀಶನಾಗಿ ಅನ್ನ ಆಶ್ರಯ ವಿದ್ಯೆ ಉದ್ಯೋಗ ನೀಡಿ ಲಕ್ಷಾಂತರರಿಗೆ ನೆರಳು. ಸಂನ್ಯಾಸಿ ಬೇಕು, ಹಾಗಿರಬೇಕು ಹೀಗಿರಬೇಕು ವ್ಯಾಖ್ಯಾನ, ಅನಂತ ನಿರೀಕ್ಷೆ, ಆದರೆ ಸಂನ್ಯಾಸಿಯಾಗಲೊಲ್ಲರು. ಮಾತ್ರವಲ್ಲ, ತಮ್ಮ ಮಕ್ಕಳೂ ಸಂನ್ಯಾಸಿಯಾಗಬಾರದು, ಪರರ ಮಕ್ಕಳು ಆದರೆ ಆಗಲಿ ಎನ್ನುವಲ್ಲಿ ಇದೊಂದು ಪವಾಡ ಸಂಗತಿ: ಕೋಲಾರ ಬಳಿಯ ಹೊಳಲಿಯ ನಾಗಭೂಷಣ ಲಲಿತಮ್ಮನವರ ಐದು ಗಂಡುಮಕ್ಕಳಲ್ಲಿ ನಾಲ್ವರು ಸಂನ್ಯಾಸಿಗಳು. ರಾಮಕೃಷ್ಣ–ವಿವೇಕಾನಂದ ಆಶ್ರಮಗಳ ನಿರ್ಮಾತೃಗಳು. ಗದಗ – ಮನಗೂಳಿಯ ಸ್ವಾಮಿ ನಿರ್ಭಯಾನಂದಜಿ, ತುಮಕೂರಿನ ಸ್ವಾಮಿ ವೀರೇಶಾನಂದಜಿ, ಸ್ವಾಮಿ ಧೀರಾನಂದಜಿ, ಸ್ವಾಮಿ ಬ್ರಹ್ಮನಿಷ್ಠಾನಂದಜಿ ಇವರೇ ಆ ನಾಲ್ಕು ಜನ ಸಹೋದರ ಸಂನ್ಯಾಸಿಗಳು. ಇವರೆಲ್ಲ ವಿದ್ಯಾವಂತರು, ಉನ್ನತ ಹುದ್ದೆಯಲ್ಲಿದ್ದವರು. ಇಲ್ಲದ್ದಕ್ಕಾಗಿ ಸಂನ್ಯಾಸವಲ್ಲ, ತಮಗಾಗಿ ಸಮಾಜಕ್ಕಾಗಿ ಸಂನ್ಯಾಸ.

# ಮಲ್ಲಿಕಾರ್ಜುನ್ ಖರ್ಗೆಗೆ ತಿರುಗೇಟು ಕೊಟ್ಟ ರವಿಕುಮಾರ್


## ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿದ ಮಲ್ಲಿಕಾರ್ಜುನ ಖರ್ಗೆ

• **ಉದಯವಾಹಿನಿ, ಬೆಂಗಳೂರು**

ಕೇಂದ್ರ ಗೃಹ ಸಚಿವ ಅಮಿತ್ ಶಾ ಕುರಿತು ಮಲ್ಲಿಕಾರ್ಜುನ ಖರ್ಗೆ ಲೇವಡಿ ವಿಚಾರದ ಕುರಿತು ಮಾತನಾಡಿದ ವಿಧಾನ್ ಪರಿಷತ್ ಸದಸ್ಯ ಎನ್.ರವಿಕುಮಾರ್ ಮಲ್ಲಿಕಾರ್ಜುನ್ ಖರ್ಗೆಗೆ ಟಾಂಗ್ ನೀಡಿದ್ದಾರೆ.

ಜೈಪುರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ್ದ ಮಲ್ಲಿಕಾರ್ಜುನ ಖರ್ಗೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಳಿ ನಡೆಸಿದ್ದರು. ಈ ಹೇಳಿಕೆಗೆ ಟಾಂಗ್ ನೀಡಿದ ಎನ್. ರವಿಕುಮಾರ್, ಮಲ್ಲಿಕಾರ್ಜುನ್ ಖರ್ಗೆ ಅವರು ಹಿಂದೂ ಧರ್ಮದ ಬಗ್ಗೆ ಮಾತನಾಡುವುದು ಸರಿಯಲ್ಲ. ಹಾಗಾದರೆ ಮೆಕ್ಕಾ, ಮದೀನಾಗೆ ಹೋದರೆ ಸ್ವರ್ಗ ಸಿಕ್ಕಿಬಿಡುತ್ತೆ ಅಂತಾ ಹೇಳೋಕೆ ಖರ್ಗೆ ಅವರಿಗೆ ಧೈರ್ಯ ಇದೆಯಾ ಎಂದು ಪ್ರಶ್ನಿಸಿದರು. ಮಲ್ಲಿಕಾರ್ಜುನ ಖರ್ಗೆಯವರು ಅಮಿತ್ ಶಾ ಅವರ ವಿರುದ್ಧ ವ್ಯಂಗ್ಯವಾಗಿ ಟೀಕಿಸಿದ್ದನ್ನು ಖಂಡಿಸಿದರು. ಹಿಂದೂ ಧರ್ಮ ಎಂದೊಡನೆ ಇಷ್ಟೊಂದು ಕನಿಷ್ಠವಾಗಿ ಮಾತನಾಡುವುದು ಸರಿಯಲ್ಲ. ಅಮಿತ್ ಶಾ ಅವರು ಮಹಾಕುಂಭ ಮೇಳಕ್ಕೆ ಹೋಗಿ ತ್ರಿವೇಣಿ ಸಂಗಮದಲ್ಲಿ ಸ್ನಾನ ಮಾಡಿದ್ದಾರೆ. ಮೆಕ್ಕಾ, ಮದೀನಾಕ್ಕೆ ಹೋದರೆ ಸ್ವರ್ಗ ಸಿಗುತ್ತದೆಯೇ ಬಡತನ ಹೋಗುತ್ತದೆಯೇ ಎಂದು ಹೇಳುವ ಧೈರ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಇದೆಯೇ ಎಂದು ಪ್ರಶ್ನಿಸಿದರು. ಹಿಂದೂ ಧರ್ಮದ ಬಗ್ಗೆ ಅವಹೇಳನಕಾರಿ ಮಾತನಾಡುವುದು ಕಾಂಗ್ರೆಸ್ಸಿಗೆ ಅಭ್ಯಾಸ, ಹವ್ಯಾಸ ವಾಗಿದೆ. ಮಲ್ಲಿಕಾರ್ಜುನ ಖರ್ಗೆ ಯವರು ಕೂಡಲೇ ಕ್ಷಮೆ ಯಾಚಿಸಬೇಕು. ಕಾಂಗ್ರೇಸ್ಸಿನ ಅಖಿಲ ಭಾರತ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ವಿಧಾನ್ ಪರಿಷತ್ ಸದಸ್ಯ ಎನ್ .ರವಿಕುಮಾರ್ ಅವರು ಆಗ್ರಹಿಸಿದರು.

ವಿಜಯಪುರ ಮಹಾನಗರ ಪಾಲಿಕೆ ಯಲ್ಲಿ ಮೇಯರ್– ಉಪ ಮೇಯರ್ ಚುನಾವಣಾ ಪ್ರಕ್ರಿಯೆ ಮುಂದೂಡಿರುವುದು ಸರಿಯಲ್ಲ ಮೇಯರ್, ಉಪ ಮೇಯರ್ ಚುನಾವಣೆಗೆ ನಾವು 24 ಜನ ಮತದಾನ ಮಾಡಿದ್ದೇವೆ. ಅವರು 22 ಜನ ಮತದಾನ ಮಾಡಿದ್ದಾರೆ. ಮೇಯರ್ ಚುನಾವಣೆಯ ಪ್ರಕ್ರಿಯೆ ಪೂರ್ಣಗೊಂಡಿತ್ತು. ಉಪ ಮೇಯರೆ ಚುನಾವಣೆ ವೇಳೆ ನಾವು 24 ಜನ ಕೈ ಎತ್ತಿದೆವು. ಸೋಲು ಖಚಿತವಾದುದನ್ನು ಮನಗಂಡು ಚುನಾವಣೆ ಮುಂದೂಡಲು ಪ್ರಯತ್ನ ಮಾಡಿದ್ದಾರೆ ಎಂದು ಟೀಕಿಸಿದರು. ಇದರ ವಿರುದ್ಧ ಇವತ್ತು ರಾಜ್ಯ ಚುನಾವಣಾಧಿಕಾರಿಯನ್ನು ಭೇಟಿ ಮಾಡಿ ನ್ಯಾಯ ಕೊಡಲು ಮನವಿ ಸಲ್ಲಿಸಿದ್ದೇವೆ. ನಗರಾಭಿವೃದ್ಧಿ ಇಲಾಖೆ ಜೊತೆ ಮಾತನಾಡಿ ನಿರ್ಣಯ ತೆಗೆದುಕೊಳ್ಳಲಿದ್ದೇವೆ. ವಿಜಯಪುರ ಪಾಲಿಕೆ ಉಪ ಮೇಯರ್ ಚುನಾವಣೆ ವೇಳೆ ಕಾಂಗ್ರೆಸ್ ಪಕ್ಷಕ್ಕೆ ಸೋಲು ಗ್ಯಾರಂಟಿ ಎಂದು ಖಚಿತವಾದ ತಕ್ಷಣ ಚುನಾವಣೆ ಮುಂದೂಡಲು ನೆಪ ತೆಗೆದರು.ಚುನಾವಣೆ ಪ್ರಕ್ರಿಯೆ ಸರಿಯಾಗಿ ನಡೆದಿಲ್ಲ ಎಂದು ಚುನಾವಣಾಧಿಕಾರಿ ಮೇಲೆ ಒತ್ತಡ ಹೇರಿ ಸಚಿವ ಎಂ.ಬಿ.ಪಾಟೀಲರು ಚುನಾವಣೆ ಮುಂದೂಡಿಸಿದ್ದಾರೆ. ಕಾಂಗ್ರೆಸ್ಸಿನ ಎಲ್ಲಾ ಸದಸ್ಯರು ಗಲಾಟೆ ಮಾಡಿದ್ದಾರೆ ಎಂದು ದೂರಿದರು.ವಿಧಾನಪರಿಷತ್ ಸದಸ್ಯ ಕೇಶವ ಪ್ರಸಾದ್ ಅವರು ಮಾತನಾಡಿ, ಮಹಾ ಕುಂಭವು ಜಗತ್ತಿನ ಗಮನವನ್ನು ಸೆಳೆದಿದೆ. ಶೌಚಾಲಯ ನಿರ್ಮಾಣ, ಗ್ಯಾಸ್ ಸಂಪರ್ಕ, ರಸ್ತೆ ನಿರ್ಮಾಣ ಮಾಡುತ್ತ ಮೂಲ ಸೌಕರ್ಯ ನೀಡುವ ಜೊತೆಗೆ ಧಾರ್ಮಿಕ ಆಸ್ಥೆಯನ್ನೂ ನಾವು ನೋಡಿಕೊಳ್ಳುತ್ತಿದ್ದೇವೆ ಎಂದರಲ್ಲದೆ, ಮಲ್ಲಿಕಾರ್ಜುನ ಖರ್ಗೆಯವರ ಮಾತನ್ನು ಉಗ್ರವಾಗಿ ಖಂಡಿಸುವುದಾಗಿ ತಿಳಿಸಿದರು.



**ಮೆಕ್ಕಾ, ಮದೀನಾಗೆ ಹೋದರೆ ಸ್ವರ್ಗ ಸಿಗುತ್ತಾ**

> **ಮಲ್ಲಿಕಾರ್ಜುನ ಖರ್ಗೆಯವರ ಹೇಳಿಕೆ ಗಮನಿಸಿದರೆ ಕಾಂಗ್ರೆಸ್ ಪಕ್ಷವು ಬಹುಸಂಖ್ಯಾತ ಹಿಂದೂ ಧರ್ಮದ ಕುರಿತು ಹೊಂದಿರುವ ಮಾನಸಿಕತೆ ಅರ್ಥವಾಗುತ್ತದೆ. ಹಜ್ ಯಾತ್ರೆ ಇಫ್ತಾರ್ ಕೂಟವನ್ನು ನೀವು ಎಂದಾದರೂ ಪ್ರಶ್ನಿಸಿದ್ದೀರಾ ಎಂದು ಕೇಳಿದರು. ಇಷ್ಟು ವರ್ಷ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷವು ಬಡತನವನ್ನು ಯಾಕೆ ನಿವಾರಣೆ ಮಾಡಿಲ್ಲ ನಾವು ಬಡತನ ರೇಖೆಯನ್ನು ಶೇ 23ರಷ್ಟು ಮೇಲಕ್ಕೆ ತಂದುದಾಗಿ ವಿಶ್ವ ಬ್ಯಾಂಕಿನ ಒಂದು ವರದಿ ತಿಳಿಸಿದೆ.**

> **ಸನಾತನ ಧರ್ಮದವರು ಜಗತ್ತಿನ ಎಲ್ಲಾ ಕಡೆಯಿಂದ ಬಂದಿದ್ದಾರೆ ಎಂದು ತಿಳಿಸಿದರು. ನಂಬಿಕೆಯ ಅನುಗುಣವಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೂ ಈ ಪುಣ್ಯಸ್ನಾನದಲ್ಲಿ ಭಾಗವಹಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಲಿದ್ದಾರೆ. ಉತ್ತರ ಪ್ರದೇಶದ ಮುಖ್ಯಮಂತ್ರಿ ಆದಿತ್ಯನಾಥ್ ಅವರೂ ಪಾಲ್ಗೊಂಡಿದ್ದಾರೆ. ನಾವೂ ಅಲ್ಲಿಗೆ ತೆರಳಲಿದ್ದೇವೆ ಎಂದು ಹೇಳಿದರು.**

# ಮಧ್ವನವಮಿಯ ಪ್ರವಚನ ಮಾಲಿಕೆ

• **ಉದಯವಾಹಿನಿ, ಬೆಂಗಳೂರು**

ಶ್ರೀ ರಾಘವೇಂದ್ರ ಸೇವಾ ಸಮಿತಿಯ ವತಿಯಿಂದ ಮಲ್ಲೇಶ್ವರದ ಈಜುಕೊಳದ ಬಡಾವಣೆಯ ಸುಧೀಂದ್ರನಗರದಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಶ್ರೀ ಮಧ್ವನವಮಿ ಪ್ರಯುಕ್ತ ಜನವರಿ 30 ರಿಂದ ಫೆಬ್ರವರಿ 6ರ ವರೆಗೆ ಪ್ರತಿದಿನ ಸಂಜೆ 6–30ಕ್ಕೆ ನಾಡಿನ ಹೆಸರಾಂತ ವಿದ್ವಾಂಸರುಗಳಿಂದ ಮಧ್ವ ಪ್ರವಚನ ಮಾಲಿಕೆಯನ್ನು ಏರ್ಪಡಿಸಿದ್ದು ಅವುಗಳ ವಿವರಗಳು ಈ ರೀತಿ ಇವೆ : ಜನವರಿ 30 – ಶ್ರೀ ಕಲ್ಲಾಪುರ ಪವಮಾನಾಚಾರ್. ವಿಷಯ : ಮಧ್ವಾಚಾರ್ಯರ ಸಂದೇಶಗಳು, ಜನವರಿ 31 – ಶ್ರೀ ಖೇಡಾ ಪ್ರಮೋದಾಚಾರ್. ವಿಷಯ : ಸದಾಚಾರ ಸ್ಮೃತಿ, ಫೆಬ್ರವರಿ 1 – ಶ್ರೀ ಅಂಬರೀಶಾಚಾರ್. ವಿಷಯ : ಹನುಮ–ಭೀಮ–ಮಧ್ವ, ಫೆಬ್ರವರಿ 2 – ಶ್ರೀ ಜಗನ್ನಾಥಾಚಾರ್. ವಿಷಯ : ಜಗದ್ಗುರು ಮಧ್ವರು, ಫೆಬ್ರವರಿ 3 – ಶ್ರೀ ಕಲ್ಯಾ ಶ್ರೀಕಾಂತಾಚಾರ್. ವಿಷಯ : ಹರಿವಾಯುಸ್ತುತಿ, ಫೆಬ್ರವರಿ 4 – ಶ್ರೀ ವೇಣುಗೋಪಾಲಾಚಾರ್ ಅಗ್ನಿಹೋತ್ರಿ. ವಿಷಯ : ಪಾಜಕ ಕ್ಷೇತ್ರ, ಫೆಬ್ರವರಿ 5 – ಶ್ರೀ ಚಿಮ್ಮಲಗಿ ಆಚಾರ್. ವಿಷಯ : ದ್ವಾದಶ ಸ್ತೋತ್ರ ಫೆಬ್ರವರಿ 6 – ಶ್ರೀ ರಾಮವಿಠಲಾಚಾರ್. ವಿಷಯ : ಸುಮಧ್ವ ವಿಜಯ.



# ಎಚ್ಚೆತ್ತುಕೊಳ್ಳದಿದ್ದರೆ ಈ ಬಾರಿ ಬೇಸಿಗೆಯಲ್ಲಿ ನೀರಿನ ತುರ್ತು ಪರಿಸ್ಥಿತಿ

• **ಉದಯವಾಹಿನಿ, ಬೆಂಗಳೂರು**

ಬೆಂಗಳೂರು ನೀರಿನ ಬಿಕ್ಕಟ್ಟಿನಲ್ಲಿ 'ತುರ್ತು' ಹಂತದಲ್ಲಿದೆ ಎಂದು ಜಲಶಾಸ್ತ್ರಜ್ಞರು ಹೇಳುತ್ತಿದ್ದಾರೆ, ನಗರದ ಅಂತರ್ಜಲ ಮತ್ತಷ್ಟು ಕುಸಿಯುವುದನ್ನು ತಪ್ಪಿಸಲು ತಕ್ಷಣದ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಎಚ್ಚರಿಸಿದ್ದಾರೆ.

ಫೆಬ್ರವರಿಯಲ್ಲಿ ಅಂತರ್ಜಲ ಮಟ್ಟ ಕುಸಿಯಲು ಪ್ರಾರಂಭವಾಗುವ ನಿರೀಕ್ಷೆಯಿದೆ ಮತ್ತು ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ ಪರಿಸ್ಥಿತಿ ತೀವ್ರಗೊಳ್ಳುತ್ತದೆ ಎಂದು ಭಾರತೀಯ ವಿಜ್ಞಾನ ಸಂಸ್ಥೆ ಮತ್ತು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇತ್ತೀಚಿನ ವರದಿ ತಿಳಿಸಿದೆ. ತಜ್ಞರು ಹಲವು ವರ್ಷಗಳಿಂದ ಈ ಸಂಬಂಧ ಎಚ್ಚರಿಕೆ ನೀಡುತ್ತಿದ್ದಾರೆ. ಹಲವಾರು ತಜ್ಞರ ಸಮಿತಿಗಳನ್ನು ರಚಿಸಿ ವಿವರವಾದ ಶಿಫಾರಸುಗಳನ್ನು ನೀಡಿದ್ದರೂ, ರಾಜ್ಯ ಸರ್ಕಾರವು ಅರ್ಥಪೂರ್ಣ ಕ್ರಮ ಕೈಗೊಳ್ಳಲು ವಿಫಲವಾಗಿದೆ. ಅಧ್ಯಯನದ ಪ್ರಕಾರ, ಬೆಂಗಳೂರಿನ ಕೊಳವೆ ಬಾವಿಗಳ ಮೇಲಿನ ಅವಲಂಬನೆಯು ದಿನಕ್ಕೆ ಸುಮಾರು 800 ಮಿಲಿಯನ್ ಲೀಟರ್ ಎಂದು ಅಂದಾಜಿಸಲಾಗಿದೆ. ಅಂತರ್ಜಲವನ್ನು ಬರಿದು ಮಾಡುವ ಅವೈಜ್ಞಾನಿಕ ಕೊಳವೆಬಾವಿ ಕೊರೆಯುವಿಕೆಯನ್ನು ನಿಲ್ಲಿಸುವ ಅಗತ್ಯವನ್ನು ತಜ್ಞರು ಒತ್ತಿ ಹೇಳಿದ್ದಾರೆ. ಅಸ್ತಿತ್ವದಲ್ಲಿರುವ ಕೊಳವೆಬಾವಿಗಳ ತಕ್ಷಣದ ಪುನರುಜ್ಜೀವನಕ್ಕೆ ಅವರು ಕರೆ ನೀಡುತ್ತಾರೆ. ಏಪ್ರಿಲ್, ಮೇ ತಿಂಗಳಲ್ಲಿ ಮಳೆಗಾಲಕ್ಕೆ ಮುಂಚಿತವಾಗಿ ಮಳೆನೀರು ಕೊಯ್ಲು ತಂತ್ರಗಳನ್ನು ಜಾರಿಗೆ ತರುವ ಅಗತ್ಯದ ಬಗ್ಗೆ ಹೇಳಿದ್ದಾರೆ. ನೀರಿನ ಕೊರತೆ ಕಡಿಮೆ ತೀವ್ರವಾಗಿದ್ದ ಸಮಯ ದಿಂದಲೂ – ಶಿಫಾರಸುಗಳು ಮತ್ತು ಎಚ್ಚರಿಕೆಗಳ ಹೊರತಾಗಿಯೂ – ರಾಜ್ಯ ಸರ್ಕಾರವು ಈ ತುರ್ತು ಕಾಳಜಿಗಳನ್ನು ತೆಗೆದುಕೊಳ್ಳಲು ವಿಫಲವಾಗಿದೆ ಎಂದು ಕ್ಯಾಪ್ಟನ್ ರಾಜಾ ರಾವ್ ಹೇಳಿದರು, ಪರಿಸ್ಥಿತಿಯನ್ನು ತುರ್ತು ಪರಿಸ್ಥಿತಿ ಎಂದು ಕರೆದರು.


ಉದಯವಾಹಿನಿ ಚಿತ್ರ

> **ನೀರಾವರಿ ಇಲಾಖೆಯ ಮಾಜಿ ಕಾರ್ಯದರ್ಶಿ ಮತ್ತು ಜಲ ತಜ್ಞ ಕ್ಯಾಪ್ಟನ್ ಎಸ್ ರಾಜಾ ರಾವ್, ಕರ್ನಾಟಕ ಸೇರಿದಂತೆ ದಕ್ಷಿಣ ರಾಜ್ಯಗಳು ಮಳೆನೀರಿನ ಮೇಲೆ ಅವಲಂಬಿಸಿವೆ. ರಾಜ್ಯವು ಸುಸ್ಥಿರವಲ್ಲದ ಮಟ್ಟದಲ್ಲಿ ಅಂತರ್ಜಲವನ್ನು ಹೊರತೆಗೆಯುತ್ತಿದೆ – ಮರುಪೂರಣ ಮಾಡುವುದಕ್ಕಿಂತ ಹೆಚ್ಚಿನದನ್ನು ಹೊರತೆಗೆಯುತ್ತಿದೆ ಎಂದು ತಿಳಿಸಿದ್ದಾರೆ.**

# ರಾಜ್ಯದ ಗ್ರಾಮೀಣ ಪತ್ರಕರ್ತರಿಗೆ ಗುಡ್ ನ್ಯೂಸ್

• **ಉದಯವಾಹಿನಿ, ಬೆಂಗಳೂರು**

ವಿದ್ಯುನ್ಮಾನ ಮತ್ತು ಮುದ್ರಣ ಮಾಧ್ಯಮ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮೀಣ ಪತ್ರಕರ್ತರಿಗೆ ವೃತ್ತಿ ಸಂಬಂಧಿತ ಚಟುವಟಿಕೆಗಳಿಗೆ ಜಿಲ್ಲಾ ವ್ಯಾಪ್ತಿಯಲ್ಲಿ ಪ್ರಯಾಣಿ ಸಲು ಉಚಿತ ಬಸ್ ಪಾಸ್ ಯೋಜನೆ ಗೆ ಅರ್ಹ ಪತ್ರಕರ್ತರಿಂದ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಮುಖ್ಯಮಂತ್ರಿಗಳು 2024–25 ನೇ ಸಾಲಿನ ಆಯವ್ಯಯದಲ್ಲಿ ಈ ಯೋಜನೆ ಘೋಷಿಸಿದ್ದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ವಿದ್ಯುನ್ಮಾನ ಅಥವಾ ಮುದ್ರಣ ಮಾಧ್ಯಮಗಳಲ್ಲಿ ಪೂರ್ಣಾವಧಿಗೆ ನೇಮಕಗೊಂಡು 4 ವರ್ಷಗಳ ಸೇವಾನುಭವ ಹೊಂದಿರುವ ಪತ್ರಕರ್ತರು ಅರ್ಜಿ ಸಲ್ಲಿಸಬಹುದು.ನೇಮಕಾತಿ ಆದೇಶ/ ವೇತನ ಪತ್ರ / ಬ್ಯಾಂಕ್ ಸ್ಟೇಟ್‌ಮೆಂಟ್ ಗಳಲ್ಲಿ ಯಾವುದಾದರೂ ದಾಖಲೆಗಳನ್ನು ಸೇವಾನುಭವಕ್ಕಾಗಿ ಒದಗಿಸಬೇಕು.

ಜಿಲ್ಲಾ ವ್ಯಾಪ್ತಿಯಲ್ಲಿ ಸಂಚರಿಸುವ ಕರ್ನಾಟಕ ಸಾರಿಗೆ ಸಂಸ್ಥೆ ಬಸ್ಸುಗಳಲ್ಲಿ ಜಿಲ್ಲಾ ವ್ಯಾಪ್ತಿಗೆ ಉಚಿತವಾಗಿ ಸಂಚರಿಸಬಹುದು ತಹಸೀಲ್ದಾರರಿಂದ ಪಡೆದ ವಾಸಸ್ಥಳ ಪ್ರಮಾಣ ಪತ್ರ ಒದಗಿಸಬೇಕು.

ರಾಜ್ಯ ಮಟ್ಟದ ಪತ್ರಿಕೆಗಳಲ್ಲಿ ಕಾರ್ಯ ನಿರ್ವಹಿಸುವ ವರದಿಗಾರರಿಗೆ ಪ್ರತಿ ತಾಲ್ಲೂಕಿಗೆ ಸಂಪಾದಕರು ಸೂಚಿಸುವ ಒಬ್ಬರಿಗೆ, ಜಿಲ್ಲಾ ಮಟ್ಟದ ಪತ್ರಿಕೆಗಳು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಒಬ್ಬರಿಗೆ, ಆರು ಪುಟಗಳಲ್ಲಿ ಪ್ರಕಟವಾಗುವ ಪ್ರಾದೇಶಿಕ ಪತ್ರಿಕೆಗಳು ಓರ್ವ ವರದಿಗಾರರು ಹಾಗೂ ಓರ್ವ ಫೋಟೋಗ್ರಾಫರ್ ಎಂಟು ಅಥವಾ ಹೆಚ್ಚು ಪುಟಗಳಲ್ಲಿ ಪ್ರಕಟವಾಗುವ ಪ್ರಾದೇಶಿಕ ಪತ್ರಿಕೆಗಳು ಇಬ್ಬರು ವರದಿಗಾರರು ಹಾಗೂ ಓರ್ವ ಫೋಟೋಗ್ರಾಫರ್‌ಗೆ ಬಸ್ ಪಾಸ್ ಪಡೆಯಲು ಅವಕಾಶವಿದೆ. ಉಪಗ್ರಹ ಆಧಾರಿತ ವಿದ್ಯುನ್ಮಾನ ವಾಹಿನಿಗಳ ವರದಿಗಾರರು ತಾಲೂಕು ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ. ರ್ತುನಿರ್ವಹಿಸುತ್ತಿದ್ದರೆ ಪ್ರತಿ ತಾಲ್ಲೂಕಿ ಗೆ ಓರ್ವ ಕ್ಯಾಮರಾಮ್ಯಾನ್ ಓರ್ವ ವರದಿಗಾರರು ಬಸ್ ಪಾಸ್ ಪಡೆಯಬಹುದಾಗಿದೆ. ದಿನಪತ್ರಿಕೆಗಳು ಉಪಗ್ರಹ ಸುದ್ದಿ ವಾಹಿನಿಗಳ ಸಂಪಾದಕರು ನೀಡುವ ನೇಮಕಾತಿ ಪತ್ರ ಶಿಫಾರಸ್ಸು ಆಧರಿಸಿ ಅರ್ಹ ಪತ್ರಕರಿಗೆ ಬಸ್ ಪಾಸ್‌ಗಳನ್ನು ನೀಡಲಾಗುವುದು.ಆಸಕ್ತ ಹಾಗೂ ಅರ್ಹ ಪತ್ರಕರ್ತರು ತಮ್ಮ ಸಮೀಪದ ಗ್ರಾಮ ಒನ್, ಕರ್ನಾಟಕ ಒನ್ ಅಥವಾ ಬೆಂಗಳೂರು ಒನ್ ಕೇಂದ್ರಗಳಿಗೆ ತೆರಳಿ ಸೇವಾಸಿಂಧು ಪೋರ್ಟಲ್ ನಲ್ಲಿ ಆನ್‌ಲೈನ್ ಮೂಲಕ ಅಗತ್ಯ ದಾಖಲೆಗಳನ್ನು ಅಪ್‌ಲೋಡ್ ಮಾಡಿ ಅರ್ಜಿ ಸಲ್ಲಿಸಬಹುದು.ಅಪ್‌ಲೋಡ್ ಮಾಡಿದ ದಾಖಲೆಗಳು ಹಾಗೂ ಆನ್ ಲೈನ್ ಅರ್ಜಿಯ ಮುದ್ರಿತ ಪ್ರತಿಯನ್ನು ತಮ್ಮ ಜಿಲ್ಲೆಯ ಜಿಲ್ಲಾ ವಾರ್ತಾಧಿಕಾರಿಗಳ ಕಚೇರಿಗೆ ಸ್ವಯಂ ದೃಢೀಕರಿಸಿ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.



# ಮುಡಾ ಕೇಸ್‌ನಲ್ಲಿ ನನಗೆ ಯಾವುದೇ ಆತಂಕವಿಲ್ಲ, ನ್ಯಾಯ ಸಿಗುವ ಭರವಸೆ ಇದೆ

• **ಉದಯವಾಹಿನಿ, ಬೆಂಗಳೂರು**

ಮುಡಾ ಹಗರಣಕ್ಕೆ ಸಂಬಂಧಪಟ್ಟಂತೆ ನಿನ್ನೆ ಹೈಕೋರ್ಟ್ ಸಿದ್ದರಾಮಯ್ಯ ಪತ್ನಿ ಪಾರ್ವತಿ, ಸಚಿವ ಬೈರತಿ ಸುರೇಶ್ ಅವರಿಗೆ ವಿಚಾರಣೆಗೆ ಹಾಜರಾಗಿ ಎಂದು ಜಾರಿ ನಿರ್ದೇಶನಾಲಯ ನೀಡಿದ ನೋಟಿಸ್ ಗೆ ಹೈಕೋರ್ಟ್ ತಡೆಯಾಜ್ಞೆ ನೀಡಿದೆ.ಈ ವಿಚಾರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಒಂದು ಪ್ರಕರಣದಲ್ಲಿ ನನಗೆ ನ್ಯಾಯ ಸಿಗುವ ಭರವಸೆ ಇದೆ ಎಂದು ತಿಳಿಸಿದರು.ಬೆಂಗಳೂರಿನ ವಿಧಾನಸೌಧದಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಮುಡಾ ಕೇಸ್ ನಲ್ಲಿ ಪತ್ನಿ ಪಾರ್ವತಿಗೆ ನೀಡಿದ್ದ ಸಮನ್ಸ್‌ಗೆ ತಡೆ ನೀಡಿದೆ. ಲೋಕಾಯುಕ್ತತನಕ್ಕೆ ನಡೆಯುತ್ತಿರುವಾಗ ಯಾಕೆ ಇಷ್ಟು ಆತುರ ಎಂದಿದೆ. ಜಾರಿ ನಿರ್ದೇಶನಲಯದ ಸಂಬಂಧಿಸಿದೆ ಹೈಕೋರ್ಟ್ ತಡೆಯಾಜ್ಞೆ ನೀಡಿದೆ. ನೀವು ಆತರ ಮಾಡುವುದರಲ್ಲಿ ಅರ್ಥವಿಲ್ಲವೆಂದು ಹೈಕೋರ್ಟ್ ತಡೆಯಾಜ್ಞೆ ನೀಡಿದೆ.ಸಿಬಿಐ ತನಿಖೆಗೆ ನೀಡಬೇಕೆ ಅಥವಾ ಬೇಡವೇ ಎಂದು ಚರ್ಚೆಯಾಗುತ್ತಿದೆ. ಹೈಕೋರ್ಟ್ ವಾದ ಪ್ರತಿವಾದವನ್ನು ಆಲಿಸಿ ತೀರ್ಪನ್ನು ಕಾಯ್ದಿರಿಸಿದೆ. ನನಗೆ ಈ ಒಂದು ಪ್ರಕರಣದಲ್ಲಿ ಯಾವುದೇ ಆತಂಕವಿಲ್ಲ ನ್ಯಾಯ ಸಿಗುವ ಭರವಸೆ ಇದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಗಳೂರಿನ ವಿಧಾನಸೌಧದಲ್ಲಿ ಮಾಧ್ಯಮ ಪ್ರತಿನಿಧಿಗಳು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದರು.

# ಅಧಿಕಾರ ದುರ್ಬಳಕೆ ಮಾಡಿಕೊಂಡ ಆರೋಗ್ಯ ವೈದ್ಯಾಧಿಕಾರಿ ಮೇಲೆ ಕ್ರಮಕ್ಕೆ ವಲಯ ಆಯುಕ್ತರಿಗೆ ದೂರು

• **ಉದಯವಾಹಿನಿ, ಬೆಂಗಳೂರು**

ಬಿಬಿಎಂಪಿ ವಲಯ ಆಯುಕ್ತರು (ಪೂರ್ವ) ರವರ ವ್ಯಾಪ್ತಿಯಲ್ಲಿ ವಿವೇಚನೆಯಲ್ಲಿ ಸ್ಥಳ ನಿಯೋಜನೆ ಮಾಡುತ್ತಾರೆ. ಅದರೇ ಆರೋಗ್ಯ ವೈದ್ಯಾಧಿಕಾರಿ ವಲಯ ಆಯುಕ್ತರ ಅಧಿಕಾರವನ್ನು ಮೊಟಕುಗೊಳಿಸಿ, ಹಿರಿಯ ಆರೋಗ್ಯ ಪರಿವೀಕ್ಷಕರನ್ನ ಸಿ.ವಿ.ರಾಮನ್ ನಗರದಿಂದ ಶಾಂತಿನಗರಕ್ಕೆ ನೇಮಿಸುತ್ತಾರೆ.

ಇದರ ಬಗ್ಗೆ ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳಬೇಕು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ವಲಯ ಆಯುಕ್ತರಿಗೆ ದೂರು ನೀಡಿದ್ದಾರೆ. ಮಂಜುನಾಥ್ ಹಿರಿಯ ಆರೋಗ್ಯ ಪರಿವೀಕ್ಷಕರನ್ನು ಕಾನೂನು ಬಾಹೀರವಾಗಿ ಆರೋಗ್ಯ ವೈದ್ಯಾಧಿಕಾರಿ ಶಾಂತಿನಗರ ವಲಯಕ್ಕೆ ನೇಮಿಸಿರುವುದನ್ನು ರದ್ದು ಪಡಿಸಲು ಮನವಿ.

ಮಂಜುನಾಥ್ ರವರು ಹಿರಿಯ ಆರೋಗ್ಯ ಪರಿವೀಕ್ಷಕರು ಆರೋಗ್ಯ ವೈದ್ಯಾಧಿಕಾರಿ ಸಿ.ವಿ.ರಾಮನಗರ ವಲಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಸದರಿ ರವರನ್ನು ಕಾನೂನು ಬಾಹೀರವಾಗಿ ಆರೋಗ್ಯ ವೈದ್ಯಾಧಿಕಾರಿ ಶಾಂತಿನಗರ ವಲಯಕ್ಕೆ ನೇಮಿಸಿ ಮಾನ್ಯ ವಲಯ ಆಯುಕ್ತರು ರವರ ಅಧಿಕಾರ ಪ್ರತ್ಯೋಜನೆಯನ್ನು ದುರುಪಯೋಗ ಪಡಿಸಿಕೊಂಡು ಮಂಜುನಾಥ್ ಹಿರಿಯ ಆರೋಗ್ಯ ಪರಿವೀಕ್ಷಕರನ್ನು ನೇಮಿಸಲು ಶಿಫಾರಸ್ಸು ಮಾಡಿರುವ ಆರೋಗ್ಯ ವೈದ್ಯಾಧಿಕಾರಿ ವಿರುದ್ಧ ಕಾನೂನು ರೀತಿ ಶಿಸ್ತುಕ್ರಮ ಜರುಗಿಸಿ ಶ್ರೀ.ಮಂಜುನಾಥ್ ರವರನ್ನು ಆರೋಗ್ಯ ವೈದ್ಯಾಧಿಕಾರಿ ಶಾಂತಿನಗರ ವಲಯಕ್ಕೆ ನಿಯೋಜಿಸಿರುವುದನ್ನು ರದ್ದು ಪಡಿಸಲು ಈ ಮೂಲಕ ಕೋರಲಾಗಿದೆ.

ಹಾಗೂ ವರ್ಗಾವಣೆ ಆದೇಶವನ್ನು ಕಾನೂನು ಬಾಹೀರವಾಗಿ ಆದೇಶ ಹೊರಡಿಸಿರುವ ಆರೋಗ್ಯ ವೈದ್ಯಾಧಿಕಾರಿ ವಿರುದ್ಧ ಶಿಸ್ತುಕ್ರಮ ಜರುಗಿಸಲು ಈ ಮೂಲಕ ಕೋರಲಾಗಿದೆ.


ಉದಯವಾಹಿನಿ ಚಿತ್ರ

# ಬೆಂಗಳೂರಲ್ಲಿ ಪ್ರಾಣಿವಧೆ, ಮಾಂಸ ಮಾರಾಟ ನಿಷೇಧ

• **ಉದಯವಾಹಿನಿ, ಬೆಂಗಳೂರು**

ಜನವರಿ 30, 2025ರಂದು ಸರ್ವೋದಯ ದಿನದ ಪ್ರಯುಕ್ತ ಬೆಂಗಳೂರಲ್ಲಿ ಪ್ರಾಣಿವಧೆ ಹಾಗೂ ಮಾಂಸ ಮಾರಾಟ ನಿಷೇಧಿಸಿ ಬಿಬಿಎಂಪಿ ಆದೇಶಿಸಿದೆ.ದಿನಾಂಕ: 30–01–2025 ಗುರುವಾರದಂದು ಸರ್ವೋದಯ ದಿನ ದ ಪ್ರಯುಕ್ತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕಸಾಯಿಖಾನೆಯಲ್ಲಿ ಪ್ರಾಣಿವಧೆ ಹಾಗೂ ಮಾರಾಟ ಮಳಿಗೆಗಳಲ್ಲಿ ಮಾಂಸ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಜಂಟಿ ನಿರ್ದೇಶಕರು(ಪಶುಪಾಲನೆ) ರವರು ತಿಳಿಸಿದ್ದಾರೆ

# ವಿದ್ಯುತ್ ಟ್ರಾನ್ಸ್‌ಫಾರ್ಮರ್ ಸಮಸ್ಯೆ ಇದ್ದರೆ ಈ ನಂಬರ್‌ಗೆ ಕರೆ ಮಾಡಿ

• **ಉದಯವಾಹಿನಿ, ಬೆಂಗಳೂರು**

ರಾಜ್ಯದಲ್ಲಿ ವಿದ್ಯುತ್ ಪರಿವರ್ತಕಗಳಿಗೆ ಕೊರತೆ ಇಲ್ಲ.ವಿದ್ಯುತ್ ಪರಿವರ್ತಕಗಳ ಬ್ಯಾಂಕ್ ಸ್ಥಾಪನೆ ಮಾಡಿ ದಾಸ್ತಾನು ಮಾಡಲಾಗಿದೆ ಎಂದು ಇಂಧನ ಸಚಿವರಾದ ಕೆ.ಜೆ ಜಾರ್ಜ್ ತಿಳಿಸಿದ್ದಾರೆ. ಈ ಕುರಿತು ಮಾಹಿತಿ ನೀಡಿರುವ ಸಚಿವರು, ಸಮಸ್ಯೆ ಉಂಟಾದಲ್ಲಿ ಟೋಲ್ ಫ್ರೀ ನಂಬರ್ 1912ಗೆ ಕರೆ ಮಾಡಿದಲ್ಲಿ ಕರೆ ರೆಕಾರ್ಡ್ ಆಗಲಿದೆ. 72 ಗಂಟೆಗಳೊಳಗೆ ವಿದ್ಯುತ್ ಪರಿವರ್ತಕಗಳ ಅಳವಡಿಕೆಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು. ರಾಜ್ಯದಲ್ಲಿ ದಿನೇದಿನೆ ವಿದ್ಯುತ್ ಬೇಡಿಕೆ ಹೆಚ್ಚಾಗುತ್ತಿದೆ. ಪ್ರತಿ ದಿನ 17,500 ಮೆಗಾವ್ಯಾಟ್ ವಿದ್ಯುತ್ ಬೇಡಿಕೆ ಇದೆ. ವಿದ್ಯುತ್ ಸಮರ್ಪಕ ಪೂರೈಕೆ ಹಿನ್ನೆಲೆಯಲ್ಲಿ ಕುಸುಮ್ ಬಿ ಹಾಗೂ ಕುಸುಮ್ ಸಿ ಯೋಜನೆಯಡಿ ಸೌರ ವಿದ್ಯುತ್ ಉತ್ಪಾದಿಸಲು ಖಾಸಗಿ ಸಹಭಾಗಿತ್ವದಲ್ಲಿ ಸೌರ ವಿದ್ಯುತ್ ಉತ್ಪಾದನೆ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

# ಸ್ಟ್ರಕ್ಚರಲ್ ಸ್ಟೀಲ್ ವಿಭಾಗದಲ್ಲಿ ತನ್ನ ಮಾರುಕಟ್ಟೆ ಪಾಲನ್ನು ಪುನಃ ಬಲಪಡಿಸಲು ಕಾಮಧೇನು ಲಿಮಿಟೆಡ್

• **ಉದಯವಾಹಿನಿ, ಬೆಂಗಳೂರು**

ಚಿಲ್ಲರೆ ವ್ಯಾಪಾರದಲ್ಲಿ ಬ್ರ್ಯಾಂಡೆಡ್ ಟಿಎಂಟಿ ಬಾರ್‌ಗಳ ಭಾರತದ ಅತಿದೊಡ್ಡ ತಯಾರಕ, ಮಾರಾಟಗಾರ ಕಾಮಧೇನು ಲಿಮಿಟೆಡ್, ಕರ್ನಾಟಕದಲ್ಲಿ ರಚನಾತ್ಮಕ ಉಕ್ಕಿನ ವಿಭಾಗದ ಮಾರುಕಟ್ಟೆ ಪಾಲನ್ನು ಹೆಚ್ಚಿಸಲು ತನ್ನ ವ್ಯಾಪಾರ ತಂತ್ರವನ್ನು ಪ್ರಕಟಿಸಿದೆ. ಕಾರ್ಯತಂತ್ರದ ಪ್ರಕಾರ, ಕಂಪನಿಯು ರಾಜ್ಯದಲ್ಲಿ ತನ್ನ ರಚನಾತ್ಮಕ ಉಕ್ಕು ಮತ್ತು ಪೈಪ್‌ಗಳ ಉತ್ಪಾದನಾ ಸಾಮರ್ಥ್ಯವನ್ನು ಒಂದು ವರ್ಷದಲ್ಲಿ 05% ರಷ್ಟು ಹೆಚ್ಚಿಸಲು ಯೋಜಿಸುತ್ತಿದೆ. ಕಾಮಧೇನು ಗ್ರಾಹಕರಿಗೆ ಕೈಗೆಟಕುವ ಬೆಲೆಯಲ್ಲಿ ಉತ್ತಮ ಗುಣಮಟ್ಟದ ನಿರ್ಮಾಣ ಸಾಮಗ್ರಿಗಳ ತಯಾರಕ ಮತ್ತು ಪೂರೈಕೆದಾರನಾಗಿ ಹೆಸರು ಮಾಡಿದೆ.

ಇದಲ್ಲದೆ, ಕಂಪನಿಯು ಮುಂದಿನ ಒಂದು ವರ್ಷದಲ್ಲಿ 10% ಹೆಚ್ಚಿನ ವಿತರಕರು ಮತ್ತು ವಿತರಕರನ್ನು ಸೇರಿಸುವ ಮೂಲಕ ರಾಜ್ಯದಲ್ಲಿ ತನ್ನ ಡೀಲರ್ ಮತ್ತು ವಿತರಕರ ಜಾಲವನ್ನು ಬಲಪಡಿಸಲು ಯೋಜಿಸುತ್ತಿದೆ. ಪ್ರಸ್ತುತ, ಕಂಪನಿಯು ಈಗಾಗಲೇ ರಾಜ್ಯದಲ್ಲಿ ತನ್ನ ಸ್ಟ್ರಕ್ಚರಲ್ ಸ್ಟೀಲ್ ವಿಭಾಗಕ್ಕೆ ಡೀಲರ್ ಮತ್ತು ವಿತರಕರ ಬಲವಾದ ಜಾಲವನ್ನು ಹೊಂದಿದೆ.

ಕಾಮಧೇನು ಲಿಮಿಟೆಡ್‌ನ ನಿರ್ದೇಶಕರಾದ ಶ್ರೀ ಸುನಿಲ್ ಅಗರ್‌ವಾಲ್ ಅವರು ಮಾತನಾಡಿ, ''ಕರ್ನಾಟಕವು ಮೂಲಸೌಕರ್ಯ ಮತ್ತು ನಿರ್ಮಾಣ ಉದ್ಯಮದ ಅಭಿವೃದ್ಧಿಗೆ ಹೆಚ್ಚಿನ ಸಾಮರ್ಥ್ಯವನ್ನು ಒದಗಿಸುವ ಕಾಮಧೇನು ಲಿಮಿಟೆಡ್‌ನ ಬೆಳವಣಿಗೆಗೆ ಪ್ರಮುಖ ಮಾರುಕಟ್ಟೆಯಾಗಿದೆ.

ಉದಯವಾಹಿನಿ ಚಿತ್ರ

# ವಿಜಯೇಂದ್ರ–ಯತ್ನಾಳ್ ಮಧ್ಯೆ ಸವಾಲ್ ಪ್ರತಿ ಸವಾಲ್

• **ಉದಯವಾಹಿನಿ, ಬೆಂಗಳೂರು**

ಕೋರ್ ಕಮಿಟಿ ಸಭೆಯ ಹಂಗಾಮಾ ನಂತರ ಬಿಜೆಪಿಯಲ್ಲಿ ಗೋಜಲು ಹೆಚ್ಚಾಗಿದೆ. ನಾಯಕರ ನಡುವೆ ಅಂತರವೂ ಹೆಚ್ಚಾಗಿದೆ. ಎಲ್ಲರೂ ರಾಜ್ಯಾಧ್ಯಕ್ಷ ಚುನಾವಣೆಗೆ ಹೈಕಮಾಂಡ್ ಯಾವ ಸೂತ್ರ ಕಳಿಸಲಿದೆಯೋ ಎಂದು ಕಾಯುತ್ತಿದ್ದಾರೆ.

ಇತ್ತ ರೆಡ್ಡಿ ಜತೆ ವಾಕ್ಸಮರ ಬಳಿಕ ಶ್ರೀರಾಮುಲು ಅತ್ತ ರಾಜ್ಯ ನಾಯಕರ ಭೇಟಿಯೂ ಮಾಡದೇ, ದೆಹಲಿಗೂ ಹೋಗದೇ ಅಚ್ಚರಿ ಹುಟ್ಟಿಸಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ಚುನಾವಣೆಗೆ ದಿನಗಣನೆ ಶುರುವಾಗಿದೆ. ಈಗಾಗಲೇ ಚುನಾವಣೆ ಸಂಬಂಧ ರಾಜ್ಯ ಬಿಜೆಪಿ ಶಾಸಕರು, ಸಂಸದರು, ಮಾಜಿಗಳ ಅಭಿಪ್ರಾಯ ಸಂಗ್ರಹಿಸಿರುವ ಹೈಕಮಾಂಡ್ ಸದ್ಯದಲ್ಲೇ ಮಹತ್ವದ ಸಂದೇಶ ಕಳಿಸಲಿದ್ದಾರಂತೆ. ರಾಜ್ಯಾಧ್ಯಕ್ಷ ಚುನಾವಣೆಗೆ ಸಹಮತ ಸೂತ್ರ ರೆಡಿ ಮಾಡಿರುವ ಹೈಕಮಾಂಡ್, ಚುನಾವಣಾ ಉಸ್ತುವಾರಿ ಶಿವರಾಜ್ ಸಿಂಗ್ ಚೌಹಾಣ್ ಮೂಲಕ ಕಳಿಸಿಕೊಡಲಿದೆ. ರಾಜ್ಯಾಧ್ಯಕ್ಷ ಆಯ್ಕೆ ಸಂದರ್ಭದಲ್ಲೇ ಕೋರ್ ಕಮಿಟಿ ರಾಜ್ಯ ಪದಾಧಿಕಾರಿ ಪಟ್ಟಿಯಲ್ಲಿ ಯತ್ನಾಳ್ ಟೀಮ್ ಸದಸ್ಯರಿಗೂ ಸ್ಥಾನ ಕೊಡಲು ಹೈಕಮಾಂಡ್ ಸೂತ್ರವೊಂದನ್ನು ರೆಡಿ ಮಾಡಿದೆ ಎನ್ನಲಾಗಿದೆ. ಈ ಮೂಲಕ ಬಿಜೆಪಿ ಮನೆ ಗೊಂದಲಕ್ಕೆ ತೆರೆ ಎಳೆಯುವ ಲೆಕ್ಕಾಚಾರ. ಇತ್ತ ವಿಜಯೇಂದ್ರ ವಿರುದ್ಧ ಸ್ಪರ್ಧೆಗೆ ಯತ್ನಾಳ್ ಭರ್ಜರಿ ತಯಾರಿ ನಡೆಸ್ತಿದ್ದಾರೆ.

ತಮ್ಮ ಸ್ಪರ್ಧೆ ಖಚಿತ, ಜಯ ನಿಶ್ಚಿತ ಎಂದಿರುವ ಯತ್ನಾಳ್, ಚುನಾವಣೆ ನಡೆದರೆ ವಿಜಯೇದ್ರ ಸೋಲಿಸುವ ಉಮೇದಿ ನಲ್ಲಿದ್ದಾರೆ. ವಿಜಯೇಂದ್ರ ಸಹ ತಾವೂ ಎಲ್ಲದಕ್ಕೂ ಸಿದ್ಧ ಎನ್ನುವ ಕೌಂಟರ್ ಕೊಟ್ಟಿದ್ದಾರೆ. ಮಾಜಿ ಸಂಸದ ಶ್ರೀರಾಮುಲು ಇಷ್ಟು ದಿನ ಬಳ್ಳಾರಿಯಲ್ಲಿದ್ದವರು, ಬೆಳಗ್ಗೆ ಬೆಂಗಳೂರಿಗೆ ಬಂದಿದ್ದರು. ಬೆಂಗಳೂರಿನಲ್ಲಿ ಕೋರ್ಟ್ ಕೆಲಸಕ್ಕೆ ಬಂದಿದ್ದವರು ಕೆಲಸ ಮುಗಿಸಿ ತಕ್ಷಣ ಬಳ್ಳಾರಿಗೆ ವಾಪಸ್ ಹೊರಟರು. ಬೆಂಗಳೂರಿಗೆ ಬಂದಿದ್ರೂ ಯಾರ ಕಣ್ಣಿಗೂ ರಾಮುಲು ಕಾಣಿಸಿಕೊಳ್ಳಲಿಲ್ಲ. ಯಾವ ರಾಜ್ಯ ನಾಯಕರ ಭೇಟಿಯೂ ಮಾಡಲಿಲ್ಲ.



# ಏ.4ರಿಂದ 14ರವರೆಗೆ ಬೆಂಗಳೂರು ಕರಗ ಮಹೋತ್ಸವ

• **ಉದಯವಾಹಿನಿ, ಬೆಂಗಳೂರು**

ವಿಶ್ವವಿಖ್ಯಾತ ಬೆಂಗಳೂರು ಕರಗ ಮಹೋತ್ಸವಕ್ಕೆ ಡೇಟ್ ಫಿಕ್ಸ್ ಆಗಿದೆ. ಏಪ್ರಿಲ್ 4 ರಿಂದ 14ರವರೆಗೆ ದ್ರೌಪತಮ್ಮ ಶಕ್ತ್ಯೋತ್ಸವ ಹನ್ನೊಂದು ದಿನಗಳ ಕಾಲ ನಡೆಯಲಿದೆ. ಇನ್ನು ಈ ಬಾರಿಯೂ ಕರಗದ ಪೂಜಾರಿ ಎ.ಜ್ಞಾನೇಂದ್ರ ಕರಗವನ್ನು ಹೊರಲಿದ್ದಾರೆ. ಕಳೆದ 14 ವರ್ಷಗಳಿಂದ ಸತತವಾಗಿ ಬೆಂಗಳೂರು ಕರಗವನ್ನು ಪೂಜಾರಿ ಎ.ಜ್ಞಾನೇಂದ್ರ ಹೊರುತ್ತಿದ್ದಾರೆ. ಈ ಬಾರಿ ಕರಗ ಹೊತ್ತರೇ 15ನೇ ಬಾರಿ ಕರಗ ಹೊತ್ತಂತೆ ಆಗುತ್ತದೆ. ಜ.27ರಂದು ರಾತ್ರಿ ನಡೆದ ಸಭೆಯಲ್ಲಿ ಜ್ಞಾನೇಂದ್ರ ಸ್ವಾಮಿಯನ್ನು ಮತ್ತೆ ಕರಗ ಹೊರಲು ಆಯ್ಕೆ ಮಾಡಲಾಗಿದೆ. ಸಭೆಯಲ್ಲಿ ಮುಜರಾಯಿ ಇಲಾಖೆಯ ಕಾರ್ಯ ನಿರ್ವಾಹಣಾಧಿಕಾರಿ ನವೀನ್, ಧರ್ಮರಾಯ ಸ್ವಾಮಿ ದೇವಾಲಯದ ಆಡಳಿತ ಮಂಡಳಿಯ ಅಧ್ಯಕ್ಷ ಸತೀಶ್, ಖಜಾಂಚಿ ಜಿ.ಬಾಲಕೃಷ್ಣ, ವ್ಯವಸ್ಥಾಪನಾ ಸಮಿತಿ ಸದಸ್ಯ ಅಮರನಾರಾಯಣ್ ಸಭೆ ನಡೆಸಿ ದಿ. ಕರಗ ಹೊರುವವರನ್ನು ಆಯ್ಕೆ ಮಾಡಿದ್ದಾರೆ.

# ಶೀಘ್ರವೇ ಬೆಂಗಳೂರಲ್ಲಿ ಕಾವೇರಿ ನೀರಿನ ದರ ಹೆಚ್ಚಳ: ಡಿಸಿಎಂ

## ನಗರದ ಕಾವೇರಿ ಭವನದಲ್ಲಿ ಬಿಬಿಎಂಪಿ, ಬಿಡಿಎ, ಬಿಡಬ್ಲ್ಯೂಎಸ್‌ಎಸ್ ಬಿ, ಬಿಎಂಆರ್‌ಡಿಎ ಅಧಿಕಾರಿಗಳ ಜತೆ ಸಭೆ


• **ಉದಯವಾಹಿನಿ, ಬೆಂಗಳೂರು**

ಕುಡಿಯುವ ನೀರಿನ ಬೆಲೆ ಹೆಚ್ಚಳದ ಬಗ್ಗೆ ವರದಿ ನೀಡಲು ಸೂಚನೆ ನೀಡಲಾಗಿದೆ. ವರದಿ ನೀಡಿದ ತಕ್ಷಣ ಅನುಷ್ಠಾನಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು. ನೀರಿನ ಅಕ್ರಮ ಸಂಪರ್ಕಗಳ ಸಕ್ರಮೀಕರಣ, ನೀರಿನ ಸಂಪರ್ಕ ಹಾಗೂ ಬಳಕೆಯ ನಿಖರವಾದ ಲೆಕ್ಕವನ್ನು ಪಡೆಯಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಹೇಳಿದರು.

ನಗರದ ಕಾವೇರಿ ಭವನದಲ್ಲಿ ಬಿಬಿಎಂಪಿ, ಬಿಡಿಎ, ಬಿಡಬ್ಲ್ಯೂ ಎಸ್‌ಎಸ್ ಬಿ, ಬಿಎಂ ಆರ್ ಡಿ ಎ ಅಧಿಕಾರಿಗಳ ಜತೆ ಮಂಗಳವಾರ ಸಭೆ ನಡೆಸಿದ ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆದ ಡಿ.ಕೆ. ಶಿವಕುಮಾರ್. ಅವರು, ನಂತರ ಮಾಧ್ಯಮಗಳನ್ನು ಉದ್ದೇಶಿಸಿ ಮಾತನಾಡಿದರು.2014 ರಿಂದ ಇಲ್ಲಿಯ ತನಕ ಅಂದರೆ 11 ವರ್ಷಗಳಿಂದ ನಗರದಲ್ಲಿ ನೀರಿನ ಬಿಲ್ ಅನ್ನು ಹೆಚ್ಚಳ ಮಾಡಿಲ್ಲ. ಈ ಕಾರಣಕ್ಕೆ ಬಿಡೋ ಎಸ್‌ಎಸ್ ಬಿಗೆ ವರ್ಷಕ್ಕೆ 1 ಸಾವಿರ ಕೋಟಿ ನಷ್ಟವಾಗುತ್ತಿದೆ. ವಿದ್ಯುತ್ ಬಿಲ್ ಈ ಹಿಂದೆ 35 ಕೋಟಿಯಾಗುತ್ತಿತ್ತು. ಈ ಬಾರಿ 75 ಕೋಟಿಯಾಗಿದೆ. ಇತರೇ ಸೇವೆಗಳು, ಮಾನವ ಸಂಪನ್ಮೂಲ ವೆಚ್ಚ ಸೇರಿದಂತೆ ತಿಂಗಳಿಗೆ 85 ಕೋಟಿ ಹಣ ನಷ್ಟವಾಗುತ್ತಿದೆ ಎಂದರು. ಈ ಹಿಂದೆ ಕೊಳೆಗೇರಿ ಹಾಗೂ ಬಡವರ ಉಪಯೋಗಕ್ಕೆ ಸರ್ಕಾರ ರೂ.20 ಕೋಟಿ ಹಣ ಮೀಸಲಿಟ್ಟಿತ್ತು. ಹಿಂದಿನ ಬಿಜೆಪಿ ಸರ್ಕಾರ ಈ ಸಹಾಯಧನವನ್ನು ನಿಲ್ಲಿಸಿತ್ತು. ಇದನ್ನು ಮುಂದುವರೆಸಲಾಗುವುದು. ಬಡವರಿಗೆ ನೀರು ನೀಡಿದರೂ ಸಹ ಅದು ಕೂಡ ಲೆಕ್ಕಕ್ಕೆ ಸಿಗಬೇಕು. 1 ಪೈಸೆ ಹಣ ನೀಡಿಯಾದರೂ ಸಂಪರ್ಕ ನೀಡಬೇಕು.

ಯಾರು ಎಷ್ಟು ನೀರು ಪಡೆಯುತ್ತಿದ್ದಾರೆ ಎನ್ನುವ ಲೆಕ್ಕ ಸರ್ಕಾರಕ್ಕೆ ಸಿಗಬೇಕು. ಅನೇಕ ಕಡೆ ಕೊಳೆಗೇರಿ ಹೆಸರಿನಲ್ಲಿ ಉಳ್ಳವರು ನೀರು ಪಡೆಯುತ್ತಿದ್ದಾರೆ ಎಂದರು. ಬಿಬಿಎಂಪಿ ವ್ಯಾಪ್ತಿಯಲ್ಲಿ ಎಲ್ಲರನ್ನು ಒಳಗೊಂಡಿರುವ ತೆರಿಗೆ ಪಾವತಿಗೆ ವ್ಯವಸ್ಥೆ ರೂಪಿಸಿರುವ ಮಾದರಿಯಲ್ಲಿ ನೀರಿನ ಸಂಪರ್ಕ, ಬಳಕೆಯಾಗುವ ನೀರಿನ ಬಗ್ಗೆ ನಿಖರ ಮಾಹಿತಿ ಸಿಗಬೇಕು ಎಂದು ಯೋಜನೆ ರೂಪಿಸಲಾಗಿದೆ. ಬಡವರು, ಶ್ರೀಮಂತರು, ವಸತಿ ಸಮುಚ್ಚಯಗಳು ಹೀಗೆ ಪ್ರತಿಯೊಂದು ಲೆಕ್ಕವೂ ಸಿಗಬೇಕು. ಸಾರ್ವಜನಿಕರು ಕೊಂಚವಾದರೂ ಹಣ ಪಾವತಿ ಮಾಡಿ ನೀರಿನ ಸಂಪರ್ಕ ಪಡೆಯಬೇಕು. ಅಕ್ರಮ ಸಂಪರ್ಕ ಪಡೆದಿರುವವರು ಸಕ್ರಮ ಮಾಡಿಕೊಳ್ಳಬೇಕು. ಬಿಡೋ ಎಸ್ ಎಸ್ ಬಿ ಉಳಿವಿಗೆ ಮತ್ತು ಎಲ್ಲರಿಗೂ ನೀರನ್ನು ಒದಗಿಸಿಕೊಡಲು ನಾವು ತೀರ್ಮಾನ ಮಾಡಬೇಕಿದೆ ಎಂದು ಮನವಿ ಮಾಡಿದರು. ಬೇಸಿಗೆಗೆ ಈಗಿನಿಂದಲೇ ತಯಾರಿಮುಂಬರುವ ಬೇಸಿಗೆ ವೇಳೆಗೆ ಬೆಂಗಳೂರಿನಲ್ಲಿ ಕುಡಿಯುವ ನೀರಿಗೆ ಯಾವುದೇ ರೀತಿಯ ಸಮಸ್ಯೆ ಉಂಟಾಗಬಾರದು ಎನ್ನುವ ಸೂಚನೆ ನೀಡಲಾಗಿದೆ. ಜೊತೆಗೆ ಅಂತರ್ಜಲ ಹೆಚ್ಚಳಕ್ಕೆ ಯಾವುದಾದರೂ ಕೆರೆ ತುಂಬಿಸಬೇಕಿದ್ದರೆ ಈ ಕುರಿತು ಶೀಘ್ರ ಕ್ರಮ ತೆಗೆದುಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ' ಎಂದು ತಿಳಿಸಿದರು.ಕಾವೇರಿ 5 ನೇ ಹಂತದ ಕುಡಿಯುವ ನೀರಿನ ಯೋಜನೆಯಡಿ ಇದುವರೆಗೂ ಸುಮಾರು 15 ಸಾವಿರ ಹೊಸ ಸಂಪರ್ಕಗಳನ್ನು ನೀಡಲಾಗಿದೆ. ಇನ್ನೂ 20 ಸಾವಿರದಷ್ಟು ನೀರಿನ ಸಂಪರ್ಕಗಳನ್ನು ನೀಡಬೇಕಾಗಿದೆ. ಅಲ್ಲದೇ ಸಾಕಷ್ಟು ವಸತಿ ಸಮುಚ್ಚಯಗಳು ನೀರಿನ ಸಂಪರ್ಕಗಳನ್ನು ತೆಗೆದುಕೊಳ್ಳುತ್ತಿಲ್ಲ.

ಅವರೆಲ್ಲಾ ಕಡ್ಡಾಯವಾಗಿ ಸಂಪರ್ಕ ತೆಗೆದುಕೊಳ್ಳಬೇಕು ಎಂದು ಸೂಚನೆ ನೀಡಲಾಗಿದೆ ಎಂದರು.



**ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿಕೆ**

> **ನೀರಿನ ಬಿಲ್ ಹೆಚ್ಚಳ ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ. ಈ ಕಾರಣಕ್ಕೆ ನಗರದ ಎಲ್ಲಾ ಶಾಸಕರ ಬಳಿ ಹೋಗಿ ಮಂಡಳಿಯವರು ಚರ್ಚೆ ನಡೆಸಿದ್ದಾರೆ. ಅಲ್ಲದೇ ನೀರಿನ ಜಾಲ ವಿಸ್ತರಣೆ ಮಾಡುವ ಸಲುವಾಗಿ ಅನೇಕ ಬ್ಯಾಂಕ್‌ಗಳ ಬಳಿ ಸಾಲ ಕೇಳಲೂ ಆಗುತ್ತಿಲ್ಲ.**

> **ಸಾರ್ವಜನಿಕರ ಉಪಯೋಗಕ್ಕೆ ಸರ್ಕಾರ ಹಣ ಖರ್ಚು ಮಾಡಿದೆ. ಅನೇಕ ಕಡೆ ಸೇವಾ ಶುಲ್ಕ, ಕೇವಣಿ ಶುಲ್ಕ ಸೇರಿದಂತೆ ಇತರೇ ಶುಲ್ಕಗಳನ್ನು ಕಟ್ಟಬೇಕು ಎಂದು ಅಕ್ರಮವಾಗಿ ಸಂಪರ್ಕ ಪಡೆದಿದ್ದಾರೆ. ಇದನ್ನು ತಡೆಯಲು ಸರ್ಕಾರ ಈಗಾಗಲೇ ಕಠಿಣ ಕ್ರಮ ತೆಗೆದುಕೊಂಡಿದೆ. ಪ್ರತಿಯೊಂದು ಮನೆ, ವಸತಿ ಸಮುಚ್ಚಯಕ್ಕೆ ಹೋಗಿ ಜನರಿಗೆ ತಿಳುವಳಿಕೆ ಮೂಡಿಸಿ ನೀರಿನ ಸಂಪರ್ಕ ಪಡೆದುಕೊಳ್ಳುವಂತೆ ಮನವಿ ಮಾಡಲು ಸೂಚನೆ ನೀಡಿದ್ದೇನೆ ಎಂದು ಹೇಳಿದರು.**

ಅಂತರಾಳದಿಂದ...
EDITORIAL

# ಧ್ವನಿವರ್ಧಕಗಳಿಂದ ಆಗುವ ಮಾಲಿನ್ಯ ಗೊಂದಲ ಪರಿಹರಿಸಿದ ಕೋರ್ಟ್ ಆದೇಶ



ಧ್ವನಿವರ್ಧಕಗಳ ಬಳಕೆಯು ಯಾವುದೇ ಧರ್ಮದ ಅತ್ಯಗತ್ಯ ಆಚರಣೆಗಳ ಭಾಗ ಅಲ್ಲ ಎಂದು ಬಾಂಬೆ ಹೈಕೋರ್ಟ್ ಆದೇಶಿಸಿದೆ. ಕಿವಿಗಡಚಿಕ್ಕುವ ಶಬ್ದದಿಂದ ಮುಕ್ತವಾಗಿ ಬದುಕುವ ಹಕ್ಕು ಜನಸಾಮಾನ್ಯರಿಗೆ ಇದೆ ಎಂಬುದನ್ನು ಕೋರ್ಟ್ ಈ ಆದೇಶದ ಮೂಲಕ ಸ್ಪಷ್ಟಪಡಿಸಿದೆ.

ದಿನ ನಿತ್ಯದ ಬದುಕಿನಲ್ಲಿ ಗದ್ದಲ ಹೆಚ್ಚಾಗಿದೆ, ಗದ್ದಲವು ಧಾರ್ಮಿಕ ಸ್ಥಳಗಳಲ್ಲಿ ನಡೆಯುವ ಆಜಾನ್, ಭಜನೆಗೆ ಧ್ವನಿವರ್ಧಕ ಬಳಸುತ್ತಿರುವ ಕಾರಣದಿಂದಾಗಿಯೂ ಹೆಚ್ಚಾಗಿದೆ. ಇವೆಲ್ಲವನ್ನೂ ಧಾರ್ಮಿಕವಾಗಿ ಅಗತ್ಯವಾಗಿರುವ ಆಚರಣೆಗಳು ಎಂಬ ಹೆಸರಿನಲ್ಲಿ ಸಮರ್ಥಿಸಿಕೊಳ್ಳಲಾಗುತ್ತಿದೆ. ಆದರೆ, ಮುಂಬೈನ ನಿವಾಸಿಗಳು ಸಲ್ಲಿಸಿದ್ದ ಎರಡು ಅರ್ಜಿಗಳ ವಿಚಾರಣೆ ನಡೆಸಿದ ಹೈಕೋರ್ಟ್ ಈ ವಾದವನ್ನು ತಳ್ಳಿಹಾಕಿದೆ. ಸನಿಹದ ಮಸೀದಿಯ

> **ಧ್ವನಿವರ್ಧಕಗಳು ಆಧುನಿಕ ಜಗತ್ತಿನ ಅನ್ವೇಷಣೆ. ಅವುಗಳ ಬಳಕೆಯು ಧಾರ್ಮಿಕ ಸ್ಥಳಗಳಲ್ಲಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ವ್ಯಾಪಕವಾಗಿರುವುದು ಕೆಲವು ದಶಕಗಳ ಈಚಿನ ಬೆಳವಣಿಗೆ. ಅವು ಶತಮಾನಗಳಷ್ಟು ಹಳೆಯದಾದ ಧರ್ಮಗಳ ಅಗತ್ಯ ಆಚರಣೆಯ ಭಾಗವಾಗಲು ಸಾಧ್ಯವಿಲ್ಲ. ಭಾಷಣಗಳ ಸಂದರ್ಭದಲ್ಲಿ ಹಾಗೂ ಕೆಲವು ಘೋಷಣೆಗಳನ್ನು ಕೂಗುವಾಗ ಧ್ವನಿವರ್ಧಕಗಳನ್ನು ಬಳಸುವುದನ್ನು ರಾಜಕೀಯ ಪಕ್ಷಗಳು ಹಾಗೂ ಸಂಘಟನೆಗಳು ಕಡಿಮೆ ಮಾಡಬೇಕು.**

ಧ್ವನಿವರ್ಧಕದಿಂದ ಬರುವ ಅಜಾನ್ ಸದ್ದು ಶಬ್ದಮಾಲಿನ್ಯ (ನಿಯಂತ್ರಣ ಮತ್ತು ನಿಗ್ರಹ) ನಿಯಮ ಗಳನ್ನು ಉಲ್ಲಂಘಿಸುವಂತಿದೆ ಎಂದು ಅರ್ಜಿದಾರರು ದೂರಿದ್ದರು. ಅರ್ಜಿಗಳನ್ನು ಮಾನ್ಯ ಮಾಡಿರುವ ನ್ಯಾಯಾಲಯವು ನಿಯಮಗಳ ಉಲ್ಲಂಘನೆ ಆದಲ್ಲಿ ಕಾನೂನಿನ ಪ್ರಕಾರ ಕ್ರಮ ಜರುಗಿಸಬೇಕು ಎಂದು ಸೂಚನೆ ನೀಡಿದೆ. ಶಬ್ದಮಾಲಿನ್ಯವು ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಉಂಟುಮಾಡುತ್ತಿದೆ ಎಂದು ಹೇಳಿರುವ ನ್ಯಾಯಾಲಯವು ಧ್ವನಿವರ್ಧಕ ಬಳಕೆಗೆ ಅವಕಾಶ ನೀಡದೇ ಇರುವುದು ಧಾರ್ಮಿಕ ಹಕ್ಕುಗಳ ನಿರಾಕರಣೆ ಅಲ್ಲ ಎಂಬುದನ್ನು ಸ್ಪಷ್ಟಪಡಿಸಿದೆ. ಧ್ವನಿ ವರ್ಧಕಗಳ ಬಳಕೆಗೆ ನಿರ್ಬಂಧ ವಿಧಿಸುವುದು ಸಾರ್ವಜನಿಕ ಹಿತಾಸಕ್ತಿಗೆ ಪೂರಕವಾಗಿದೆ. ಇಂತಹ ನಿರ್ಬಂಧವು ಸಂವಿಧಾನದ 19ನೇ ವಿಧಿ ಅಥವಾ 25ನೇ ವಿಧಿ ಅಡಿಯಲ್ಲಿನ ಹಕ್ಕುಗಳನ್ನು ಉಲ್ಲಂಘಿಸುವುದಿಲ್ಲ ಎಂದೂ ಹೇಳಿದೆ. ಶಬ್ದಮಾಲಿನ್ಯವು ಆರೋಗ್ಯದ ಮೇಲೆ ಗಂಭೀರ ಪರಿಣಾಮಗಳನ್ನು ಉಂಟುಮಾಡಬಲ್ಲದು. ಈ ಮಾಲಿನ್ಯವು ದೇಶದಲ್ಲಿ ಹೆಚ್ಚಳವಾಗುತ್ತಿದೆ. ಪರಿಸರವಾದಿಗಳು, ಸಾರ್ವಜನಿಕ ಆರೋಗ್ಯದ ಬಗ್ಗೆ ಕಾಳಜಿ ಹೊಂದಿರುವ ವ್ಯಕ್ತಿಗಳು ಈ ವಿಷಯವನ್ನು ಹಲವು ವರ್ಷಗಳಿಂದ ಹೇಳುತ್ತಿದ್ದಾರೆ. ಶಬ್ದ ಮಾಲಿನ್ಯವು ಹೆಚ್ಚಾದಾಗ ವಿದ್ಯಾರ್ಥಿಗಳಿಗೆ, ಹಿರಿಯ ನಾಗರಿಕರಿಗೆ ಮತ್ತು ಅನಾರೋಗ್ಯಕ್ಕೆ ತುತ್ತಾದವರಿಗೆ ತೊಂದರೆ ಆಗುತ್ತದೆ. ಅಜಾನ್, ಭಜನೆ, ಸಾರ್ವಜನಿಕ ವೇದಿಕೆಗಳಿಂದ ಮಾಡುವ ಭಾಷಣಗಳಲ್ಲಿ ಧ್ವನಿವರ್ಧಕ ಬಳಕೆ... ಇಂಥವೆಲ್ಲ ಶಬ್ದಮಾಲಿನ್ಯಕ್ಕೆ ಕಾರಣವಾಗುತ್ತಿವೆ. ಶಬ್ದಮಾಲಿನ್ಯವನ್ನು ತಡೆಯುವ ಉದ್ದೇಶದಿಂದ 2020ರಲ್ಲಿ ರೂಪಿಸಿದ ನಿಯಮಗಳನ್ನು ಮತ್ತೆ ಮತ್ತೆ ಉಲ್ಲಂಘಿಸಲಾಗಿದೆ. ಈ ಬಗೆಯ ಉಲ್ಲಂಘನೆಗಳಿಗೆ ಧಾರ್ಮಿಕ ಕಾರಣಗಳನ್ನು ಉಲ್ಲೇಖಿಸಲಾಗಿದೆ. ಆದರೆ ಈಗ ಕಾನೂನು ಏನು ಎಂಬುದನ್ನು ಹೈಕೋರ್ಟ್ ಸ್ಪಷ್ಟಪಡಿಸಿದೆ.

ರಾಜಕಾರಣ ಮತ್ತು ಧರ್ಮಕ್ಕೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳನ್ನು ನಡೆಸುವುದು ಜನರನ್ನು ಮೆಚ್ಚಿಸುವ ಉದ್ದೇಶದಿಂದ. ಆದರೆ ಭಾರಿ ಸದ್ದು-ಗದ್ದಲದೊಂದಿಗೆ ಆ ಕೆಲಸ ಮಾಡುತ್ತಿರುವುದು ವಿಷಾದಕರ. ಕೆಲವು ಮೆರವಣಿಗೆಗಳ ಸಂದರ್ಭದಲ್ಲಿ ಬಳಕೆಯಾಗುವ ಧ್ವನಿವರ್ಧಕಗಳು ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆ ಸೃಷ್ಟಿಸಿರುವುದೂ ಇದೆ. ತೀವ್ರ ಗತಿಯಲ್ಲಿ ನಗರೀಕರಣಕ್ಕೆ ತುತ್ತಾಗಿರುವ ಸಮಾಜದಲ್ಲಿ ಧ್ವನಿವರ್ಧಕಗಳಬಳಕೆ, ಶಬ್ದಮಾಲಿನ್ಯದಿಂದ ಆಗುವ ಸಮಸ್ಯೆಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಗುರುತಿಸುವ ಕೆಲಸ ಆಗಬೇಕು. ಗ್ರಾಮಗಳಲ್ಲಿಯೂ ಈ ಸಮಸ್ಯೆ ಇದೆ. ಧಾರ್ಮಿಕ ಸ್ಥಳಗಳನ್ನು ನಿರ್ವಹಿಸುವವರು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಗದ್ದಲ ಸೃಷ್ಟಿಸುವವರು ಸಾರ್ವಜನಿಕರ ಮಾನಸಿಕ ಮತ್ತು ದೈಹಿಕ ಆರೋಗ್ಯದ ಬಗ್ಗೆ ಆಲೋಚಿಸಬೇಕು. ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಪೊಲೀಸರು ಕ್ರಮ ಜರುಗಿಸಬೇಕು.

# ರಾಮಾಯಣ



## ಪಟ್ಟಾಭಿಷೇಕಕ್ಕೆ ಬೇಕಾದ ವಸ್ತುಗಳನ್ನು ಸಿದ್ಧಪಡಿಸಿದ್ದು

• ಹಿಂದಿನ ಸಂಚಿಕೆಯಿಂದ **79ನೆಯ ಅಧ್ಯಾಯ**

ಆಮೇಲೆ ದಶರಥನಾಯನು ಶ್ರೀರಾಮನ ಪಟ್ಟಾಭಿಷೇಕಕ್ಕೆ ಸಮ್ಮತಿಸಿದ ಸಮಸ್ತ ದೊರೆಗಳನ್ನೂ ಪ್ರಜೆಗಳನ್ನೂ ನೋಡಿ ಸಮಸ್ತ ಪ್ರಜೆಗಳ ಶ್ರೇಯಸ್ಸಿಗೋಸ್ಕರ ನನ್ನ ಕುಮಾರನಾದ ಶ್ರೀರಾಮನಿಗೆ ಯುವರಾಜಪಟ್ಟ ಕಟ್ಟುವುದಕ್ಕೆ ನೀವೆಲ್ಲರೂ ಏಕವಾಕ್ಯತೆಯಿಂದಂಗೀಕರಿಸಿದ್ದರಿಂದ ನಾನು ಸುಪ್ರೀತನಾದೆನು. ನಿಮ್ಮಿಂದ ಲೋಕದಲ್ಲಿ ನಾನು ಧನ್ಯನಾದೆನು' ಎಂದು ನುಡಿದು ವಸಿಷ್ಠ ವಾಮದೇವಾದಿ ಪುರೋಹಿತರನ್ನು ಕುರಿತು ಗುರುಗಳೆ ಮಹಾಪುಣ್ಯಕರವಾದ ಚೈತ್ರ ಮಾಸವು ಬಂದಿದೆ. ಈಗ ಸಮಸ್ತ ವೃಕ್ಷಗಳೂ ಎಳದಳಿರುಳ್ಳವಾಗಿ ಪುಷ್ಪಿತಗಳಾಗಿದೆ. ಇಂಥ ಸಮಯವು ಶ್ರೀರಾಮನ ಪಟ್ಟಾಭಿಷೇಕಕ್ಕೆ ಯೋಗ್ಯವಾಗಿದೆ. ಆದುದರಿಂದ ಬೇಕಾದ ವಸ್ತುಗಳನ್ನು ತರಿಸಿರಿ ಎಂದು ಆಯೋಧ್ಯಾ ಪಟ್ಟಣದವರಿಗೂ ಸಮಸ್ತ ದೇಶಗಳಿಂದ ಬಂದವರಿಗೂ ಕೇಳುವ ಹಾಗೆ ಹೇಳಿದನು. ಆಮೇಲೆ ವಸಿಷ್ಠ ಮುನೀಶ್ವರನು ದಶರಥರಾಯನ ಸೇವಾರ್ಥವಾಗಿ ಕೈ ಮುಗಿದುಕೊಂಡು ನಿಂತಿದ್ದ ಪ್ರಧಾನಿಗಳನ್ನು ಕರೆದು ಎಲೈ ಪ್ರಧಾನಿಗಳಿರಾ, ಅನರ್ಘ್ಯ ರತ್ನಗಳು, ಪೂಜಾಯೋಗ್ಯವಾದ ಪುಷ್ಪ ಮಾಲಿಕೆಗಳು, ಸಕಲೌಷಧಗಳು, ಶುದ್ಧ, ಜೇನುತುಪ್ಪ, ಗಂಧಾಕ್ಷತೆ, ಆಯುಧಗಳು. ಮೆರವಣಿಗೆ ಮಾಡುವುದಕ್ಕೆ ಸುಲಕ್ಷಣಲಕ್ಷಿತವಾದ ಆನೆ, ಚಾಮರಗಳೆರಡು, ಬೆಳ್ಗೊಡೆ. ನೂರು ಪೊಂಗೊಡೆಗಳು, ಚಿನ್ನದ ಕೊಂಬಿನ ವೃಷಭಗಳು, ವ್ಯಾಘ್ರಚರ್ಮ ಮೊದಲಾದ ಸಮಸ್ಯ ವಸ್ತುಗಳನ್ನೂ ತಂದು ದಶರಥರಾಯನ ಯಾಗಮಂಟಪದ ಸಮೀಪದಲ್ಲಿರಿಸಿರಿ, ಸುಗಂಧಪುಷ್ಪಗಳಿಂದ ನಗರದ ಹೆಬ್ಬಾಗಿಲಿಗೂ ಅರಮನೆಯ ಬಾಗಿಲುಗಳಿಗೂ ತೋರಣಗಳನ್ನು ಕಟ್ಟಿಸಿರಿ. ಶ್ರೀಗಂಧೋದಕ ಗಳಿಂದ ಚೌಬೀದಿಗಳಲ್ಲಿ ಸೇವನ ಮಾಡಿಸಿರಿ. ಸಾಂಬ್ರಾಣಿ ಧೂಪದ ಹೊಗೆಯನ್ನು ಹರಡಿಸಿರಿ. ಬಲ ವೃದ್ಧಿಯನ್ನು ಮಾಡುವ ಹಾಲು ಮೊಸರು ತುಪ್ಪ ಮೊದಲಾದ ರಸದ್ರವ್ಯಗಳಿಂದ ಅತ್ಯಂತ ಸ್ವಾದುಗುಣಯುಕ್ತವಾದ ಷಡ್ರಸೋಪೇತವಾದ ಅನ್ನವನ್ನು ಸಿದ್ಧಪಡಿಸಿರಿ. ನಾಳೆ ಪ್ರಾತಃಕಾಲದಲ್ಲಿ ಪುಣ್ಯಾಹವನ್ನು ಮಾಡಬೇಕಾದ್ದರಿಂದ ಹಾಲು ಮೊಸರು ತುಪ್ಪ ಪುಷ್ಪಮಾಲಿಕೆಗಳು ಗಂಧಾಕ್ಷತೆಗಳು ಮೊದಲಾದ ಮಂಗಳದ್ರವ್ಯಗಳನ್ನು ಸೂರೋದಯದ ಹೊತ್ತಿಗೆ ತರಿಸಿರಿ. ಶಿಷ್ಟರಾದ ಬ್ರಾಹ್ಮಣರನ್ನು ಕರೆಯಿಸಿರಿ. ಅವರು ಕುಳ್ಳಿರುವುದಕ್ಕೆ ಅನೇಕ ಪೀಠಗಳನ್ನು ತರಿಸಬೇಕು.


ರಾಜಮಾರ್ಗದಲ್ಲಿ ನೀರು ಚೆಲ್ಲಿಸಿ ಪತಾಕೆಗಳನ್ನು ಕಟ್ಟಿಸಬೇಕು. ತಾಳಮದ್ದಳೆಗಳ ಲಯಕ್ಕೆ ಸರಿಯಾದ ಗಾನವಿದ್ಯಾ ವಿಶಾರದರಾದ ಗಾಯಕರನ್ನೂ ನರ್ತಕರನ್ನೂ ಕುಶಲಿನಿಯರಾಗಿ ಸರ್ವಾಭರಣಭೂಷಿತೆಯರಾದ ಗಣಿಕಾಸ್ತ್ರೀಯರನ್ನೂ ಕರೆಯಿಸಬೇಕು. ದೇವಾಲಯಗಳಲ್ಲಿ ಅಭಿಷೇಕ ನೈವೇದ್ಯಗಳು ನಡೆಯಬೇಕು. ಬ್ರಾಹ್ಮಣಭೋಜನಗಳನ್ನು ಮಾಡಿಸ ಬೇಕು. ಪ್ರತಿದೇವಾಲಯವನ್ನೂ ಕುರಜು ಮೇಜುಕಟ್ಟುಗಳಿಂದ ಅಲಂಕಾರ ಮಾಡಿಸಿರಿ. ಆಯುಧಗಳನ್ನು ಧರಿಸಿಕೊಂಡು ಐಸ್ತ್ರಾಭರಣಗಳಿಂದ ಅಲಂಕರಿಸಿಕೊಂಡು ಅರಮನೆಯ ಬಾಗಿಲಿಗೆ ಬರುವ ಹಾಗೆ ಭಟರಿಗೆ ಕಟ್ಟುಮಾಡಿರಿ. ಈ ರೀತಿಯಲ್ಲಿ ಸಮಸ್ಯೆ ವಸ್ತುಗಳನ್ನು ತರಿಸಿ ಸನ್ನಾಹಮಾಡಿ ದಶರಥರಾಯನ ಸಮೀಪಕ್ಕೆ ಬಂದು ಬಿನ್ನಹ ಮಾಡಿರಿ ಎಂದು ಕಟ್ಟು ಮಾಡಿದನು. ಆಮೇಲೆ ವಸಿಷ್ಠ ವಾಮದೇವರ ಅಪ್ಪಣೆಯಿಂದ ಆ ಪ್ರಧಾನಿಗಳು ಪಟ್ಟಾಭಿಷೇಕಕ್ಕೆ ಬೇಕಾದ ಸಮಸ್ಯೆ ಸಾಮಗ್ರಿಗಳನ್ನೂ ತರಿಸಿ ದಶರಥರಾಯನ ಸಮೀಪಕ್ಕೆ ಬಂದು ಕೈ ಮುಗಿದು ಸ್ವಾಮಿ, ಪಟ್ಟಾಭಿಷೇಕಕ್ಕೆ ಬೇಕಾದ ವಸ್ತುಗಳೆಲ್ಲವೂ ಸಿದ್ಧವಾಗಿವೆ ಎಂದು ಬಿನ್ನಹಮಾಡಿದರು. ದಶರಥ ರಾಯನು ಸುಮಂತ್ರನೆಂಬ ಪ್ರಧಾನಿಯನ್ನು ಕರೆದು ಶೀಘ್ರದಲ್ಲಿ ಶ್ರೀರಾಮನನ್ನು ಕರೆದುಕೊಂಡು ಬರಹೇಳಿದನು. ಆತನು ಮಹಾಪ್ರಸಾದವೆಂದು ದಶರಥನ ಆಜ್ಞೆಯನ್ನು ಶಿರಸಾವಹಿಸಿ ಶ್ರೀರಾಮನ ಬಳಿಗೆ ಹೋದನು. ಮೂಡಣ ಪಡುವಣ ತೆಂಕಣ ಬಡಗಣ ದಿಕ್ಕುಗಳ ರಾಯರೂ ಗಿರಿದುರ್ಗ ವನದುರ್ಗಗಳ ಮೇಚ್ಛಾದಿ ದೊರೆಗಳೂ ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ಬಂದು ಕಾಣಿಸಿಕೊಳ್ಳಲು ಆ ದೊರೆಗಳ ಮಧ್ಯದಲ್ಲಿ ಸಮಸ್ತ ದೇವತೆಗಳ ಮಧ್ಯದಲ್ಲಿ ಪ್ರಕಾಶಿಸುವ ದೇವೇಂದ್ರನ ಮರ್ಯಾದೆಯಲ್ಲಿ ದಶರಥಮಹಾರಾಜನು ಒಪ್ಪಿದ್ದನು.

ಮುಂದುವರಿಯುವುದು...

# ಲಾಲಾ ಲಜಪತ್ ರಾಯ್ 161ನೆಯ ಜನ್ಮದಿನೋತ್ಸವ

• ಸಿದ್ದಲಿಂಗ ಶಿವಯೋಗಿ ಸ್ವಾಮಿ ಮಠಪತಿ
ಉಚ್ಚ ತಾ ಭಾಲ್ಕಿ ಜಿ ಬೀದರ್

**ಬರವಣಿಗೆ ಕಡೆಗೆ ಅಪಾರ ಒಲವು**



ಪಂಜಾಬ್ ಕೇಸರಿ ಎಂದೇ ಹೆಸರುವಾಸಿಯಾಗಿರುವ ಲಾಲಾ ಲಜಪತ್ ರಾಯ್, ಭಾರತೀಯ ಸ್ವಾತಂತ್ರ್ಯ ಚಳವಳಿಯಲ್ಲಿ ಪ್ರಮುಖ ಪಾತ್ರವಹಿಸಿ ದ್ದಾರೆ. ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆಯ ವಿರುದ್ಧ ಭಾರತದ ಸ್ವಾತಂತ್ರ್ಯ ಹೋರಾಟವನ್ನು ರೂಪಿಸುವಲ್ಲಿ ಅವರ ಜೀವನವನ್ನೇ ಮುಡಿಪಾಗಿಟ್ಟಿದ್ದರು. ಲಾಲಾ ಲಜಪತ್ ರಾಯ್ ಆರ್ಯ ಸಮಾಜದ ಸಂಸ್ಥಾಪಕ ದಯಾನಂದ ಸರಸ್ವತಿ ಮತ್ತು ಸ್ವಾಮಿ ವಿವೇಕಾನಂದರ ಬೋಧನೆಗಳಿಂದ ಆಳವಾಗಿ ಪ್ರಭಾವಿತರಾಗಿದ್ದರು. ದೇಶದ ಬಗ್ಗೆ ಅವರ ಉತ್ಸಾಹವು ಅವರನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಗೆ ಸೇರಲು ಕಾರಣವಾಯಿತು, ಅಲ್ಲಿ ಅವರು ಸ್ವಾತಂತ್ರ್ಯ ಹೋರಾಟಕ್ಕಾಗಿ ಅವಿರತ ಕೆಲಸ ಮಾಡಿದರು.

**ಬಾಲ್ಯಜೀವನ:** ಲಾಲಾ ಲಜಪತ್ ರಾಯ್ ಅವರು ಜನವರಿ 28, 1865 ರಂದು ಪಂಜಾಬ್‌ನ ಮೊಘಾ ಜಿಲ್ಲೆಯ ಧುಡಿಕೆಯಲ್ಲಿ ಜನಿಸಿದರು. ಅವರ ತಾಯಿ ಗುಲಾಬಿ ದೇವಿ, ತಂದೆ ಮುನ್ಷಿ ರಾಧಾ ಕ್ರಿಶನ್ ಅಗರವಾಲ್, ಅವರು ಪಂಜಾಬ್ ಪ್ರಾಂತ್ಯದ ಸರ್ಕಾರಿ ಶಾಲೆಯಲ್ಲಿ ಉರ್ದು ಮತ್ತು ಪರ್ಷಿಯನ್ ಭಾಷಾ ಶಿಕ್ಷಕರಾಗಿದ್ದರು. ಲಾಲಾ ಧನಪತ್ ರಾಯ್ ಅವರ ಸಹೋದರ. 1877 ರಲ್ಲಿ, ಲಾಲಾ ಲಜಪತ್ ರಾಯ್ ರಾಧಾದೇವಿ ಅಗರ್ವಾಲ್ ಅವರನ್ನು ವಿವಾಹವಾದರು. ದಂಪತಿಗೆ ಮೂವರು ಮಕ್ಕಳಿದ್ದರು, ಇಬ್ಬರು ಗಂಡು ಮಕ್ಕಳು, ಪ್ಯಾರೆಲಾಲ್ ಮತ್ತು ಅಮೃತ್ ರಾಯ್ ಅಗರವಾಲ್ ಮತ್ತು ಪಾರ್ವತಿ ಅಗರವಾಲ್. ಅವರ ಜೀವನ ಮತ್ತು ಕೊಡುಗೆಗಳು ನಮ್ಮ ರಾಷ್ಟ್ರದ ಇತಿಹಾಸದಲ್ಲಿ ಅಚ್ಚಳಿಯದೆ ಉಳಿದಿದೆ. ಲಾಲಾ ಲಜಪತ್ ರಾಯ್ ಅವರ ಬಾಲ್ಯವು ಆಳವಾದ ದೇಶಭಕ್ತಿ ಮತ್ತು ಸಾಮಾಜಿಕ ಸುಧಾರಣೆಯ ಬಲವಾದ ಬಯಕೆಯಿಂದ ಗುರುತಿಸಲ್ಪಟ್ಟಿತು. ಶಿಕ್ಷಣವನ್ನು ಗೌರವಿಸುವ ಕುಟುಂಬದಲ್ಲಿ ಬೆಳೆದ ಅವರು ತಮ್ಮ ಅಧ್ಯಯನದಲ್ಲಿ ಶ್ರೇಷ್ಠತೆಯನ್ನು ಗಳಿಸಿದರು ಮತ್ತು ಸಮಾಜ ಎದುರಿಸುತ್ತಿರುವ ಸಮಸ್ಯೆಗಳಲ್ಲಿ ತೀವ್ರ ಆಸಕ್ತಿಯನ್ನು ಬೆಳೆಸಿಕೊಂಡರು.

**ಶಿಕ್ಷಣ:** ಲಜಪತ್ ರಾಯ್ ಅವರ ಶಿಕ್ಷಣದ ಬದ್ಧತೆಯು ಅವರನ್ನು ಲಾಹೋರ್‌ನ ಸರ್ಕಾರಿ ಕಾಲೇಜಿನಲ್ಲಿ ಕಾನೂನು ಅಧ್ಯಯನ ಮಾಡಲು ಕಾರಣವಾಯಿತು. ಅವರ ಶೈಕ್ಷಣಿಕ ಅನ್ವೇಷಣೆಗಳು ಕೇವಲ ವೈಯಕ್ತಿಕ ಲಾಭಕ್ಕಾಗಿ ಅಲ್ಲ ಬದಲಾಗಿ, ಅವರು ಶಿಕ್ಷಣವನ್ನು ವ್ಯಕ್ತಿಗಳನ್ನು ಸಬಲೀಕರಣಗೊಳಿಸುವ ಮತ್ತು ಸಮಾಜವನ್ನು ಪರಿವರ್ತಿಸುವ ಸಾಧನವಾಗಿ ನೋಡಿದರು. ಇದೇ ನಿಮಿತ್ತ ತಮ್ಮ ತಾಯಿಯ ನೆನಪಿಗಾಗಿ ಗುಲಾಬೀದೇವಿ ಟ್ರಸ್ಟ್ ಅನ್ನು ಸ್ಥಾಪಿಸಿ ಅನೇಕ ಸಾಮಾಜಿಕ ಕಾರ್ಯಗಳನ್ನು ಮಾಡಿದರು.

**ರಾಜಕೀಯ ಮತ್ತು ಸ್ವಾತಂತ್ರ್ಯ ಹೋರಾಟ:** ಹಿಂದೂ ಧರ್ಮ ಮತ್ತು ಮನುಸ್ಮೃತಿಗಳಿಂದ ತೀವ್ರ ಪ್ರಭಾವಿತರಾದ ಲಾಲಾ ಲಜಪತ ರಾಯ್ ಅವರು ರಾಜಕೀಯ ಹೋರಾಟ ಮತ್ತು ಬರವಣಿಗೆಗಳ ಕಡೆಗೆ ಅಪಾರ ಒಲವು ಬೆಳೆಸಿಕೊಂಡರು. ಹಿಂದೂ ಮಹಾಸಭಾದ ಕಾರ್ಯಕರ್ತರಾಗಿದ್ದ ಅವರು, ಹಿಂದೂ ಧರ್ಮದಲ್ಲಿ ಶಾಂತಿಯುತ ಹೋರಾಟಕ್ಕೆ ಮಹತ್ವವಿದೆ ಎಂದು ನಂಬಿದ್ದರು. ಇದೇ ಆಧಾರದ ಮೇಲೆ ಅವರು ಭಾರತದ ಸ್ವಾತಂತ್ರ್ಯಕ್ಕಾಗಿ ಅನೇಕ ಶಾಂತಿಯುತ ಚಳುವಳಿಗಳನ್ನು ಆಯೋಜಿಸತೊಡಗಿದರು.

**ಅಸಹಕಾರ ಚಳವಳಿಯಲ್ಲಿ ಪಾತ್ರ:** 1920 ರಲ್ಲಿ ಮಹಾತ್ಮ ಗಾಂಧಿಯವರು ಪ್ರಾರಂಭಿಸಿದ ಅಸಹಕಾರ ಚಳವಳಿಯ ಸಮಯದಲ್ಲಿ, ಲಾಲಾ ಲಜಪತ್ ರಾಯ್ ಪ್ರಮುಖ ನಾಯಕರಾಗಿ ಹೊರಹೊಮ್ಮಿದರು. ಅವರು ಅಹಿಂಸಾತ್ಮಕ ಪ್ರತಿಭಟನೆಯನ್ನು ಪ್ರತಿಪಾದಿಸಿದರು, ಬ್ರಿಟಿಷ್ ಸರಕುಗಳು, ಸಂಸ್ಥೆಗಳನ್ನು ಬಹಿಷ್ಕರಿಸುವಂತೆ ಜನರನ್ನು ಒತ್ತಾಯಿಸಿದರು.

ಆ ಧ್ಯೇಯಕ್ಕೆ ಅವರ ಬದ್ಧತೆಯು ಅವರನ್ನು ರಾಜಕಾರಣಿಗಳು ಮತ್ತು ಸಾಮಾನ್ಯ ಜನರಲ್ಲಿ ಗೌರವಾನ್ವಿತ ನಾಯಕನನ್ನಾಗಿ ಮಾಡಿತು.

**ಸೈಮನ್ ಆಯೋಗದ ವಿರುದ್ಧ ಪ್ರತಿಭಟನೆ:** ಅಕ್ಟೋಬರ್ 30, 1928ರಂದು ಸೈಮನ್ ಆಯೋಗವು ಲಾಹೋರಿಗೆ ಭೇಟಿ ಕೊಟ್ಟ ಸಂದರ್ಭದಲ್ಲಿ ಲಾಲಾ ಲಜಪತರಾಯ್ ಅವರು ಶಾಂತಿಯುತ ಮೆರವಣಿಗೆಯ ನೇತೃತ್ವ ವಹಿಸಿದರು. ಆ ಸಂದರ್ಭದಲ್ಲಿ ಪೋಲಿಸ್ ಸೂಪರಿಂಟೆಂಡೆಂಟ್ ಜೇಮ್ಸ್ ಎ. ಸ್ಕಾಟ್ ಎಂಬ ದುರಹಂಕಾರಿಯು ಮೆರವಣಿಗೆಯಲ್ಲಿ ಹೋಗುತ್ತಿದ್ದವರ ಮೇಲೆ ಲಾಠಿ ಚಾರ್ಜ್ ಮಾಡುವ ಆದೇಶ ನೀಡಿದ್ದಲ್ಲದೆ ಲಾಲಾ ಲಜಪತ ರಾಯ್ ಅವರ ಮೇಲೆ ಸ್ವಯಂ ಆಕ್ರಮಣ ನಡೆಸಿ ಅವರು ತೀವ್ರವಾಗಿ ಗಾಯಗೊಳ್ಳುವುದಕ್ಕೆ ಕಾರಣನಾದನು. ಪ್ರದರ್ಶನದ ಶಾಂತಿಯುತ ಸ್ವರೂಪದ ಹೊರತಾಗಿಯೂ, ಬ್ರಿಟಿಷ್ ಪೊಲೀಸರು ಲಾಠಿ ಚಾರ್ಜ್ ನಡೆಸಿದರು, ಈ ಸಮಯದಲ್ಲಿ ಲಾಲಾ ಲಜಪತ್ ರಾಯ್ ತೀವ್ರ ಗಾಯಗೊಂಡರು. ಅವರ ಗಾಯಗಳಿಂದ ಗುಣಮುಖರಾಗದೆ ಅಂತಿಮವಾಗಿ ನವೆಂಬರ್ 17, 1928 ರಂದು ಅವರ ಸಾವಿಗೆ ಕಾರಣವಾಯಿತು. ಲಾಲಾ ಲಜಪತ್ ರಾಯ್ ಅವರ ತ್ಯಾಗವು ಸ್ವಾತಂತ್ರ್ಯ ಚಳವಳಿಗೆ ಒಂದು ರ್‍ಯಾಲಿ ಬಿಂದುವಾಯಿತು. ಅವರು ಬ್ರಿಟಿಷ್ ದಬ್ಬಾಳಿಕೆಯ ವಿರುದ್ಧದ ಪ್ರತಿರೋಧದ ಸಂಕೇತವಾದರು. ಭಾರತದ ಜನರು, ವಿಶೇಷವಾಗಿ ಪಂಜಾಬ್‌ನಲ್ಲಿ, ಅವರನ್ನು ಪಂಜಾಬ್ ಕೇಸರಿ ಎಂದು ಪ್ರೀತಿಯಿಂದ ನೆನಪಿಸಿಕೊಳ್ಳುತ್ತಾರೆ. ರಾಷ್ಟ್ರದ ಸ್ವಾತಂತ್ರ್ಯ ಹೋರಾಟಕ್ಕೆ ಅವರ ಕೊಡುಗೆಗಳು ತಲೆಮಾರುಗಳಿಗೆ ಸ್ಫೂರ್ತಿಯಾಗಿ ಉಳಿದಿವೆ. ಲಾಲಾ ಲಜಪತ್ ರಾಯ್ ಅವರ ಜೀವನವು ಭಾರತೀಯ ಸ್ವಾತಂತ್ರ್ಯಕ್ಕಾಗಿ ಅವರ ಅಚಲ ಸಮರ್ಪಣೆಗೆ ಸಾಕ್ಷಿಯಾಗಿದೆ. ವಿವಿಧ ಚಳುವಳಿಗಳಲ್ಲಿ ಅವರ ಪಾತ್ರ, ಶಿಕ್ಷಣಕ್ಕೆ ಬದ್ಧತೆ ಮತ್ತು ಸೈಮನ್ ಆಯೋಗದ ಪ್ರತಿಭಟನೆಯ ಸಮಯದಲ್ಲಿ ತ್ಯಾಗವು ಅವರನ್ನು ಭಾರತೀಯ ಇತಿಹಾಸದಲ್ಲಿ ಪೂಜ್ಯ ವ್ಯಕ್ತಿಯನ್ನಾಗಿ ಮಾಡುತ್ತದೆ. ಪಂಜಾಬ್ ಕೇಸರಿ ಪರಂಪರೆಯು ಲಕ್ಷಾಂತರ ಜನರ ಹೃದಯಗಳಲ್ಲಿ ದೇಶಭಕ್ತಿಯ ಭಾವನೆಯನ್ನು ಪ್ರೇರೇಪಿಸುತ್ತದೆ.

**ಪಂಜಾಬ್ ಮತ್ತು ಶಿಕ್ಷಣಕ್ಕೆ ಕೊಡುಗೆ**

**ಲಾಲಾ ಲಜಪತ್ ರಾಯ್ ಪಂಜಾಬ್ ಅಭಿವೃದ್ಧಿಯಲ್ಲಿಯೂ ಮಹತ್ವದ ಪಾತ್ರವಹಿಸಿದ್ದಾರೆ. ಅವರು ಶಿಕ್ಷಣದ ಸುಧಾರಣೆಗೆ ಶ್ರಮಿಸಿದರು ಮತ್ತು ಲಾಹೋರ್‌ನಲ್ಲಿ ಡಿ.ಎ.ವಿ. ಕಾಲೇಜು ಸ್ಥಾಪನೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಶಿಕ್ಷಣದ ಮೂಲಕ ಯುವಕರನ್ನು ಸಬಲೀಕರಣಗೊಳಿಸುವುದು, ರಾಷ್ಟ್ರೀಯತೆಯ ಪ್ರಜ್ಞೆಯನ್ನು ಬೆಳೆಸುವುದು ಅವರ ದೃಷ್ಟಿಕೋನವಾಗಿತ್ತು.**

# ಹತ್ತು ನಿಮಿಷದಲ್ಲಿ ಗ್ಯಾಸ್ ಸಮಸ್ಯೆ ಕಡಿಮೆ ಮಾಡುವ ಪರಿಣಾಮಕಾರಿ ಸಲಹೆಗಳು

• ಉದಯವಾಹಿನಿ, ಬೆಂಗಳೂರು

ಅನೇಕ ಜನರು ವಾರಕ್ಕೊಮ್ಮೆಯಾದರೂ ಗ್ಯಾಸ್ ಸಮಸ್ಯೆಯನ್ನ ಎದುರಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಈ ಸಮಸ್ಯೆ ಹೆಚ್ಚಾಗಿದೆ. ಸಮಯಕ್ಕೆ ಸರಿಯಾಗಿ ತಿನ್ನದಿದ್ದರೆ, ಮಸಾಲೆಯುಕ್ತ ಭಕ್ಷ್ಯಗಳು, ಕೂಲ್ ಡ್ರಿಂಕ್ಸ್, ಎಣ್ಣೆಯುಕ್ತ ಆಹಾರಗಳನ್ನು ಹೆಚ್ಚು ಸೇವಿಸಿದರೆ ಗ್ಯಾಸ್ ಸಮಸ್ಯೆ ಉಂಟಾಗುತ್ತದೆ. ಗ್ಯಾಸ್ ಗಂಟಲು ಮತ್ತು ಎದೆಯಲ್ಲಿ ಉರಿಯುವಿಕೆಯನ್ನ ಉಂಟು ಮಾಡುತ್ತದೆ. ಕೆಲವೊಮ್ಮೆ ತಿಂದ ಆಹಾರವೂ ವಾಂತಿಗೆ ಕಾರಣವಾಗುತ್ತದೆ.

ಗ್ಯಾಸ್ ಸಮಸ್ಯೆಯನ್ನ ನಿಯಂತ್ರಿಸುವಲ್ಲಿ ನೀರು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತದೆ. ಗ್ಯಾಸ್ ಸಮಸ್ಯೆ ತಪ್ಪಿಸಲು ಹೆಚ್ಚು ನೀರು ಕುಡಿಯಿರಿ. ಗ್ಯಾಸ್ ಸಮಸ್ಯೆ ಇರುವವರು ಅದನ್ನು ನಿಯಂತ್ರಿಸಲು ಹೆಚ್ಚು ಹೊತ್ತು ಕುಳಿತುಕೊಳ್ಳಬೇಕು. ಇದು ಗ್ಯಾಸ್ ಆಗದಂತೆ ತಡೆಯುತ್ತದೆ. ಮಲಗಿರುವಾಗಲೂ ಗ್ಯಾಸ್ ಬರಬಹುದು. ಅನಾನಸ್ ಜ್ಯೂಸ್ ಕುಡಿಯುವುದರಿಂದ ಗ್ಯಾಸ್ ಸ್ವಲ್ಪ ನಿಯಂತ್ರಿಸಬಹುದು. ಗ್ಯಾಸ್ ಸಮಸ್ಯೆ ಕಡಿಮೆ ಮಾಡಲು ಸೋಡಾ ಕುಡಿಯಿರಿ. ಸೋಡಾ ಗ್ಯಾಸ್ ಕಡಿಮೆ ಮಾಡುತ್ತದೆ.



ಆದರೆ ಇದು ಕೆಲವರಲ್ಲಿ ಮಾತ್ರ ಕೆಲಸ ಮಾಡುತ್ತದೆ. ಅಲೋವೆರಾ ಜ್ಯೂಸ್ ಕುಡಿಯುವುದರಿಂದ ಗ್ಯಾಸ್ ನಿಯಂತ್ರಿಸಬಹುದು. ನಿಂಬೆರಸ ಕುಡಿದರೂ ಒಂದು ಚಮಚ ಆಪಲ್ ಸೈಡರ್ ವಿನೆಗರ್, ಮಜ್ಜಿಗೆ, ಬಾಳೆ ಹಣ್ಣು, ದ್ರಾಕ್ಷಿ ಹಣ್ಣು ತಿಂದರೆ ತಕ್ಷಣ ಗ್ಯಾಸ್ ಕಡಿಮೆಯಾಗುತ್ತದೆ. ಜೀರಿಗೆ ನೀರು, ಪುದೀನಾ ನೀರು, ಬಿಸಿನೀರು ಕುಡಿಯುವುದರಿಂದ ಗ್ಯಾಸ್ ಸಮಸ್ಯೆ ಕಡಿಮೆಯಾಗುತ್ತದೆ.

# ಮೊಟ್ಟೆ ಬೇಯಿಸಿದ ನೀರನ್ನು ಈ ರೀತಿ ಎಲ್ಲಾ ಬಳಸಬಹುದು

• ಉದಯವಾಹಿನಿ, ಬೆಂಗಳೂರು

ಮೊಟ್ಟೆ ಬೇಯಿಸಿದ ನೀರಿನಲ್ಲಿ ಹೆಚ್ಚಿನ ಮಟ್ಟದಲ್ಲಿ ಕ್ಯಾಲ್ಸಿಯಂ, ಮೆಗ್ನೇಶಿಯಮ್, ಪೊಟ್ಯಾಶಿಯಂ ನಂತಹ ಪೋಷಕಾಂಶಗಳು ಇದ್ದು ಇದು ಗಿಡಗಳಿಗೆ, ಕೂದಲಿನ ಆರೈಕೆಗೆ, ಸ್ವಚ್ಚತೆಗೆ ಮತ್ತು ಗೊಬ್ಬರಗಳಿಗಾಗಿ ಅತ್ಯುತ್ತಮ. ಮೊಟ್ಟೆ ಬೇಯಿಸಿದ ಈ ನೀರನ್ನು ಮರುಬಳಕೆ ಮಾಡುವುದರಿಂದ ಏನೆಲ್ಲಾ ಪ್ರಯೋಜನಗಳಿವೆ, ಇವುಗಳನ್ನು ಗಿಡಗಳಿಗೆ , ಸ್ವಚ್ಚತೆಗಳಿಗೆ ಇತ್ಯಾದಿ ವಿಷಯಗಳಿಗೆ ಹೇಗೆಲ್ಲಾ ಉಪಯೋಗಿಸಲಾಗುತ್ತದೆ ಎಂದು ತಿಳಿಯೋಣ. ಹಲವಾರು ಮನೆಗಳಲ್ಲಿ ಬೇಯಿಸಿದ ಮೊಟ್ಟೆಗಳನ್ನು ತಿನ್ನುವುದು ಸಾಮಾನ್ಯ ಅಭ್ಯಾಸವೆನ್ನಬಹುದು. ನಮ್ಮಲ್ಲಿ ಸಾಮಾನ್ಯವಾಗಿ ಎಲ್ಲಾರೂ ಮೊಟ್ಟೆಗಳನ್ನು ಬೇಯಿಸಿದ ನಂತರ ಆ ನೀರನ್ನು ಎಸೆಯುವುದು ಸಹಜ . ಆದರೆ ನೀವು ಎಸೆಯುವ ಈ ನೀರಿನಲ್ಲಿ ಎಷ್ಟೆಲ್ಲಾ ಶಕ್ತಿ ಇದೆ ಗೊತ್ತೆ? ಮೊಟ್ಟೆ ಬೇಯಿಸಿದ ಈ ನೀರಿನಲ್ಲಿ ಕ್ಯಾಲ್ಸಿಯಂ , ಪೊಟ್ಯಾಸಿಯಂ ಮತ್ತು ಮೆಗ್ನೇಶಿಯಮ್ ನಂತಹ ಪೋಷಕಾಂಶಗಳಲ್ಲಿ ಸಮೃದ್ದವಾಗಿದೆ. ಇದು ಮೊಟ್ಟೆಗಳಂತೆಯೇ ಉಪಯುಕ್ತವಾಗಿದೆ. ನೀವು ಅದನ್ನು ನಿಮ್ಮ ಸಸ್ಯಗಳಿಗೆ ನೈಸರ್ಗಿಕ ಗೊಬ್ಬರವಾಗಿ ಬಳಸಬಹುದು. ಕೂದಲನ್ನು ಪೋಷಿಸಲು ಶುಚಿಗೊಳಿಸುವಂತಹ ಹಲವಾರು ವಿಷಯಗಳಲ್ಲಿ ನೈಸರ್ಗಿಕವಾಗಿ ಕಾರ್ಯನಿರ್ವಹಿಸುವ ಸಲುವಾಗಿ ಈ ನೀರನ್ನು ಬಳಸಬಹುದಾಗಿದೆ. ಮೊಟ್ಟೆ ಬೇಯಿಸಿದ ನೀರಿನಲ್ಲಿರುವ ಗುಪ್ತ ಪ್ರಯೋಜನಗಳ ಬಗ್ಗೆ ಮತ್ತಷ್ಟು ತಿಳಿಯುತ್ತಾ ಮುಂದಿನ ಬಾರಿ ಮೊಟ್ಟೆ ಬೇಯಿಸುವಾಗ ನೀರನ್ನು ಚೆಲ್ಲದೆ ಇದನ್ನು ಈ ಕೆಳಗೆ ಹೇಳುವ ವಿಧಾನಗಳಿಗೆ ಬಳಸಿ, ಅದರ ಮಹತ್ತರ ಉಪಯೋಗಗಳನ್ನು ಪಡೆದುಕೊಳ್ಳಿ.

**ಮೊಟ್ಟೆ ಬೇಯಿಸಿದ ನೀರು ತುಂಬಾ ಶಕ್ತಿಯುತವಾದದ್ದು ಏಕೆ:** ಮೊಟ್ಟೆಯಲ್ಲಿ ಪೋಷಕಾಂಶಗಳು ತುಂಬಿರುವಂತೆಯೇ ಇದನ್ನು ಬೇಯಿಸಿದ ನೀರಿನಲ್ಲೂ ಸಹ ಶಕ್ತಿಯುತವಾದ ಪೋಷಕಾಂಶಗಳಿವೆ. ಇದರಿಂದಾಗಿ ಮೊಟ್ಟೆಗಳನ್ನು ಕುದಿಸುವ ಪ್ರಕ್ರಿಯೆಯಲ್ಲಿ ಮೊಟ್ಟೆಯ ಚಿಪ್ಪುಗಳು ಮತ್ತು ಒಳಭಾಗದಿಂದ ಬೇಯಿಸುವಾಗ ಬರುವ ಪೋಷಕಾಂಶಗಳಲ್ಲಿ ಕ್ಯಾಲ್ಸಿಯಂ, ಮೆಗ್ನೇಶಿಯಂ , ಪೊಟ್ಯಾಸಿಯಮ್ ಮತ್ತು ಸಣ್ಣ ಪ್ರಮಾಣದಲ್ಲಿ ರಂಜಕ ಮತ್ತು ಕಬ್ಬಿಣವನ್ನು ಒಳಗೊಂಡಿವೆ. ಇದರಲ್ಲಿನ ಕ್ಯಾಲ್ಸಿಯಂ ನ ಉಪಸ್ಥಿತಿಯು ಸಸ್ಯಗಳ ರಚನಾತ್ಮಕ ಬೆಳವಣಿಗೆಗೆ ಸಹಾಯ ಮಾಡುತ್ತದೆ. ಇದರಲ್ಲಿರುವ ಮೆಗ್ನೇಶಿಯಂ ಕಿಣ್ವದ ಕಾರ್ಯದಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಮತ್ತು ಸಸ್ಯಗಳು ಪೋಷಕಾಂಶಗಳನ್ನು ಹೀರಿಕೊಳ್ಳುವಂತೆ ಸಹಾಯ ಮಾಡುತ್ತದೆ. ಹಾಗೂ ಇದರಲ್ಲಿನ ಪೊಟ್ಯಾಸಿಯಮ್ ಸಸ್ಯಗಳು



ಉದಯವಾಹಿನಿ ಚಿತ್ರ

ಮತ್ತು ದೇಹದ ಸಮತೋಲನವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಈ ಎಲ್ಲಾ ಖನಿಜಾಂಶಗಳು ಮೊಟ್ಟೆ ಬೇಯಿಸಿದ ನೀರನಲ್ಲಿರುವುದರಿಂದ, ಈ ನೀರನ್ನು ಮರುಬಳಕೆ ಮಾಡು ವುದರಿಂದ ಆಸಕ್ತಿದಾಯಕ ವಿಧಾನಗಳಲ್ಲಿ ಅದ್ಭುತವಾಗಿ ಬಳಸಬಹುದು.

**ಮೊಟ್ಟೆಯ ನೀರನ್ನು ಮರುಬಳಕೆ ಮಾಡಬಹುದಾದ ವಿಧಾನಗಳು:** ಮೊಟ್ಟೆಗಳನ್ನು ಸಾಮಾನ್ಯವಾಗಿ ಮನೆಗಳಲ್ಲಿ ಬಳಸಲಾಗುತ್ತದೆ. ಇದನ್ನು ಕುದಿಸಿದ ನಂತರ, ಯೋಚಿಸದೆ ನೀರನ್ನು ಎಸೆಯುವುದು ಸಾಮಾನ್ಯವಾಗಿದೆ. ಆದಾಗ್ಯೂ, ಮೊಟ್ಟೆಗಳನ್ನು ಕುದಿಸಲು ಬಳಸುವ ನೀರು ನಿಮಗೆ ವಿವಿಧ ರೀತಿಯಲ್ಲಿ ಸೇವೆ ಸಲ್ಲಿಸುವ ಗುಪ್ತ ಪ್ರಯೋಜನಗಳನ್ನು ಹೊಂದಿದೆ ಎಂದು ನಿಮಗೆ ತಿಳಿದಿದೆಯೇ? ನೀವು ಆ ನೀರನ್ನು ಏಕೆ ಎಸೆಯಬಾರದು ಮತ್ತು ಅದನ್ನು ಹೇಗೆ ಸದುಪಯೋಗಪಡಿಸಿಕೊಳ್ಳಬಹುದು ಎನ್ನುವುದು ಈ ಕೆಳಗೆ ಇದೆ.

**ಸಾವಯವ ಗೊಬ್ಬರ ತಯಾರಿಕೆಯಲ್ಲಿ:** ಬೇಯಿಸಿದ ಮೊಟ್ಟೆಯ ನೀರು ಗೊಬ್ಬರ ತಯಾರಿಕೆಯ ಪ್ರಕ್ರಿಯೆಯನ್ನು ತ್ವರಿತಗೊಳಿಸುತ್ತದೆ. ನೀರಿನ ಖನಿಜಗಳು ವೇಗವರ್ಧಕವಾಗಿ ಕಾರ್ಯನಿರ್ವಹಿಸುತ್ತವೆ ಅದು ಒಡೆಯಲು ಸಹಾಯ ಮಾಡುತ್ತದೆ ಮತ್ತು ವೇಗವಾಗಿ ಸಾವಯವ ಗೊಬ್ಬರ ತಯಾರಿಕೆಯಲ್ಲಿ ಇದು ಸಹಾಯ ಮಾಡುತ್ತದೆ. ನಿಮ್ಮ ಮಿಶ್ರಗೊಬ್ಬರ ತಯಾರಿಕೆಯ ಬ್ಯಾಗ್ ಒಳಗೆ ಮೊಟ್ಟೆ ಬೇಯಿಸಿದ ನೀರನ್ನು ಹಾಕುವುದರಿಂದ ಇದು ಪ್ರಯೋಜನಕಾರಿ ಸೂಕ್ಷ್ಮಜೀವಿಗಳ ಬೆಳವಣಿಗೆಯಲ್ಲಿ ಸಹಾಯ ಮಾಡುತ್ತದೆ ಮತ್ತು ತ್ಯಾಜ್ಯ ಆಹಾ ರವನ್ನು ಒಡೆಯುವಂತೆ ಮಾಡುತ್ತದೆ. ಅತ್ಯುತ್ತಮ ಮತ್ತು ಪೋಷಕಾಂಶ ಭರಿತ ಸಾವಯವ ಮಿಶ್ರಗೊಬ್ಬರವನ್ನಾಗಿಸಲು ಸಹಕರಿಸುತ್ತದೆ. ಇದು ಮಿಶ್ರಗೊಬ್ಬರ ಪ್ರಕ್ರಿಯೆಗೆ ಪೂರಕವಾದಂತಹ ತೇವಾಂಶವನ್ನೂ ಸಹ ಒದಗಿಸುತ್ತದೆ.

# ಮಾನಸಿಕ ದೃಷ್ಟಿಯಿಂದ ಕುಂಭದ ಮಹತ್ವ



☛ ಸದ್ಗುರು ಡಾ. ಚಾರುದತ್ತ ಪಿಂಗಳೆ
• ಉದಯವಾಹಿನಿ ವಿಶೇಷ

**ಪ್ರಸ್ತಾವನೆ:** ಕುಂಭಮೇಳವು ಭಾರತೀಯ ಸಂಸ್ಕೃತಿ ಮತ್ತು ಧಾರ್ಮಿಕ ಶ್ರದ್ಧೆಯ ಮಹಾನ್ ಪ್ರತೀಕವಾಗಿದೆ, ಆದರೆ ಅದರ ಮಹತ್ವವು ಕೇವಲ ಆಧ್ಯಾತ್ಮಿಕತೆಗೆ ಮಾತ್ರ ಸೀಮಿತವಾಗಿಲ್ಲ. ಮಾನಸಿಕ ಸ್ವಾಸ್ಥ್ಯ, ಆತ್ಮಚಿಂತನೆ ಮತ್ತು ಸಾಮೂಹಿಕ ಊರ್ಜೆಯ ಅನುಭವಕ್ಕೆ ಒಂದು ಅನನ್ಯ ಅವಕಾಶವನ್ನು ಒದಗಿಸುತ್ತದೆ. ಲಕ್ಷಾಂತರ ಶ್ರದ್ಧಾಳುಗಳು ಮತ್ತು ಸಾಧಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದಾಗ, ಅವರು ತಮ್ಮ ಮನಸ್ಸು, ಮೆದುಳು ಮತ್ತು ಆತ್ಮವನ್ನು ಶುದ್ಧೀಕರಿಸುವ ಮಾರ್ಗದಲ್ಲಿ ಮುಂದುವರಿಯಲು ಪ್ರಾರಂಭಿಸುತ್ತಾರೆ. ಈ ವರ್ಷದ ಕುಂಭವು ಮಹಾಕುಂಭವಾಗಿದ್ದು, ಇದು ಮಾನವನ ಮನಸ್ಸಿನ ಮೇಲೆ ಹೆಚ್ಚು ಸಕಾರಾತ್ಮಕ ಪರಿಣಾಮ ಬೀರುತ್ತದೆ.

**ಆಧ್ಯಾತ್ಮಿಕ ಶಾಂತಿ ಮತ್ತು ಮಾನಸಿಕ ಸ್ಥಿರತೆ:** ಕುಂಭಮೇಳದ ಭಕ್ತಿಮಯ ವಾತಾವರಣವು ಸಕಾರಾತ್ಮಕ ಊರ್ಜೆ, ಆತ್ಮಶಾಂತಿಯ ಮೂಲವಾಗಿದೆ. ಗಂಗಾ, ಯಮುನಾ ಮತ್ತು ಅದೃಶ್ಯ ಸರಸ್ವತಿಯ ಸಂಗಮದಲ್ಲಿ ಸ್ನಾನ ಮಾಡುವ ಶ್ರದ್ಧೆ ಆತ್ಮದ ಶುದ್ಧೀಕರಣ ಮತ್ತು ಪಾಪಗಳಿಂದ ವಿಮೋಚನೆಯ ಸಾಧನವೆಂದು ಪರಿಗಣಿಸಲಾಗಿದೆ. ಈ ಧಾರ್ಮಿಕ ಶ್ರದ್ಧೆಯು ಮನಸ್ಸನ್ನು ನಕಾರಾತ್ಮಕತೆಯಿಂದ ಮುಕ್ತಗೊಳಿಸುತ್ತದೆ. ಹಾಗೂ ಮಾನಸಿಕ ಶಾಂತಿ ಮತ್ತು ಸ್ಥಿರತೆಯನ್ನು ಒದಗಿಸುತ್ತದೆ.

**ಸಾಮೂಹಿಕ ಧ್ಯಾನ ಮತ್ತು ಊರ್ಜೆಯ ಅನುಭವ:** ಕುಂಭಮೇಳದಲ್ಲಿ, ಕೋಟ್ಯಂತರ ಜನರು ಸಾಮೂಹಿಕವಾಗಿ ಧ್ಯಾನ, ಪ್ರಾರ್ಥನೆ ಮತ್ತು ಭಕ್ತಿಯಲ್ಲಿ ತೊಡಗುತ್ತಾರೆ. ಈ ಸಾಮೂಹಿಕ ಊರ್ಜೆಯು ಒಂದು ವಿಶಿಷ್ಟ ಮಾನಸಿಕ ಅನುಭವವನ್ನು ನೀಡುತ್ತದೆ. ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ, ಒಬ್ಬ ವ್ಯಕ್ತಿಯು ದೈನಂದಿನ ಜೀವನದ ಒತ್ತಡ ಮತ್ತು ಚಿಂತೆಗಳಿಂದ ಮುಕ್ತನಾಗಿ, ಹೊಸ ಶಕ್ತಿ ಮತ್ತು ಉತ್ಸಾಹವನ್ನು ಅನುಭವಿಸುತ್ತಾನೆ. ವಿದೇಶಿ ಚಿತ್ರಕಾರನೊಬ್ಬ ಕುಂಭಮೇಳದಲ್ಲಿ ಬಣ್ಣಗಳ ಸಂಗಮವನ್ನು ನೋಡಲು ಬಂದಿದ್ದರು. ಆದರೆ ಇಲ್ಲಿಗೆ ಬಂದ ನಂತರ, ಇಲ್ಲಿನ ಭಕ್ತಿ, ಶ್ರದ್ಧೆ, ಆಚರಣೆಗಳು, ಸಂಘಟನೆ, ಆತ್ಮೀಯತೆ, ಸಾಂಸ್ಕೃತಿಕ ಶ್ರೇಷ್ಠತೆ ಇತ್ಯಾದಿಗಳನ್ನು ನೋಡಿ ಆಶ್ಚರ್ಯಚಕಿತರಾದರು ಮತ್ತು ಭಾರತದ ಆಧ್ಯಾತ್ಮಿಕ ಸಂಸ್ಕೃತಿಯ ಮಾರ್ಗವನ್ನು ಅನುಸರಿಸಲು ಪ್ರಾರಂಭಿಸಿದರು. ಇಂತಹ ಹಲವು ಉದಾಹರಣೆಗಳು ಕುಂಭಮೇಳದಲ್ಲಿ ಕಂಡುಬರುತ್ತವೆ. ಇದು ಸಾಮೂಹಿಕ ಉಪಾಸನೆಯ ಪರಿಣಾಮ.

**ಧಾರ್ಮಿಕ ಶ್ರದ್ಧೆ ಮತ್ತು ಮಾನಸಿಕ ಸದೃಢತೆ:** ಇಲ್ಲಿ ಪ್ರತಿದಿನ ಸಂತರು ಮತ್ತು ವಿದ್ವಾಂಸರಿಂದ ಪ್ರವಚನಗಳು ನಡೆಯುತ್ತವೆ, ಇದು ಮಾನಸಿಕ ಶಕ್ತಿಯನ್ನು ಹೆಚ್ಚಿಸುತ್ತದೆ. ಅವರು ನೀಡುವ ಜೀವನ ದರ್ಶನ ಮತ್ತು ಆಧ್ಯಾತ್ಮಿಕ ಮಾರ್ಗದರ್ಶನವು ವ್ಯಕ್ತಿಯ ಜೀವನದಲ್ಲಿ ಮಾರ್ಗದರ್ಶಿಯಾಗುತ್ತದೆ.



ಉದಯವಾಹಿನಿ ಚಿತ್ರ

ಜೀವನದ ಸಂಕೀರ್ಣತೆಗಳನ್ನು ಸರಳ ದೃಷ್ಟಿಕೋನದಿಂದ ಅರ್ಥಮಾಡಿಕೊಳ್ಳಲು ಮತ್ತು ಪರಿಹರಿಸಲು ನಮಗೆ ಸ್ಫೂರ್ತಿ ನೀಡುತ್ತದೆ. ವ್ಯಕ್ತಿಯ ಮನಸ್ಸಿನ ಸಕಾರಾತ್ಮಕತೆಯನ್ನು ಹೆಚ್ಚಿಸುತ್ತದೆ. ಈ ಶ್ರದ್ಧೆಯು ಆತ್ಮವಿಶ್ವಾಸ ಮತ್ತು ಮಾನಸಿಕ ಸಮತೋಲನವನ್ನು ಬಲಪಡಿಸುತ್ತದೆ.

**ಆತ್ಮ ಚಿಂತನೆ ಮತ್ತು ಆತ್ಮ ವಿಕಾಸ:** ಕುಂಭಮೇಳದ ಅನುಭವವು ವ್ಯಕ್ತಿಯನ್ನು ಆತ್ಮಾವಲೋಕನ, ಆಧ್ಯಾತ್ಮಿಕ ಬೆಳವಣಿಗೆಯ ಕಡೆಗೆ ಪ್ರೇರೇಪಿಸುತ್ತದೆ. ಈ ಕಾರ್ಯಕ್ರಮವು ಕೇವಲ ಧಾರ್ಮಿಕ ಮಾತ್ರವಲ್ಲ, ಜೀವನದ ಉದ್ದೇಶವನ್ನು ಅರ್ಥಮಾಡಿಕೊಳ್ಳಲು ಮತ್ತು ಆತ್ಮಾವಲೋಕನದ ಒಂದು ವೇದಿಕೆಯಾಗಿದೆ. ಮಾನಸಿಕ ಆರೋಗ್ಯಕ್ಕೆ ಆತ್ಮಾವಲೋಕನ ಅತ್ಯಂತ ಆವಶ್ಯಕವಿದೆ ಮತ್ತು ಕುಂಭ ಈ ಮಾರ್ಗದಲ್ಲಿ ಒಂದು ಮಹತ್ವಪೂರ್ಣ ಅವಕಾಶವನ್ನು ಒದಗಿಸುತ್ತದೆ. ದೇಶ ಮತ್ತು ವಿದೇಶಗಳಿಂದ ದೊಡ್ಡ ಕೈಗಾರಿಕೋದ್ಯಮಿಗಳು ಮತ್ತು ಕಲಾವಿದರು ಇಲ್ಲಿಗೆ ಬಂದು ತಮ್ಮ ಜೀವನದಲ್ಲಿ ಬಹುದೊಡ್ಡ ಸಕಾರಾತ್ಮಕ ಬದಲಾವಣೆಯನ್ನು ಅನುಭವಿಸುತ್ತಾರೆ.

**ನೈಸರ್ಗಿಕ ವಾತಾವರಣ ಮತ್ತು ಮಾನಸಿಕ ಆರೋಗ್ಯ:** ತ್ರಿವೇಣಿ ನದಿಯ ದಡದಲ್ಲಿರುವ ಕುಂಭಮೇಳದ ನೈಸರ್ಗಿಕ ವಾತಾವರಣವು ಮನಸ್ಸಿಗೆ ಶಾಂತಿ ಮತ್ತು ತಾಜಾತನವನ್ನು ನೀಡುತ್ತದೆ. ನೀರು, ಪರ್ವತಗಳು, ತೆರೆದ ಆಕಾಶದ ನಡುವೆ ಕಳೆಯುವ ಸಮಯವು ಮಾನಸಿಕ ಶಾಂತಿಯ ಭಾವನೆಯನ್ನು ನೀಡುತ್ತದೆ. ಈ ನೈಸರ್ಗಿಕ ಪರಿಣಾಮವು ವ್ಯಕ್ತಿಯನ್ನು ಒತ್ತಡದಿಂದ ಮುಕ್ತಗೊಳಿಸುತ್ತದೆ ಮತ್ತು ಮಾನಸಿಕ ಊರ್ಜೆಯನ್ನು ಪುನಃ ಜಾಗೃತಗೊಳಿಸುತ್ತದೆ. ಇಲ್ಲಿನ ಪ್ರತಿ ಕ್ಷಣವೂ ವ್ಯಕ್ತಿಯ ಜೀವನದಲ್ಲಿ ಶಾಶ್ವತವಾಗಿ ಸ್ಮರಣೀಯ, ಸ್ಫೂರ್ತಿದಾಯಕ ಕ್ಷಣದ ರೂಪವಾಗಿ ಉಳಿಯುತ್ತದೆ.

**ಮಾನಸಿಕ ಸಬಲೀಕರಣ ಮತ್ತು ಜೀವನದ ದೃಷ್ಟಿಕೋನದ ಅಭಿವೃದ್ಧಿ:** ಕುಂಭಮೇಳವು ವ್ಯಕ್ತಿಯ ಆಂತರಿಕ ಮಾನಸಿಕ ಸಬಲೀಕರಣ ಮತ್ತು ಪ್ರಬುದ್ಧತೆಯನ್ನು ಬೆಳೆಸುತ್ತದೆ. ಈ ಅನುಭವವು ವ್ಯಕ್ತಿಗೆ ಆತ್ಮವಿಶ್ವಾಸ ಮತ್ತು ಧೈರ್ಯದಿಂದ ಜೀವನದ ಕಷ್ಟಗಳನ್ನು ಎದುರಿಸಲು ಸ್ಫೂರ್ತಿ ನೀಡುತ್ತದೆ. ಜೀವನಕ್ಕೆ ಸಕಾರಾತ್ಮಕ ತಿರುವು ಸಿಗುತ್ತದೆ. ಇದನ್ನು ನೋಡಿದರೆ, ಕುಂಭಮೇಳವು ಕೇವಲ ಒಂದು ಧಾರ್ಮಿಕ ಉತ್ಸವವಲ್ಲ, ಬದಲಾಗಿ ಇದು ಮಾನಸಿಕ ಮತ್ತು ಭಾವನಾತ್ಮಕ ಆರೋಗ್ಯಕ್ಕೆ ಒಂದು ವಿಶಿಷ್ಟ ಹಬ್ಬವಾಗಿದೆ. ಇಲ್ಲಿನ ವಾತಾವರಣ, ಸಾಧು- ಸಂತರ ಮಾರ್ಗದರ್ಶನ, ಸಾಮೂಹಿಕ ಭಕ್ತಿಯು ವ್ಯಕ್ತಿಗೆ ಮಾನಸಿಕ ಸ್ಥಿರತೆ, ಶಾಂತಿ ಮತ್ತು ಹೊಸ ಶಕ್ತಿಯನ್ನು ಒದಗಿಸುತ್ತದೆ. ಕುಂಭಮೇಳದ ಅನುಭವವು ಜೀವನಕ್ಕೆ ಹೊಸ ದೃಷ್ಟಿಕೋನ, ಸಮತೋಲನ ಮತ್ತು ಸಕಾರಾತ್ಮಕತೆಯನ್ನು ಒದಗಿಸುವ ಪರಿಣಾಮಕಾರಿ ಸಾಧನವಾಗಿದೆ. ಈ ಕುಂಭಮೇಳದಿಂದ ಪಡೆದ ಊರ್ಜೆಯನ್ನು ಸ್ಥಿರವಾಗಿಟ್ಟುಕೊಳ್ಳಲು ಮತ್ತು ಮಾನವನ ಮಾನಸಿಕ ಆರೋಗ್ಯವನ್ನು ಉತ್ತಮವಾಗಿಟ್ಟುಕೊಳ್ಳಲು ಧರ್ಮರಕ್ಷಣೆ ಆವಶ್ಯಕವಾಗಿದೆ. ಆದರೆ ಸಧ್ಯ ಎಲ್ಲೆಡೆ ಹಿಂದೂ ಧರ್ಮದ ಮೇಲೆ ಆಘಾತವಾಗುತ್ತಿದೆ. ಇದಕ್ಕಾಗಿ ಹಿಂದೂಗಳು ಸಂಘಟಿತರಾಗುವುದು ಮತ್ತು ಧರ್ಮವನ್ನು ರಕ್ಷಿಸಲು ಸಾಮೂಹಿಕ ಪ್ರಯತ್ನಗಳನ್ನು ಮಾಡುವುದು ಆವಶ್ಯಕವಾಗಿದೆ. ಈ ವಿಷಯದ ಕುರಿತು ಮಾರ್ಗದರ್ಶನ ನೀಡುವ ಒಂದು ಪ್ರದರ್ಶನವನ್ನು ಹಿಂದೂ ಜನಜಾಗೃತಿ ಸಮಿತಿಯು ಮಹಾಕುಂಭ ಪ್ರದೇಶದಲ್ಲಿ ಏರ್ಪಡಿಸಿದೆ.

**ಸ್ಥಳ :** ಕೈಲಾಶಪುರಿ ಭಾರದ್ವಾಜ ಮಾರ್ಗ ಅಡ್ಡರಸ್ತೆ, ಭಾರದ್ವಾಜ ಪೊಲೀಸ್ ಠಾಣೆ ಹಿಂದೆ, ಸೆಕ್ಟರ್ 6, ಕುಂಭ ಕ್ಷೇತ್ರ, ಪ್ರಯಾಗರಾಜ

**ದಿನಾಂಕ :** ಜನವರಿ 10, 2025 ರಿಂದ ಫೆಬ್ರವರಿ 14, 2025 ರವರೆಗೆ

**ಸಮಯ :** ಬೆಳಿಗ್ಗೆ 9 ರಿಂದ ರಾತ್ರಿ 9 ರವರೆಗೆ ಎಲ್ಲಾ ಭಕ್ತರು ಮತ್ತು ಜಿಜ್ಞಾಸುಗಳು ಈ ಸುವರ್ಣ ಅವಕಾಶವನ್ನು ಬಳಸಿಕೊಳ್ಳಲು ವಿನಂತಿಸಲಾಗಿದೆ. ಈ ಪ್ರದರ್ಶನದಲ್ಲಿ ಭಾಗವಹಿಸಿ ರಾಷ್ಟ್ರ ಮತ್ತು ಧರ್ಮಕ್ಕೆ ಸಂಬಂಧಿಸಿದ ನಿಮ್ಮ ಸಂದೇಹಗಳನ್ನು ಪರಿಹರಿಸಿಕೊಳ್ಳಿರಿ.

**ಸಂಸ್ಕೃತಿ ಸಮುದಾಯಗಳ ಬಾಂಧವ್ಯಗಳ ಅಭಿವೃದ್ಧಿ**

**ಕುಂಭಮೇಳವು ವಿವಿಧ ಸಂಸ್ಕೃತಿಗಳು ಮತ್ತು ಸಮುದಾಯಗಳ ಜನರನ್ನು ಒಗ್ಗೂಡಿಸುತ್ತದೆ. ಈ ಅನುಭವವು ಮಾನಸಿಕ ಸಂತೋಷ ಮತ್ತು ಸಾಮಾಜಿಕ ಏಕತೆಯ ಪ್ರತೀಕವಾಗಿದೆ. ವಿಭಿನ್ನ ಕ್ಷೇತ್ರಗಳಿಂದ ಬಂದಿರುವ ಜನರೊಂದಿಗೆ ಸಂವಹನ ಮತ್ತು ಸಹಭಾಗಿತ್ವ ವ್ಯಕ್ತಿಯನ್ನು ಮಾನಸಿಕವಾಗಿ ಸದೃಢಗೊಳಿಸುತ್ತದೆ. ಅವರಿಗೆ ಸಾಮಾಜಿಕ ಜವಾಬ್ದಾರಿಗಳ ಬಗ್ಗೆ ಅರಿವು ಮೂಡಿಸುತ್ತದೆ. ಪ್ರತಿಯೊಬ್ಬರೂ ತಮ್ಮ ಜಾತಿ, ಸಂಪ್ರದಾಯ, ಸ್ಥಾನ, ಪ್ರತಿಷ್ಠೆಯನ್ನು ಮೀರಿ ಕುಂಭಮೇಳದಲ್ಲಿ ಭಕ್ತನಾಗಿ, ಒಬ್ಬ ಹಿಂದೂವಾಗಿ ಮಾತ್ರ ಭಾಗವಹಿಸುತ್ತಾರೆ. ಈ ವಿಶಿಷ್ಟ ಸಂಗಮವನ್ನು ಇಲ್ಲಿ ನೋಡಲು ಸಿಗುತ್ತದೆ.**

# ಪ್ರತಿ ತಾಲ್ಲೂಕು 5ಸಾವಿರ ಮನೆ,ತಾಲ್ಲೂಕಿಗೊಂದು ನಾಮನಿರ್ದೇಶನ ಫೈನಲ್

## ತಾಲ್ಲೂಕಿಗೊಂದು ಜಾತಿವಾರದಂತೆ ಯಾರಿಗೂ ಅನ್ಯಾಯವಾಗದಂತೆ ನಾಮನಿರ್ದೇಶ ಮಾಡಲು ಪಟ್ಟಿ ಸಿದ್ದಪಡಿಸಲಾಗಿದೆ: ಸಾಗರ್ ಖಂಡ್ರೆ

• **ಉದಯವಾಹಿನಿ, ಚಿಂಚೋಳಿ**

ಈಗಾಗಲೇ ಬೀದರ ಲೋಕಸಭಾ ಕ್ಷೇತ್ರದ ಪ್ರತಿಯೊಂದು ತಾಲ್ಲೂಕಿಗೆ 5 ಸಾವಿರ ಮನೆಗಳು ಮತ್ತು ತಾಲ್ಲೂಕಿಗೊಂದು ಜಾತಿವಾರುದಂತೆ ಯಾರಿಗೂ ಅನ್ಯಾಯವಾಗದಂತೆ ನಾಮನಿರ್ದೇಶ ಮಾಡಲು ಪಟ್ಟಿ ಸಿದ್ದಪಡಿಸಲಾಗಿದೆ ಎಂದು ಬೀದರ ಸಂಸದ ಸಾಗರ್ ಖಂಡ್ರೆ ಹೇಳಿದರು. ತಾಲ್ಲೂಕಿನ ಚಿಮ್ಮಾನಚೋಡ ಗ್ರಾಮದಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ಹಮ್ಮಿಕೊಂಡ ಕಾಂಗ್ರೆಸ್ ಪಕ್ಷದ ಪ್ರಮುಖರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಂಸದ ಸದಸ್ಯರಿಗೆ ವರ್ಷಕ್ಕೆ 5ಕೋಟಿ ಬರುತ್ತದೆ ಕ್ಷೇತ್ರದಲ್ಲಿ 8 ತಾಲ್ಲೂಕುಗಹು ಬರುತ್ತೆ ಪ್ರತಿ ತಾಲ್ಲೂಕಿಗೆ 60ಲಕ್ಷ ರೂ.ಅಭಿವೃದ್ಧಿ ನೀಡುತ್ತೇನೆ ಹಾಗೆಯೇ ಕೇಂದ್ರದ ಯೋಜನೆಗಳು ಸಹ ಕಾರ್ಯಕರ್ತರಿಗೆ ಮುಟ್ಟುವ ಹಾಗೆ ಕೆಲಸ ಮಾಡುತ್ತೇನೆ.

ಕಾರ್ಯಕರ್ತರು ತಾವು ಕೆಲಸದ ಪಟ್ಟಿ ಕೊಡಿ ನಿಮಗೆ ಒಂದೆ ದಿನದಲ್ಲಿ ಅನುದಾನ ಒದಗಿಸಿಕೊಡುತ್ತೇನೆ, ಪೋನ್ ಎಬ್ಬಿಸುತ್ತಿಲ್ಲವೆಂದು ಕಾರ್ಯಕರ್ತರು ಬೇಜಾರು ಆಗಬೇಡಿ ಸದಾ ನಿಮ್ಮ ಜೋತೆ ನಾನಿದ್ದೇನೆ,ಏನಾದರೂ ಕೆಲಸವಿದ್ದರೆ ವಾಟ್ಸಾಪ್ ನಂಬರ್ ಪಡೆಯಿರಿ ಮೇಸೇಜ್ ಮಾಡಿ ತಮಗೆ ಉತ್ತರ ನೀಡುತ್ತೇನೆ ಎಂದರು. ಯಾವುದೇ ಸಮಸ್ಯೆಗಳಿದ್ದರೆ ಕೆಪಿಸಿಸಿ ಅಧ್ಯಕ್ಷರು ಉಸ್ತುವಾರಿ ಸಚಿವರಿಗೆ ಗಮನಕ್ಕೆ ತಂದು ಸಮಸ್ಯೆ ಬಗೆಹರಿಸುತ್ತೇನೆ, ಜ.31ರಿಂದ ಫೆ.13ರವರೆಗೆ ಅಧಿವೇಶನವಿದೆ ಅನುದಾನದ ಬಗ್ಗೆ ಅಭಿವೃದ್ಧಿ ಬಗ್ಗೆ ಚರ್ಚೆ ಮಾಡುತ್ತೇನೆ

**ಕಾಂಗ್ರೆಸ್ ಪಕ್ಷಕ್ಕೆ ಕಾರ್ಯಕರ್ತರ ಶಕ್ತಿ**

ಚಿಂಚೋಳಿ ಆಳಂದ ಸೇರಿದಂತೆ ಎಲ್ಲಾ ತಾಲ್ಲೂಕುಗಳಿಗೆ 5ಸಾವಿರ ಮನೆಗಳು ಬಂದಿವೆ, ಮೊದಲೆ ಸರ್ವೆ ಮಾಡಿದ್ದಾರೆ ಅದರಂತೆ ಬಡ ಜನರಿಗೆ ಮನೆಗಳು ವಿತರಣೆ ಮಾಡಲಾಗುತ್ತಿದೆ, ನಾನು ಯುವಕ ಬಹಳಷ್ಟು ಕಲಿಯುವ ಅವಶ್ಯಕವಿದೆ, ನಿಮ್ಮಿಂದ ಸಹಕಾರವಿರಲಿ ಎಲ್ಲೋರು ಕೂಡಿಕೊಂಡು ಅಭಿವೃದ್ಧಿ ಮಾಡೋಣ ಎಂದರು. ಕೆಪಿಸಿಸಿ ಉಪಾಧ್ಯಕ್ಷ ಸುಭಾಷ್ ರಾಠೋಡ್ ಮಾತನಾಡಿ ಕಾರ್ಯಕರ್ತರ ಮನಸ್ಸಿನ ಅಂತರಾಳದ ನೋವು ತಿಳಿದುಕೊಳ್ಳಲು ಸಭೆ ಆಯೋಜನೆ ಮಾಡಲಾಗಿದೆ.

ಮನುಷ್ಯ ತಪ್ಪುಗಳು ಮಾಡುತ್ತಾನೆ ಅದನ್ನು ತಿದ್ದಿಕೊಂಡು ಮುಂದೆ ಹೋಗುವವನೆ ಮನುಷ್ಯತ್ವ, ಅತ್ಯಂತ ತಳಮಟ್ಟದ ಕಾರ್ಯಕರ್ತರ ನೋವು ಅರಿತುಕೊಳ್ಳುವ ಬೀದರ ಸಂಸದ ಸಾಗರ್ ಖಂಡ್ರೆ, ಕಾಂಗ್ರೆಸ್ ಪಕ್ಷದ ಶಾಸಕರಿಲ್ಲದ ಕಾರಣ ಶಾಸಕರ ಕೊರತೆ ಇರುವುದರಿಂದ ಅವರ ಕೊರತೆ ಸಂಸದ ಸಾಗರ್ ಖಂಡ್ರೆಯವರು ಮಾಡುತ್ತಾರೆ ಎಂಬ ನಂಬಿಕೆಯಿದೆ.

**ಭಾರತದಲ್ಲಿ ವೈಚಾರಿಕತೆ ಇದೆ:** ಭಾರತ ರಾಜಕೀಯ ಮೆಡಿಯಾ ವಿಷಯ ರಾಜಕೀಯವಾಗಿದೆ,ಮೀಸಲಾತಿ ಎಂಬುವುದು ತಲೆಬ್ಯಾನಿಯಾಗಿದೆ ಎಂದು ಗುಜರಾತ್ ಬಿಜೆಪಿ ಪ್ರಧಾನ ಕಾರ್ಯದರ್ಶಿ ಹೇಳಿದ್ದು ಬಹಳಷ್ಟು ನೋವು ತಂದಿದ್ದು ನಾವೆಲ್ಲರೂ ತಿಳಿದುಕೊಳ್ಳಬೇಕು, ಯುಪಿ, ರಾಜಸ್ಥಾನ,ಮಧ್ಯಪ್ರದೇಶದಲ್ಲಿ ಅಟ್ರಾಸಿಟಿ ಕೇಸ್ ಅತಿಹೆಚ್ಚಾಗಿದೆ ಬಿಜೆಪಿ ಸರ್ಕಾರದಲ್ಲಿ,ಆರ್ಥಿಕ ನೀತಿ ಬಿಜೆಪಿ ಮಾಡುತ್ತಿದ್ದು ಬಡವರ,ದಲಿತರ ವಿರೋಧಿಯಾಗಿದೆ ಎಂದರು.



ಉದಯವಾಹಿನಿ ಚಿತ್ರ

**ಪಂಚ ಗ್ಯಾರಂಟಿ ಯೋಜನೆಗಳು ಮನೆ ಮನೆಗೆ ಮುಟ್ಟುತ್ತಿವೆ,ಚಿಂಚೋಳಿ ಕಾಂಗ್ರೆಸ್ ಪಕ್ಷದ ನೆಲೆಯಿದೆ,ಬರುವ ದಿನಗಳಲ್ಲಿ ಕಾಂಗ್ರೆಸ್ ಗೆಲ್ಲುತ್ತೇವೆ,ಎಂಪಿ ಚುನಾವಣೆಯಲ್ಲಿ ಕ್ಷೇತ್ರದಿಂದ 6ಸಾವಿರ ಹೆಚ್ಚಿನ ಮತಗಳು ಲೀಡ್ ನೀಡಿದ್ದೇವೆ,ಬರುವ ಸ್ಥಳೀಯ ಸಂಸ್ಥೆಯ ತಾಪಂ.ಜಿಪಂ.ಚುನಾವಣೆಗಳಲ್ಲಿ ಸಂಸದರು ಕಾರ್ಯಕರ್ತರ ಬೆನ್ನೆಲುಬಾಗಿ ನಿಲ್ಲಬೇಕು ಆಗ ಕಾರ್ಯಕರ್ತರಿಗೆ ಹುರುಪು ಬರುತ್ತದೆ.**

**- ಶರಣುಪಾಟೀಲ ಮೋತಕಪಳ್ಳಿ ಕಾಂಗ್ರೆಸ್ ವಕ್ತಾರರು ಚಿಂಚೋಳಿ.**

ಅಂಬೇಡ್ಕರ್ ಸಂವಿಧಾನ ಸಮಿತಿ ಸದಸ್ಯರಾಗಲು ವೆಸ್ಟ್ ಬೆಂಗಾಲ್ ದಿಂದ ಗೆದ್ದು ಸದಸ್ಯರಾದರು,ಅದು ಪಾಕಿಸ್ತಾನ ಗೆ ಹೋಯಿತು ಅಂಬೇಡ್ಕರ್ ಸದಸ್ಯತ್ವ ಸ್ಥಾನ ಕೂಡ ಹೋಯಿತು,ಮತ್ತೆ ಕಾಂಗ್ರೆಸ್ ಪಕ್ಷ ಮುಂಬೈಯಲ್ಲಿ ಕಾಂಗ್ರೆಸ್ ಸದಸ್ಯನಿಗೆ ರಾಜಿನಾಮೆ ನೀಡಿಸಿ ತದನಂತರ ಅಂಬೇಡ್ಕರ್ ಅವರಿಗೆ ನಿಲ್ಲಿಸಿ ಅವಿರೋಧವಾಗಿ ಆಯ್ಕೆಗೊಳಿಸಿ ಸಂವಿಧಾನ ಸಮಿತಿ ಸದಸ್ಯರಾದರು,ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸಂಸತ್ತಿನಲ್ಲಿ ಬಿಲ್ಲು ಪಾಸ್ ಮಾಡುತ್ತಿದ್ದರೆ ಅಂಬೇಡ್ಕರ್ ಪುತ್ಥಳಿಯನ್ನು ಸಂಘ ಪರಿವಾರದವರು ಸುಟ್ಟಿದರು, ಸೈದ್ಧಾಂತಿಕವಾಗಿ ಮಾನಸಿಕವಾಗಿ ಗಟ್ಟಿಯಾಗಿರಬೇಕು ನಾವೆಲ್ಲರೂ ಆಗ ಮುಂದೆ ಸಾಗಲು ಸಾಧ್ಯವಾಗುತ್ತದೆ.

ಮುಂಬರುವ ದಿನಗಳು ಎಲ್ಲಾ ಜಿಪಂ ಕ್ಷೇತ್ರದ ಕಾಂಗ್ರೆಸ್ ಪಕ್ಷದಿಂದ ಸಭೆ ಮಾಡುತ್ತೇವೆ

ಸಾಮಾನ್ಯ ಕ್ಷೇತ್ರವಾದರೆ ನಾನು ನಿಲ್ಲುವುದಿಲ್ಲ ಬೇರೆ ಕಾರ್ಯಕರ್ತರಿಗೆ ಚುನಾವಣೆಯಲ್ಲಿ ನಿಲ್ಲಿಸಿ ಬೆಂಬಲ ಸೂಚಿಸುತ್ತೇನೆ ಆದರೆ ಕ್ಷೇತ್ರ ಬಿಟ್ಟು ಎಲ್ಲಿಗೂ ಹೋಗುವುದಿಲ್ಲ,ತಾಪಂ.ಜಿಪಂ,ಚುನಾವಣೆ ಮೀಸಲಾತಿ ಬರಲಿ ಎಲ್ಲಾ ಕಾರ್ಯಕರ್ತರಿಗೆ ವಿಶ್ವಾಸಕ್ಕೆ ತೆಗೆದುಕೊಂಡು ಟಿಕೇಟ್ ನೀಡಿ ಗೆಲ್ಲಿಸೋಣ,ಶಾಸಕರಿಗೆ ಅನುದಾನ ಬರುತ್ತಿದೆ. ಹೆಚ್ಚಿನ ಅನುದಾನಕ್ಕೆ ಬೆಂಗಳೂರು ನಿಯೋಗ ಹೋಗುತ್ತಿದೇವೆ ಹೆಚ್ಚಿನ ಅನುದಾನ ನೀಡಿದರೆ ಕಾರ್ಯಕರ್ತರಿಗೆ ಕೆಲಸ ನೀಡುತ್ತೇವೆ ಇನ್ನು ಹುರುಪು ಬರುತ್ತದೆ ಎಂದರು.

ನಾಗೇಶ್ವರ ಮಾಲಿ ಪಾಟೀಲ,ಅಬ್ದುಲ್ ಬಾಷೀದ್, ಶರಣುಪಾಟೀಲ, ಲಕ್ಷ್ಮಣ ಆವುಂಟಿ, ಪುರಸಭೆ ಅಧ್ಯಕ್ಷ ಆನಂದಕುಮಾರ ಟೈಗರ್, ಸೈಯದ್ ಶಬ್ಬೀರ, ಸಿದ್ದು ಪೂಜಾರಿ,ಲಕ್ಷ್ಮಿದೇವಿ ಮಂಜುನಾಥ ಕೊರವಿ, ಬಸವರಾಜ ಮಾಲಿ ಮಾತನಾಡಿದರು.

ಈ ಸಂದರ್ಭದಲ್ಲಿ ಅಜೀತ್ ಪಾಟೀಲ, ಮಲ್ಲಿಕಾರ್ಜುನರೆಡ್ಡಿ, ಸಂತೋಷ ಗುತ್ತೇದಾರ,ಮಸೂದ್ ಪಟೇಲ, ಜಮೀರ, ಆಕ್ರಂಪಟೇಲ ಚೇಂಗಟಾ, ದೇವೀಂದ್ರಪ್ಪ ಸಾಲೋಳ್ಳಿ, ಜಗನ್ನಾಥ, ಚಿರಂಜೀವಿ ಪಾಪಯ್ಯ, ನರಸಿಂಹಮ್ಲು ಕುಂಬಾರ,ಪ್ರಭುಲಿಂಗ ಲೇವಡಿ, ಮಸ್ತಾನಪಟೇಲ,ಈಶಾಕ್ ಪಟೇಲ, ಮಹ್ಮದ್ ನಾಯ್ಕೋಡಿ, ಅನೀಲಕುಮಾರ, ಶೇಖ್ ಫರೀದ್, ಶರಣರೆಡ್ಡಿ ಮೋಗದುಂಪೂರ ಅನೇಕರಿದ್ದರು.

**ವಿವಿಧ ಯೋಜನೆಯಲ್ಲಿ 45 ಕೋಟಿ ರೂ.ಅನುದಾನ ನೀಡಲಾಗಿದೆ,ಪಂಚ ಯೋಜನೆ ಗ್ಯಾರಂಟಿಗಳು ಪ್ರತಿಯೊಬ್ಬರ ಮನೆ ಬಾಗಿಲಿಗೆ ಮುಟ್ಟುತ್ತಿವೆ ಇದರಿಂದ ಬಹಳಷ್ಟು ಅನುಕೂಲ ಆಗುತ್ತಿದೆ, ಕಾಂಗ್ರೆಸ್ ಪಕ್ಷಕ್ಕೆ ಕಾರ್ಯಕರ್ತರ ಶಕ್ತಿಯಿದೆ, ಕೆಕೆಆರ್ ಡಿ.ಬಿ ಯೋಜನೆಯಲ್ಲಿ 108ಕೋಟಿ ರೂ.ಬಿಡುಗಡೆಯಾಗಿದೆ ಆದರೆ ಚಿಂಚೋಳಿ ಅಭಿವೃದ್ಧಿ ಶೂನ್ಯವಾಗಿದೆ ಇದನ್ನು ಶಾಸಕರಿಗೆ ಜನರು ಕೇಳಬೇಕು. ಬಿಜೆಪಿ ಜೆಡಿಎಸ್ ಏನೆಲ್ಲ ಕುತಂತ್ರ ನಡೆಸಿ ಸರ್ಕಾರಕ್ಕೆ ಕೆಟ್ಟ ಹೆಸರು ತರಲು ಹೊರಟಿದ್ದಾರೆ,ಆದರೆ ಜನರು ನೋಡುತ್ತಿದ್ದಾರೆ,ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಕಲ್ಯಾಣ ಕರ್ನಾಟಕ ಎಲ್ಲಾ ಸಂಸದ ಕ್ಷೇತ್ರಗಳು ಕಾಂಗ್ರೆಸ್ ಗೆದ್ದಿದ್ದೇವೆ,ಚಿಂಚೋಳಿ ವಿಧಾನಸಭಾ ಕ್ಷೇತ್ರದಲ್ಲಿ ಅಲ್ಪ ಮತಗಳಿಂದ ಸೋತಿದೇವೆ ಭಯಬೇಡ ಸರ್ಕಾರ ನಮ್ಮ ಕಾಂಗ್ರೆಸ್ ಸರ್ಕಾರವಿದೆ,ತಾಪಂ. ಜಿಪಂ.ಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲ್ಲುತ್ತವೆ.**

**- ಲಕ್ಷ್ಮಣ ಆವುಂಟಿ, ಅಧ್ಯಕ್ಷರು,ಕಾಂಗ್ರೆಸ್ ಪಕ್ಷದ ಪ್ರಚಾರ ಸಮಿತಿ ಚಿಂಚೋಳಿ**

# ಶಿಕ್ಷಕರಿಗೆ ಸಂಬಳ ನೀಡದೆ ಸತಾಯಿಸುತ್ತಿರುವ ಅನುದಾನಿತ ಶಾಲೆ

• **ಉದಯವಾಹಿನಿ, ಅರಸೀಕೆರೆ**

ಅನುದಾನಿತ ಶಾಲೆಯ ಪ್ರಯೋಗಶಾಲೆ ಸಹಾಯಕರೊಬ್ಬರಿಗೆ ಕಳೆದ 5 ತಿಂಗಳಿನಿಂದ ಸಂಬಳ ನೀಡದೆ ಶಾಲಾ ಆಡಳಿತ ಮಂಡಳಿ ಸಾತಾಯಿಸುತ್ತಿರುವ ಘಟನೆ ಅರಸಿಕೆರೆ ತಾಲ್ಲೂಕಿನಲ್ಲಿನ ತಳಲೂರು ಗ್ರಾಮದಲ್ಲಿನ ಅನುದಾನಿತ ಶಾಲೆಯಾದ ಶ್ರೀ ಚಿತ್ರಲಿಂಗೇಶ್ವರ ಪ್ರೌಢ ಶಾಲೆಯಲ್ಲಿ ನಡೆದಿದೆ.

ಅರಸೀಕೆರೆ ತಾಲ್ಲೂಕಿನ ತಳಲೂರು ಗ್ರಾಮದಲ್ಲಿ ಇರುವ ಸರಕಾರದಿಂದ ಅನುದಾನ ಪಡೆಯುವ ಅನುದಾನಿತ ಪ್ರೌಢ ಶಾಲೆಯಲ್ಲಿ ಕಳೆದ 30 ವರ್ಷಗಳಿಂದ ಕಾರ್ಯ ನಿರ್ವಹಿಸಿ ಕೊಂಡು ಬರುತ್ತಿರುವ ಸಹ ಶಿಕ್ಷಕ ರುದ್ರಪ್ಪ ಎಂಬುವರಿಗೆ ಕಳೆದ 5 ತಿಂಗಳಿಂದ ಸಂಬಳವನ್ನು ಕೊಡದೆ, ಇತ್ತಕಡೆ ಶಾಲಾ ಹಾಜರಾತಿಗೆ ಸಹಿ ಮಾಡಲು ಅವಕಾಶವನ್ನು ಕೊಡದೆ ಸುಖ ಸುಮ್ಮನೆ ತೊಂದರೆ ನೀಡುತ್ತಿರುವ ಬಗ್ಗೆ ಶಾಲೆಯ ಪ್ರಯೋಗಶಾಲೆ ಸಹಾಯಕ ರುದ್ರಪ್ಪ ಆರೋಪಿಸಿದ್ದಾರೆ.

60ಕ್ಕೂ ಹೆಚ್ಚು ಮಕ್ಕಳಿರುವ ಈ ಶಾಲೆಯಲ್ಲಿ ಕೇವಲ ಇಬ್ಬರು ಮಾತ್ರ ಖಾಯಂ ಶಿಕ್ಷಕರಿದ್ದು, ಇವರ ಜೊತೆಗೆ ಒಂದಿಬ್ಬರು ಅತಿಥಿ ಶಿಕ್ಷಕರಿದ್ದಾರೆ. ಅನುದಾನಿತ ಶಾಲೆಯ ಆಡಳಿತ ಮಂಡಳಿಯವರು ಕಳೆದ 5 ತಿಂಗಳಿನಿಂದ ಪ್ರಯೋಗಶಾಲೆ ಸಹಾಯಕರಿಗೆ ಸಂಬಳ ನೀಡಿಲ್ಲ. ಅದೇ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುವ ಇತರ ಶಿಕ್ಷಕರಿಗೆ ಕಳೆದ ಎರಡು ತಿಂಗಳಿಂದ ಸಂಬಳವನ್ನು ನೀಡದೆ ಸಬೂಬು ಹೇಳಿಕೊಂಡು ಬರುತ್ತಿದ್ದು, ಪ್ರಯೋಗಶಾಲೆ ಸಹಾಯಕರಾದ ರುದ್ರಪ್ಪ ಎಂಬುವರಿಗೆ ಮಾತ್ರ ಕಳೆದ 5 ತಿಂಗಳಿಂದಲೇ ಬೇಕಂತಲೇ ಸಂಬಳವನ್ನು ನೀಡದೆ, ಹಾಜರಾತಿಗೆ ಸಹಿ ಮಾಡಲು ಅವಕಾಶ ಕೊಡದೆ ಹಾಜರಾತಿ ಪುಸ್ತಕವನ್ನೇ ಬೀರುವಿನಲ್ಲಿ ಮುಚ್ಚಿಟ್ಟು ಇಲ್ಲಸಲ್ಲದ ಆರೋಪಗಳನ್ನು ಮಾಡಿಕೊಂಡು ಮಾನಸಿಕವಾಗಿ ಹಿಂಸೆ ನೀಡುವುದಲ್ಲದೆ ಆಡಳಿತ ಮಂಡಳಿಯವರು ಹಣಕ್ಕೆ ಬೇಡಿಕೆ ಇಟ್ಟಿದ್ದಾರೆ ಎಂದು ರುದ್ರಪ್ಪ ಆರೋಪಿಸಿದ್ದಾರೆ. ತನ್ನ ಪತಿಗೆ ಕಳೆದ 5 ತಿಂಗಳಿನಿಂದ ಸಂಬಳ ಕೊಡದೆ ತೊಂದರೆ ನೀಡುತ್ತಿರುವ ಬಗ್ಗೆ ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ರುದ್ರಪ್ಪ ಅವರ ಪತ್ನಿ ಪತ್ರದ ಮೂಲಕ ನ್ಯಾಯ ಕೊಡಿಸುವುವಂತೆ ಮನವಿ ಮಾಡಿದ್ದರು ಸಹ ಮೇಲಾಧಿಕಾರಿಗಳಿ ಇಲ್ಲಿಯವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದ್ದಾರೆ.

ಈ ಬಗ್ಗೆ ಅರಸೀಕೆರೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಮೋಹನ್ ಕುಮಾರ್ ಅವರು ಪ್ರತಿಕ್ರಿಯೆ ನೀಡಿದ್ದು, ಈ ಬಗ್ಗೆ ನನ್ನ ಗಮನಕ್ಕೆ ಬಂದಿಲ್ಲ. ಶೀಘ್ರದಲ್ಲಿಯೇ ಈ ವಿಚಾರವಾಗಿ ಆಡಳಿತ ಮಂಡಳಿ ಹಾಗೂ ಶಿಕ್ಷಕರಿಂದ ಮಾಹಿತಿ ಪಡೆಯುತ್ತೇನೆ ಎಂದು ಪತ್ರಿಕೆಗೆ ತಿಳಿಸಿದ್ದಾರೆ.



ಉದಯವಾಹಿನಿ ಚಿತ್ರ

**ಅನುದಾನಿತ ಶಾಲೆಯಾದ ಶ್ರೀ ಚಿತ್ರಲಿಂಗೇಶ್ವರ ಪ್ರೌಢ ಶಾಲೆಯ ಆಡಳಿತ ಮಂಡಳಿ ಶಿಕ್ಷಕ ರುದ್ರಪ್ಪ ಅವರಿಗೆ ಹಾಜರಾತಿಗೆ ಸಹಿ ಮಾಡಲು ಅವಕಾಶ ನೀಡದೆ, ಇತ್ತ ಸರಿಯಾಗಿ ಸಂಬಳವನ್ನು ಕೊಡದೆ ತೊಂದರೆ ನೀಡುತ್ತಿದ್ದು, ಅಧಿಕಾರಿಗಳು ಮಧ್ಯ ಪ್ರವೇಶ ಮಾಡಿ ಸಂಬಳ ಕೊಡಿಸಿ ಕೊಡುವಂತೆ ಶಿಕ್ಷಕ ರುದ್ರಪ್ಪ ಮನವಿ ಮಾಡಿದ್ದಾರೆ -ರುದ್ರಪ್ಪ, ಶಿಕ್ಷಕ**


# ಮೂವರು ಹಂತಕರಿಗೆ ಪೊಲೀಸರ ಗುಂಡೇಟು

• **ಉದಯವಾಹಿನಿ, ಹುಬ್ಬಳ್ಳಿ**

ಹಳೇ ದ್ವೇಷದ ಹಿನ್ನೆಲೆಯಲ್ಲಿ ಎದುರಾಳಿ ಗ್ಯಾಂಗ್ ಯುವಕನನ್ನು ಬರ್ಭರವಾಗಿ ಹತ್ಯೆ ಮಾಡಿ ಪರಾರಿಯಾಗಿದ್ದ ಮೂವರು ಹಂತಕರಿಗೆ ಪೊಲೀಸರು ಗುಂಡು ಹಾರಿಸಿ ಸೆರೆ ಹಿಡಿದಿರುವ ಘಟನೆ ವಿದ್ಯಾನಗರದಲ್ಲಿ ನಡೆದಿದೆ.

ಕಳೆದ ರಾತ್ರಿ ವಿದ್ಯಾನಗರದ ಗೋಲ್ಡನ್ ಹಟ್ ಬಾರ್ ಅಂಡ್ ಫ್ಯಾಮಿಲಿ ರೆಸ್ಟೋರೆಂಟ್‌ನ ಪಾರ್ಕಿಂಗ್ ಜಾಗದಲ್ಲಿ ಹಳೆ ಹುಬ್ಬಳ್ಳಿಯ ಇಂದ್ರಪ್ರಸ್ಥನಗರದ ನಿವಾಸಿ ಆಕಾಶ್ ವಾಲೀಕಿ(22) ಎಂಬಾತನನ್ನು ಚಾಕುವಿನಿಂದ ಇರಿದು ಬರ್ಭರವಾಗಿ ಹತ್ಯೆ ಮಾಡಲಾಗಿತ್ತು.

ದೇಹದ ಹಲವು ಭಾಗಕ್ಕೆ ಮನಬಂದಂತೆ ಇರಿದು ಭೀಕರವಾಗಿ ಕೊಲೆ ಮಾಡಲಾಗಿತ್ತು. ಸಾರ್ವಜನಿಕರು ಇದನ್ನು ನೋಡಿ ಬೆಚ್ಚಿಬಿದ್ದಿದ್ದರು. ಸುದ್ದಿ ತಿಳಿದು ಸ್ಥಳಕ್ಕಾಗಮಿಸಿದ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ತನಿಖೆಗಾಗಿ ವಿಶೇಷ ತಂಡವನ್ನು ರಚಿಸಿದ್ದರು. ಮುಂಜಾನೆ ಹಂತಕರು ಅಡಗಿದ್ದ ಎಂಟಿಎಸ್ ಕಾಲೋನಿಯ ಪ್ರದೇಶಕ್ಕೆ ಪೊಲೀಸ್ ತಂಡ ತಲುಪಿದಾಗ ಆರೋಪಿಗಳು ತಪ್ಪಿಸಿಕೊಳ್ಳಲು ಯತ್ನಿಸಿದ್ದಾರೆ. ಶರಣಾಗುವಂತೆ ಹಂತಕರಿಗೆ ಎಚ್ಚರಿಕೆ ನೀಡಿದರೂ ಲೆಕ್ಕಿಸದೆ ಪೊಲೀಸರ ಮೇಲೆಯೇ ಹಲ್ಲೆ ನಡೆಸಿ ಪರಾರಿಯಾಗುತ್ತಿದ್ದಾಗ ಇಬ್ಬರು ಪೊಲೀಸ್ ಇನ್ಸ್‌ಪೆಕ್ಟರ್‌ಗಳು ಗಾಳಿಯಲ್ಲಿ ಗುಂಡು ಹಾರಿಸಿದ್ದಾರೆ. ಪೊಲೀಸರ ಎಚ್ಚರಿಕೆಯನ್ನೂ ಲೆಕ್ಕಿಸದೆ ಅವರ ಮೇಲೆಯೇ ದಾಳಿಗೆ ಮುಂದಾದಾಗ ಇನ್‌ಸ್ಪೆಕ್ಟರ್‌ಗಳು ಹಾರಿಸಿದ ಗುಂಡು ಮೂವರ ಆರೋಪಿಗಳ ಕಾಲಿಗೆ ತಗಲಿ ಕುಸಿದು ಬಿದ್ದಿದ್ದಾರೆ. ಗುಂಡೇಟಿಗೆ ಗಾಯಗೊಂಡಿರುವ ಆರೋಪಿಗಳಾದ ಅಭಿಷೇಕ್, ಯಲ್ಲಪ್ಪ ಮತ್ತು ವಿನೋದ್‌ನನ್ನು ವಶಕ್ಕೆ ಪಡೆದು ಕೆಎಂಸಿಆರ್‌ಐ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ. ಇನ್ನು ಕಾರ್ಯಾಚರಣೆ ವೇಳೆ ನಾಲ್ವರು ಪೊಲೀಸ್ ಸಿಬ್ಬಂದಿಗಳು ಗಾಯಗೊಂಡಿದ್ದು, ಅವರೂ ಕೂಡ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.



ಉದಯವಾಹಿನಿ ಚಿತ್ರ

# ಇನ್ಸ್ಟಾಗ್ರಾಮ್ ಕುರುಡು ಪ್ರೀತಿಗೆ ಗೃಹಿಣಿ ಬಲಿ

• **ಉದಯವಾಹಿನಿ, ಧಾರವಾಡ**

ಇನ್ಸ್ಟಾಗ್ರಾಮ್ ಕುರುಡು ಪ್ರೀತಿಗೆ ಮರುಳಾಗಿ ಗಂಡನನ್ನೂ ಬಿಟ್ಟು ಬಂದ ಗೃಹಿಣಿಯೊಬ್ಬಳು ನೇಣು ಬಿಗಿದುಕೊಂಡು ಆತಹತ್ಯೆ ಮಾಡಿಕೊಂಡ ಘಟನೆ ನಗರದಲ್ಲಿ ನಡೆದಿದೆ.ಈ ಸಂಭಂದ ಧಾರವಾಡ ಉಪನಗರ ಠಾಣೆ ಪೊಲೀಸರು ಪ್ರಿಯಕರನನ್ನು ವಿಜಯ ನಾಯ್ಕರ್‌ನನ್ನು ಬಂಧಿಸಿದ್ದರೆ.

ಧಾರವಾಡ ತಾಲೂಕಿನ ಶಿವಳ್ಳಿ ಗ್ರಾಮದ ಯುವಕ ವಿಜಯ ನಾಯ್ಕರ್.ಈತ ರಾಮದುರ್ಗದ ಶ್ವೇತಾ ಗುಡದಾಪುರ ಎಂಬಾಕೆಯನ್ನು ಇನ್ಸ್ಟಾಗ್ರಾಮ್‌ನಲ್ಲಿ ಮೂಲಕ ಪರಿಚಯ ಮಾಡಿಕೊಂಡು ನಂತರ ಪ್ರೀತಿಗೆ ತಿರುಗಿತ್ತು. ಈ ಮೊದಲೇ ಮದುವೆ ಕೂಡ ಆಗಿದ್ದ ಶ್ವೇತಾ ವಿಜಯ್ ಬೀಸಿದ್ದ ಪ್ರೀತಿಯ ಬಲೆಗೆ ಬಿದ್ದೇ ಬಿಟ್ಟಿದ್ದಳು. ಗಂಡನಿಗೂ ಗೊತ್ತಾಗದಂತೆ ಆತನ ಬೆನ್ನು ಹತ್ತಿ ಬಂದು ಧಾರವಾಡದ ಶ್ರೀನಗರ ಬಡಾವಣೆಯ ಬಾಡಿಗೆ ಮನೆಯಲ್ಲಿದ್ದಳು.ವಿಜಯ್ ಅಲ್ಲಿಗೆ ಬಂದು ಹೋಗುತ್ತಿದ್ದ ಇಬ್ಬರೂ ಮದುವೆ ಕೂಡ ಆಗಬೇಕು ಎಂದುಕೊಂಡಿದ್ದರು.

**ಪ್ರಿಯಕರನ ಬಂಧನ**

ಆದರೆ ಈ ನಡುವೆ ಶ್ವೇತಾಳನ್ನು ಪತ್ತೆ ಹಚ್ಚಿ ಕರೆದುಕೊಂಡು ಹೋಗಲು ಆಕೆಯ ಪತಿ ಹಾಗೂ ಪಾಲಕರು ಬಂದಿದ್ದಾಗ ಅವರಿಗೆ ರೋಪಿ ವಿಜಯ್ ಬೆದರಿಕೆ ಹಾಕಿ ಕಳುಹಿಸಿದ್ದಂತೆ. ಅದಾದ ಬಳಿಕ ವಿಜಯ್ ಹಾಗೂ ಶ್ವೇತಾಳ ಮಧ್ಯೆ ಕಲಹ ಉಂಟಾಗಿತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ತನ್ನ ಕೈಯಲ್ಲಿ ತನ್ನ ಸಾವಿಗೆ ಯಾರೂ ಕಾರಣರಲ್ಲ ಎಂದು ಬರೆದುಕೊಂಡು ನೇಣಿಗೆ ಶರಣಾಗಿದ್ದಳು. ಆದರೆ ಈ ಸಾವಿಗೆ ವಿಜಯನೇ ಕಾರಣ ಎಂದು ಶ್ವೇತಾ ಮನೆಯವರು ದೂರು ದಾಖಲಿಸಿದ್ದರಿಂದ ಇದೀಗ ಪೊಲೀಸರು ವಿಜಯ್‌ನನ್ನು ಬಂಧಿಸಿದ್ದಾರೆ.ಶ್ವೇತಾ ಮದುವೆಯಾಗಿದ್ದರೂ ಕೂಡ ಕುರುಡು ಪ್ರೀತಿಗೆ ಬಲಿಯಾಗಿದ್ದಾಳೆ.

ವಿಜಯನ ಮಾತು ಕೇಳಿ ಮೊದಲ ಪತಿಗೆ ವಿಚ್ಛೇದನ ನೋಟಿಸ್ ಕೂಡ ಕಳುಹಿಸಿದ್ದಳು. ಇಷ್ಟೆಲ್ಲ ಬೆಳವಣಿಗೆ ನಂತರ ಕೊನೆಗೆ ತಾನೇ ಇಹಲೋಕ ತ್ಯಜಿಸಿದ್ದಾಳೆ. ಸದ್ಯ ಆರೋಪಿ ವಿಜಯನನ್ನು ಬಂಧಿಸಿರುವ ಪೊಲೀಸರು ಈ ಪ್ರಕರಣಕ್ಕೆ ಸಂಬಂಧಿ ಸಿದಂತೆ ಹೆಚ್ಚಿನ ವಿಚಾರಣೆ ನಡೆಸುತ್ತಿದ್ದಾರೆ.

# ಕಾಲುವೆಯಲ್ಲಿ ಹೂಳು: ರೈತರ ಗೋಳು

• **ಉದಯವಾಹಿನಿ, ಮುದಗಲ್**

ಇಪ್ಪತ್ತು ಕಿ.ಮೀ. ಭೂ ಪ್ರದೇಶದ ಒಣಭೂಮಿಗೆ ನೀರುಣಿಸುವ ಜಡ ಶಂಕರಲಿಂಗ ಏತ ನೀರಾವರಿ ಯೋಜನೆ ಸಮರ್ಪಕ ನಿರ್ವಹಣೆ ಕೊರತೆಯಿಂದ ಕೊನೆ ಭಾಗದ ರೈತರಿಗೆ ಶಾಪವಾಗಿದೆ. ಅಸಮರ್ಪಕ ನಿರ್ವಹಣೆಯಿಂದ ಕಾಲುವೆಗಳಲ್ಲಿ ಹೂಳು ತುಂಬಿದ್ದು, ಕೆಲ ಭಾಗಗಳಲ್ಲಿ ಗಿಡ, ಗಂಟೆ ಬೆಳೆದಿದೆ.

ನೀರು ಸರಾಗವಾಗಿ ಹರಿಯುತ್ತಿಲ್ಲ. ಇದರಿಂದ ಕೊನೆಯ ಭಾಗದ ರೈತರು ನೀರಿಗಾಗಿ ಪರದಾಡುವಂತಾಗಿದೆ. ಕಾಲುವೆಯಲ್ಲಿ ತುಂಬಿರುವ ಹೂಳು ಸ್ವಚ್ಛಗೊಳಿಸುವಂತೆ ಕೃಷ್ಣ ಭಾಗ್ಯ ಜಲ ನಿಗಮ(ಕೆಬಿಜೆಎನ್‌ಎಲ್)ದ ಅಧಿಕಾರಿಗಳಿಗೆ ಸಲ್ಲಿಸಿದ ಮನವಿಗಳು ಕಸದ ಬುಟ್ಟಿಸೇರಿವೆ. ಈ ಕಾರಣದಿಂದ ಕಾಲುವೆಗಳು ಮೂಲ ಸ್ವರೂಪಗಳನ್ನೇ ಕಳೆದುಕೊಂಡಿವೆ ಎಂದು ರೈತರು ಆರೋಪಿಸುತ್ತಾರೆ. ಕಾಲುವೆ 55 ಕಿ.ಮೀ ವರೆಗೆ ನಿರ್ಮಾಣವಾಗಬೇಕಿತ್ತು. ಆದರೆ 20 ಕಿ.ಮೀ. ವರೆಗೆ ನಿರ್ಮಾಣಗೊಂಡಿದೆ. 55 ಕಿ.ಮೀ ವರೆಗೆ ನಿರ್ಮಾಣಗೊಂಡರೆ ಇನ್ನೂ 12,765 ಹೆಕ್ಟೇರ್ ಭೂಪ್ರದೇಶ ನೀರಾವರಿಗೆ ಒಳಪಡುತ್ತದೆ.

ಲಿಂಗಸುಗೂರು ತಾಲ್ಲೂಕಿನ ಗುಡದನಾಳ, ಪೂಲಬಾವಿ, ಯರಡೋಣಿ, ಹೊನ್ನಳ್ಳಿ, ದೇವರಭೂಪೂರ, ಐದನಾಳ, ಕರಡಕಲ್, ಹುಲಿಗುಡ್ಡ, ಮೇದನಾಪುರು, ಸಜಾಪುರು, ಕುಪ್ಪಗುಡ್ಡ, ಗೌಡೂರು, ಬಂಡೆಬಾವಿ ಸೇರಿ 15 ಗ್ರಾಮಗಳು ನೀರಾವರಿಗೆ ಒಳಪಡುತ್ತಿವೆ ಎಂದು ರೈತರು ಹೇಳುತ್ತಾರೆ. ಈ ಎಲ್ಲಾ ಕಾರಣಗಳಿಂದ ಕಾಲುವೆ ಕೊನೆ ಅಂಚಿಗೆ ಸಕಾಲಕ್ಕೆ ನೀರು ತಲುಪದೆ ಕೃಷಿ ಚಟುವಟಿಕೆಗೆ ಪ್ರತಿವರ್ಷ ಹಿನ್ನಡೆಯಾಗಿ ಇಳುವರಿ ಕುಸಿಯುತ್ತಿದೆ ಎಂದು ಅಸಮಾಧಾನ ಹೊರಹಾಕಿದರು.ಕೃಷ್ಣ ಭಾಗ್ಯ ಜಲ ನಿಗಮ ಅಧಿಕಾರಿಗಳು ನೀರು ನಿರ್ವಹಣೆ ಸಂಘ ಮಾಡಲು ರೈತರಿಗೆ ಜಾಗ್ರತಿ ಮೂಡಿಸಿಲ್ಲ. ರಾಂಪೂರು ಏತ ನೀರಾವರಿ ವ್ಯಾಪ್ತಿಯಲ್ಲಿ ಒಂದು ನೀರು ನಿರ್ವಹಣೆ ಸಂಘ ಇಲ್ಲ.

ಲಕ್ಷ್ಮಣ ರೈತಪಸ್ತುತ ಕಾಲುವೆಗೆ ನಿಗದಿಪಡಿಸಿರುವ ವಾರಬಂದಿ ನೀರು ರೈತರಿಗೆ ಸಾಲುತ್ತಿಲ್ಲ. ಕಾಲುವೆ ಸಂಪೂರ್ಣ ದುರಸ್ತಿಗೆ ಕ್ರಿಯಾಯೋಜನೆ ಸಿದ್ದಪಡಿಸಬೇಕು.

ಹೂಳು ಗಿಡಗಂಟೆಗಳನ್ನು ತೆರವುಗೊಳಿಸಬೇಕು ಶಿವಪುತ್ರಗೌಡ ಜಿಲ್ಲಾಧ್ಯಕ್ಷ ರೈತ ಸಂಘಗ್ರಾಮ ಪಂಚಾಯಿತಿಯಲ್ಲಿ ಮಾಡಿದ ಕಾಮಗಾರಿಗಳನ್ನೇ ಕೆಬಿಜೆಎನ್ ಎಲ್ ಅಧಿಕಾರಿಗಳು ಕ್ರಿಯಾಯೋಜನೆ ತಯಾರಿಸಿ ತಾವು ಕಾಮಗಾರಿ ಮಾಡಿದ್ದೇವೆ ಎನ್ನುತ್ತಾರೆ ವೈಜನಾಥ ಪಾಟೀಲ ಎಂಜಿನಿಯರ್ ಕೆಬಿಜೆಎನ್‌ಎಲ್‌ಉಪ ಕಾಲುವೆಗಳ ಹೂಳು ತೆರವುಗೊಳಿಸಲು ಗ್ರಾಮ ಪಂಚಾಯಿತಿಗೆ ನೀಡಲಾಗಿದೆ. ಬಾಕಿ ಕಾಲುವೆಗಳ ಸ್ವಚ್ಛತೆಯನ್ನು ನೀರಾವರಿ ಇಲಾಖೆ ಮಾಡುತ್ತದೆ. ಪರಿಶೀಲನೆ ಮಾಡಿ ಕಾಮಗಾರಿ ಕೈಗೊಳ್ಳುತ್ತೇವೆ.



ಉದಯವಾಹಿನಿ ಚಿತ್ರ

**ನಿರ್ಲಕ್ಷದಿಂದ ಕಾಲುವೆ ಸ್ವಚ್ಛಗೊಂಡಿಲ್ಲ**

**ರಾಂಪೂರು ಏತ ನೀರಾವರಿ ಮುಖ್ಯ ಹಾಗೂ ಉಪ ಕಾಲುವೆಗಳು ಹಾಳಾಗಿದ್ದರಿಂದ ಕಾಲುವೆಯಲ್ಲಿ ಹೂಳು ತುಂಬಿದೆ. ಕಾಲುವೆ ದಡದ ಮೇಲೆ ಮುಳ್ಳುಕಂಟಿ ಬೆಳೆದು ನಿಂತಿವೆ. ಹರಿಯುವ ನೀರು ಮುಂದೆ ಸಂಚರಿಸುವುದಕ್ಕೆ ತೊಂದರೆಯಾಗುತ್ತಿದೆ. ಮರಗಳ ಸೊಪ್ಪು ಕಾಲುವೆಯಲ್ಲಿ ಬಿದ್ದು ಕಸದ ರಾಶಿಯಾಗುತ್ತಿದೆ. ಕಾಲುವೆ ಬದಿಯಲ್ಲಿರುವ ಮುಳ್ಳು ಕಟಾವು ಮಾಡಿಸಲು ಪ್ರತಿವರ್ಷ ಲಕ್ಷಾಂತರ ರೂಪಾಯಿ ಅನುದಾನ ಮಂಜೂರಾದರೂ ಅಧಿಕಾರಿಗಳ ನಿರ್ಲಕ್ಷದಿಂದ ಕಾಲುವೆ ಸ್ವಚ್ಛಗೊಂಡಿಲ್ಲ. ಕಾಲುವೆಗೆ ಹಾಕಿದ ಸಿಮೆಂಟ್ ಲೈನಿಂಗ್ ಹಾಳಾಗಿದೆ. ಹಾಳಾದ ಕಾಲುವೆ ದುರಸ್ತಿ ಮಾಡಿಸಿಲ್ಲ. ಕಾಲುವೆಯಲ್ಲಿನ ಹೂಳು ತೆಗೆದು ದುರಸ್ತಿ ಮಾಡಿಸಿ ಕೊಡಿ ಎಂದು ರೈತರು ಅನೇಕ ಬಾರಿ ಅಧಿಕಾರಿಗಳಿಗೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ.**

# ಪಿಗ್ಮಿ ಕಲೆಕ್ಷನ್ ಏಜೆಂಟ್ ಆತ್ಮಹತ್ಯೆ

• **ಉದಯವಾಹಿನಿ, ಯಾದಗಿರಿ**

ಫೈನಾನ್ಸ್‌ನಲ್ಲಿ ಪಿಗ್ಮಿ ಕಲೆಕ್ಷನ್ ಹಣವನ್ನು ಸ್ವಂತಕ್ಕೆ ಬಳಸಿಕೊಂಡಿರುವ ಆರೋಪ ಮಾಡಿದ್ದಕ್ಕೆ ಮನನೊಂದು ಹಣ ಕಲೆಕ್ಷನ್ ಮಾಡುತ್ತಿದ್ದ ಏಜೆಂಟ್ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಯಾದಗಿರಿ ಜಿಲ್ಲೆಯ ಸುರಪುರ ನಗರದ ರಂಗಂಪೇಟ ಬಡಾವಣೆಯಲ್ಲಿ ನಡೆದಿದೆ. ಮೃತನನ್ನು ಮಲ್ಲಿಕಾರ್ಜುನ (40) ಎಂದು ಗುರುತಿಸಲಾಗಿದೆ. ಕಳೆದ ಕೆಲ ವರ್ಷಗಳಿಂದ ಸುರಪುರದ ಮಹಾಲಕ್ಷ್ಮಿ ಫೈನಾನ್ಸ್‌ನಲ್ಲಿ ಮಲ್ಲಿಕಾರ್ಜುನ ಪಿಗ್ಮಿ ಕಲೆಕ್ಟ್ ಮಾಡುತ್ತಿದ್ದರು. ಈ ವೇಳೆ ಪಿಗ್ಮಿ ಹಣದಲ್ಲಿ 5 ಲಕ್ಷ ರೂ. ವ್ಯತ್ಯಾಸ ಕಂಡುಬಂದಿದ್ದು, ಫೈನಾನ್ಸ್ ಮಾಲೀಕರು ಹಣ ಕಟ್ಟದೆ ಸ್ವಂತಕ್ಕೆ ಬಳಕೆ ಮಾಡಿಕೊಂಡಿರುವುದಾಗಿ ಆರೋಪಿಸಿದ್ದಾರೆ. ಜೊತೆಗೆ 5 ಲಕ್ಷ ರೂ. ಹಣವನ್ನು ಮೃತ ಮಲ್ಲಿಕಾರ್ಜುನಗೆ ಕಟ್ಟುವಂತೆ ತಿಳಿಸಿದ್ದಾರೆ. ಇದಕ್ಕೆ ಮನನೊಂದ ಮಲ್ಲಿಕಾರ್ಜುನ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

# ಜಲಜೀವನ್ ಯೋಜನೆಯ ಕಾಮಗಾರಿ: ತಾಲ್ಲೂಕು ಮಟ್ಟದ ಪ್ರಗತಿ ಪರಿಶೀಲನೆ

## ಕಾಲಮಿತಿಯಲ್ಲಿ ತಾಲ್ಲೂಕಿನಲ್ಲಿ ಎಲ್ಲಾ ಕಾಮಗಾರಿ ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು: ಹರೀಶ್ ಪೂಂಜ

• **ಉದಯವಾಹಿನಿ, ಬೆಳ್ತಂಗಡಿ**

ತಾಲ್ಲೂಕಿನ 48 ಗ್ರಾಮ ಪಂಚಾಯಿತಿ ಮೂಲಕ ಜಲಜೀವನ್ ಮಿಷನ್ ಯೋಜನೆಯಲ್ಲಿ 87.50 ಕೋಟಿ ವೆಚ್ಚದ ಕಾಮಗಾರಿಯನ್ನು ಅನುಷ್ಠಾನ ಮಾಡಲಾಗುತ್ತಿದ್ದು, ಪ್ರಧಾನಿ ನರೇಂದ್ರ ಮೋದಿ ಅವರ ಮಹಾತ್ಮಕಾಂಕ್ಷೆಯ ಈ ಯೋಜನೆಯಲ್ಲಿ ಮನೆ, ಮನೆಗೆ ಕುಡಿಯುವ ನೀರನ್ನು ಒದಗಿಸುವುದು ಪ್ರಮುಖ ಉದ್ದೇಶವಾಗಿದೆ' ಎಂದು ಶಾಸಕ ಹರೀಶ್ ಪೂಂಜ ಹೇಳಿದರು.

ಗುರುವಾಯನಕೆರೆ ಕಿನ್ನಮ್ಮ ಯಾನೆ ಗುಣವತಿ ಅಮ್ಮ ಸಭಾ ಭವನದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ವತಿಯಿಂದ ನಡೆದ ಜಲಜೀವನ್ ಮಿಷನ್ ಯೋಜನೆಯ ಕಾಮಗಾರಿಗಳ ತಾಲ್ಲೂಕು ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

'ಬಹುಗ್ರಾಮ ಯೋಜನೆಯಲ್ಲಿ ಇಳಂತಿಲದಿಂದ ಆರಂಭಗೊಂಡು 13 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರನ್ನು ಒದಗಿಸುವ ಯೋಜನೆ ನಡೆಯುತ್ತಿದೆ. ಅಲಂಕಾರಿನಲ್ಲಿ ಆಗುತ್ತಿರುವ ಬಹುಗ್ರಾಮ ಯೋಜನೆಯಲ್ಲಿ 4 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರು ಪೂರೈಸಲಾಗುವುದು ಉಳಿದ ಗ್ರಾಮಗಳಲ್ಲಿ ಜಲಜೀವನ್ ಮಿಷನ್ ಕಾಮಗಾರಿ ನಡೆಯುತ್ತಿದೆ. ಜಲಜೀವನ್ ಮಿಷನ್ ಕಾಮಗಾರಿಯಲ್ಲಿ ಆಗುತ್ತಿರುವ ವಿಳಂಬ ನೀತಿ, ತಾಂತ್ರಿಕ ಸಮಸ್ಯೆ ಹಾಗೂ ಗುತ್ತಿಗೆದಾರರು ಸಮರ್ಪಕವಾಗಿ ಕಾಮಗಾರಿ ನಿರ್ವಹಿಸಲು ಆಗುತ್ತಿರುವ ತೊಂದರೆಗಳ ಅವಲೋಕನ ನಡೆಸಲಾಗುವುದು.

ಕಾಲ ಮೀತಿಯಲ್ಲಿ ತಾಲ್ಲೂಕಿನಲ್ಲಿ ಎಲ್ಲಾ ಕಾಮಗಾರಿ ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು' ಎಂದು ತಿಳಿಸಿದರು. ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಜಗದೀಪ್ ಜೆ. ಪೂರಕ ಮಾಹಿತಿ ನೀಡಿದರು.

ಕೆಲವು ಕಡೆ ಎರಡು ವರ್ಷ ಕಳೆದರೂ, ಪೈಪ್ ಲೈನ್ ಮಾಡದ ಹಾಗೂ ಕಾಮಗಾರಿ ಆರಂಭಿಸಲು ಕ್ರಮ ಕೈಗೊಳ್ಳದ ಅಧಿಕಾರಿ ಹಾಗೂ ಗುತ್ತಿಗೆದಾರರನ್ನು ಶಾಸಕರು ತರಾಟೆಗೆ ತೆಗೆದುಕೊಂಡರು. ಶಾಸಕ ಹರೀಶ್ ಪೂಂಜ ನೇತೃತ್ವದಲ್ಲಿ ಗುರುವಾಯನಕೆರೆ ಕಿನ್ನಮ್ಮ ಯಾನೆ ಗುಣವತಿ ಅಮ್ಮ ಸಭಾ ಭವನದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ವತಿಯಿಂದ ಜಲಜೀವನ್ ಮಿಷನ್ ಯೋಜನೆಯ ಕಾಮಗಾರಿಗಳ ತಾಲ್ಲೂಕು ಮಟ್ಟದ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

**ಪ್ರತಿ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿ, ಅಧ್ಯಕ್ಷ ಹಾಗೂ ಉಪಾಧ್ಯಕ್ಷರು ತಮ್ಮ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಆದ ಕಾಮಗಾರಿಗಳ ಪ್ರಗತಿಯ ವಿವರ, ಬಾಕಿ ಕಾಮಗಾರಿ ಹಾಗೂ ಜನರಿಗೆ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಮಾಹಿತಿ ನೀಡಿದರು.ಕಾಮಗಾರಿ ಬಾಕಿಯಾಗಿರುವ ಬಗ್ಗೆ ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಂದ ಮಾಹಿತಿ ಪಡೆದ ಶಾಸಕ, ಮಾರ್ಚ್ 15ರ ಒಳಗೆ ಎಲ್ಲಾ ಕಾಮಗಾರಿ ಪೂರ್ಣಗೊಳಿಸುವಂತೆ ಸೂಚನೆ ನೀಡಿದರು**

**-ಹರೀಶ್ ಪೂಂಜ, ಶಾಸಕ**




ಉದಯವಾಹಿನಿ ಚಿತ್ರ

**ಗುತ್ತಿಗೆದಾರರಿಗೆ ಶಾಸಕ ತರಾಟೆ**

**ಜಲಜೀವನ್ ಮಿಷನ್ ಯೋಜನೆಗೆ ಕೇಂದ್ರ ಸರ್ಕಾರ ಶೇ 50 ಹಾಗೂ ರಾಜ್ಯ ಸರ್ಕಾರ ಶೇ 50 ಅನುದಾನ ನೀಡುತ್ತಿದ್ದು ಬೆಳ್ತಂಗಡಿ ತಾಲ್ಲೂಕಿನಲ್ಲಿ ಜಲಜೀವನ್ ಮಿಷನ್ ಯೋಜನೆಯಲ್ಲಿ 71 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಇದರಲ್ಲಿ 21 ಕಾಮಗಾರಿಗಳು ಪೂರ್ಣಗೊಂಡಿವೆ. 59 ಜಿಲ್ಲೆ ಕಾಮಗಾರಿಗಳಿಗೆ ವಿದ್ಯುತ್ ಸಂಪರ್ಕ ಆಗಬೇಕಿದ್ದು, 22 ಕಾಮಗಾರಿ ಪೂರ್ಣಗೊಂಡಿದೆ. 37 ಕಾಮಗಾರಿ ಪ್ರಗತಿಯಲ್ಲಿದೆ. ತಾಲ್ಲೂಕಿನಲ್ಲಿ ಮುಂದಿನ ಮಾರ್ಚ್ ಒಳಗೆ ಎಲ್ಲಾ ಕಾಮಗಾರಿಯನ್ನು ಪೂರ್ಣಗೊಳಿಸುವ ಗುರಿ ಇಟ್ಟುಕೊಳ್ಳಲಾಗಿದೆ' ಎಂದು ಅವರು ತಿಳಿಸಿದರು -ರಘುನಾಥ್, ದಕ್ಷಿಣ ಕನ್ನಡ ಜಿಲ್ಲಾ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ವಿಭಾಗೀಯ ಎಂಜಿನಿಯರ್**

# ಮಿನಿ ನ್ಯೂಸ್

## ನಕ್ಸಲ್ ರವೀಂದ್ರ ಶೀಘ್ರ ಮುಖ್ಯವಾಹಿನಿಗೆ?

• **ಉದಯವಾಹಿನಿ, ಬಾಳೆಹೊನ್ನೂರು**

ನಕ್ಸಲ್ ಚಳವಳಿಯಲ್ಲಿ ಸಕ್ರಿಯವಾಗಿದ್ದ ಕೋಟೆಹೊಂಡ ರವೀಂದ್ರನನ್ನು ಮುಖ್ಯವಾಹಿನಿಗೆ ಕರೆ ತರಲು ಸಿದ್ಧತೆ ನಡೆದಿದೆ. ಲತಾ ಮುಂಡಗಾರು, ವನಜಾಕ್ಷಿ ಬಾಳೆಹೊಳೆ, ಸುಂದರಿ ಕುತ್ಲೂರು, ಮಾರೆಪ್ಪ ಅರೋಲಿ, ಕೆ.ವಸಂತ(ತಮಿಳುನಾಡು), ಟಿ.ಎನ್.ಜಿಷಾ(ಕೇರಳ) ಒಳಗೊಂಡ ತಂಡ ಜ.8ರಂದು ಮುಖ್ಯವಾಹಿನಿಗೆ ಬಂದಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಮ್ಮುಖದಲ್ಲೇ ಎಲ್ಲರನ್ನು ಸ್ವಾಗತಿಸಲಾಗಿತ್ತು. ಬಳಿಕ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಈ ತಂಡದಿಂದ ಬೇರ್ಪಟ್ಟಿದ್ದ ಕೋಟೆಹೊಂಡ ರವೀಂದ್ರ ಸಂಪರ್ಕಕ್ಕೆ ಸಿಕ್ಕಿರಲಿಲ್ಲ. ಅವರನ್ನು ಸಂಪರ್ಕಿಸುವ ಪ್ರಯತ್ನವನ್ನು ಶಾಂತಿಗಾಗಿ ನಾಗರಿಕ ವೇದಿಕೆ ಮತ್ತು ನಕ್ಸಲ್ ಶರಣಾಗತಿ ಸಮಿತಿ ಮಾಡಿದೆ.'ಮುಂದಿನ ಒಂದು ವಾರದೊಳಗೆ ಮುಖ್ಯವಾಹಿನಿಗೆ ಬರಲಿದ್ದಾರೆ ಎಂದು ಶಾಂತಿಗಾಗಿ ನಾಗರಿಕರ ವೇದಿಕೆಯ ಕೆ.ಎಲ್.ಅಶೋಕ್ ತಿಳಿಸಿದರು.

## ಲಾರಿಗೆ ಬೈಕ್ ಡಿಕ್ಕಿ : ಸ್ಥಳದಲ್ಲೇ ಕಾಲೇಜು ವಿದ್ಯಾರ್ಥಿ ದುರ್ಮರಣ

• **ಉದಯವಾಹಿನಿ, ಹಾಸನ**

ರಸ್ತೆ ಬದಿಯಲ್ಲಿ ಟೈಯರ್ ಪಂಚಾಯತ್ ಆಗಿ ನಿಂತಿದ್ದ ಲಾರಿಗೆ ಬೈಕ್ ಒಂದು ಡಿಕ್ಕಿ ಹೊಡೆದ ಪರಿಣಾಮ ಬೈಕ್ ನಲ್ಲಿದ್ದ ಕಾಲೇಜು ವಿದ್ಯಾರ್ಥಿಯೊಬ್ಬ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ, ಹಾಸನ ತಾಲ್ಲೂಕಿನ ಶಾಂತಿ ಗ್ರಾಮದ ಬಳಿ ತಡರಾತ್ರಿ ನಡೆದಿದೆ. ಮೃತ ವಿದ್ಯಾರ್ಥಿಯನ್ನು ಹಾಸನದ ಸೆಂಟ್ರಲ್ ಕಾಮರ್ಸ್ ಕಾಲೇಜಿನ ದ್ವಿತೀಯ ಪಿಯು ವಿದ್ಯಾರ್ಥಿ, ದಾಸನಪುರ ಗ್ರಾಮ ನಿವಾಸಿ ರೇವಂತ್ (18) ಎಂದು ತಿಳಿದುಬಂದಿದೆ. ಹಾಸನ ತಾಲ್ಲೂಕಿನ, ಶಾಂತಿ ಗ್ರಾಮ ಬಳಿಯ ರಾಷ್ಟ್ರೀಯ ಹೆದ್ದಾರಿ 75ರಲ್ಲಿ ತಡರಾತ್ರಿ ಲಾರಿಯೊಂದು ಟೈರ್ ಪಂಕ್ಚರ್ ಆಗಿ ರಸ್ತೆಯಲ್ಲೇ ನಿಂತಿತ್ತು.

ಇದೇ ಸಂದರ್ಭದಲ್ಲಿ ರಸ್ತೆಯಲ್ಲಿ ಬೈಕ್‌ನಲ್ಲಿ ವೇಗವಾಗಿ ಬಂದ ರೇವಂತ್ ಕತ್ತಲೆಯಲ್ಲಿ ಲಾರಿಯನ್ನು ಗಮನಿಸಿದೆ ಬೈಕ್ ನಿಯಂತ್ರಣ ಕಳೆದುಕೊಂಡು ಹಿಂಬದಿಯಿಂದ ಢಿಕ್ಕಿ ಹೊಡೆದಿದ್ದಾನೆ ಕೂಡಲೇ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಘಟನಾ ಸ್ಥಳಕ್ಕೆ ಶಾಂತಿಗ್ರಾಮ ಪೊಲೀಸರು ಭೇಟಿ, ಪರಿಶೀಲನೆ ನಡೆಸಿದರು.

## ಕಿಡಿಗೇಡಿಗಳ ಕೃತ್ಯಕ್ಕೆ 2,200 ಅಡಿಕೆ ಗಿಡಗಳು ಸುಟ್ಟು ಭಸ್ಮ : ರೈತ ಕಂಗಾಲು

• **ಉದಯವಾಹಿನಿ, ದಾವಣಗೆರೆ**

ಕಿಡಿಗೇಡಿಗಳ ಕೃತ್ಯಕ್ಕೆ ಇದೀಗ 2200 ಅಡಕೆ ಗಿಡಗಳು ಸಂಪೂರ್ಣವಾಗಿ ಸುಟ್ಟು ಕರಕಲಾಗಿರುವ ಘಟನೆ ದಾವಣಗೆರೆ ತಾಲ್ಲೂಕಿನ ತಮಿಳೇನಹಳ್ಳಿ ಕಿಡಿಗೇಡಿಗಳು ಈ ಒಂದು ಕೃತ್ಯ ಎಸಗಿದ್ದಾರೆ.ಹೌದು ದಾವಣಗೆರೆ ಜಿಲ್ಲೆಯ ತಮಲೇನಹಳ್ಳಿ ಈ ಒಂದು ಘಟನೆ ನಡೆದಿದೆ. ರೈತ ಈರಪ್ಪ ಅವರ ಮೂರು ಎಕರೆ ಅಡಕೆ ಬೆಳೆ ಸಂಪೂರ್ಣವಾಗಿ ನಾಶವಾಗಿದೆ. ಎರಡು ವರ್ಷಗಳಿಂದ 6 ಲಕ್ಷ ಖರ್ಚು ಮಾಡಿ ಅಡಿಕೆ ಬೆಳೆ ಬೆಳೆದಿದ್ದರು.ನೆನ್ನೆ ತೋಟದಲ್ಲಿ ಕಳೆ ತೆಗೆದು ಈರಪ್ಪ ದಂಪತಿ ಮನೆಗೆ ತೆರಳಿದ್ದರು.

ಈ ವೇಳೆ ಕಿಡಿಗೇಡಿಗಳು ಒಣ ಬೆಳೆಗಳಿಗೆ ಬೆಂಕಿ ಹಚ್ಚಿದ್ದು, ಇಡಿ ತೋಟಕ್ಕೆ ಬೆಂಕಿ ಆವರಿಸಿದೆ. ಕಿಡಿಗೇಡಿಗಳ ಕೃತಕ್ಕೆ 2200 ಅಡಿಕೆ ಮರಗಳು ಸುಟ್ಟು ಭಸ್ಮವಾಗಿವೆ. ಕಿಡಿಗೇಡಿಗಳ ಕೃತ್ಯಕ್ಕೆ ಇದೀಗ ರೈತ ಈರಪ್ಪ ಕಂಗಾಲಾಗಿದ್ದಾರೆ. ಜಗಳೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಒಂದು ಘಟನೆ ನಡೆದಿದ್ದು, ಯಾರು ಈ ಕೃತ್ಯ ಎಸಗಿದ್ದು, ಎನ್ನುವುದರ ಕುರಿತು ಪೊಲೀಸರು ತನಿಖೆ ಕೈಗೊಂಡಿದ್ದಾರೆ.

## ಗೂಡಂಗಡಿಗೆ ನುಗ್ಗಿದ ಲಾರಿ

• **ಉದಯವಾಹಿನಿ, ಯಲ್ಲಾಪುರ**

ಇಳಿಜಾರಿನಲ್ಲಿ ನಿಲ್ಲಿಸಿದ್ದ ಲಾರಿಯೊಂದು ಹೆದ್ದಾರಿ ಪಕ್ಕದಲ್ಲೇ ಇದ್ದ ಗೂಡಂಗಡಿಗೆ ನುಗ್ಗಿದ ಘಟನೆ ಪಟ್ಟಣ ಸಮೀಪದ ತಣ್ಣೀರಳ್ಳ ಬಳಿ ಜ.28ರ ಮಂಗಳವಾರ ನಡೆದಿದೆ. ಸರಕು ತುಂಬಿದ ಲಾರಿಯೊಂದನ್ನು ರಸ್ತೆಪಕ್ಕ ನಿಲ್ಲಿಸಲಾಗಿದ್ದು, ಇದು ಏಕಾಏಕಿ ಅಂಗಡಿಗೆ ನುಗ್ಗಿದೆ. ಇದು ದೋಸೆ ಗೂಡಂಗಡಿಯಾಗಿದ್ದು, ಲಾರಿ ನುಗ್ಗಿದ ಹೊಡೆತಕ್ಕೆ ಅಂಗಡಿಯಲ್ಲಿದ್ದ ಅಡುಗೆ ಗ್ಯಾಸ್ ಸೋರಿಕೆಯಾಗಿದೆ. ಕೆಲಸದಲ್ಲಿ ನಿರತರಾಗಿದ್ದ ಓರ್ವ ಮಹಿಳೆಗೆ ಅಲ್ಪಸ್ವಲ್ಪ ಗಾಯವಾಗಿದೆ. ಆದರೆ ಅದೃಷ್ಟವಶಾತ್ ಯಾವುದೇ ಸಾವು ಸಂಭವಿಸಿಲ್ಲ. ಗ್ಯಾಸ್ ಸೋರಿಕೆಯ ವಿಷಯ ತಿಳಿದ ಅಗ್ನಿಶಾಮಕದಳ ಪೋಲಿಸರು ಸ್ಥಳಕ್ಕೆ ಧಾವಿಸಿ ಸೋರುತ್ತಿರುವ ಗ್ಯಾಸ್ ಸಿಲಿಂಡರ್ ಹೊರಕ್ಕೆ ತೆಗೆದು ಮುಂದಾಗುವ ಅನಾಹುತ ತಡೆದರು.

ರಸ್ತೆ ಪಕ್ಕದಲ್ಲಿ ಸಾಲುಗಟ್ಟಿ ಲಾರಿ ನಿಲ್ಲಿಸಿ ಚಾಲಕರು ಚಹಾ-ತಿಂಡಿ ಸೇವಿಸುವ ಹೋಟೆಲ್ ಇದಾಗಿದ್ದು, ಈ ವೇಳೆ ಹೋಟೇಲಿನಲ್ಲಿ ಹಲವರಿದ್ದರೂ ಅಚ್ಚರಿಯ ರೀತಿಯಲ್ಲಿ ಪ್ರಾಣಾಪಾಯ ಮಾತ್ರ ಸಂಭವಿಸಿಲ್ಲ ಎನ್ನುವುದು ವಿಶೇಷ ಪೋಲಿಸರು ಸ್ಥಳ ಪರಿಶೀಲಿಸಿದ್ದಾರೆ.

## ಸೋಮಂತ್ತಡ್ಕ ಬಳಿ ಬಸ್ ಅಪಘಾತ ಪಾರಾದ ವಿದ್ಯಾರ್ಥಿಗಳು, ಪ್ರಯಾಣಿಕರು

• **ಉದಯವಾಹಿನಿ, ಬೆಳ್ತಂಗಡಿ**

ಧರ್ಮಸ್ಥಳದಿಂದ ಕಡಿರುದ್ಯಾವರ ಗ್ರಾಮದ ಆಲಂದಡ್ಕ ಸಾಗುವ ಸಾರಿಗೆ ಬಸ್‌ವೊಂದು ಮುಂಡಾಜೆ ಸಮೀಪದ ಸೋಮಂತಡ್ಕ ಸಮೀಪ ಚರಂಡಿಗೆ ಸರಿದ ಘಟನೆ ಜ. 28ರ ಮಂಗಳವಾರ ನಡೆದಿದೆ. ಧರ್ಮಸ್ಥಳದಿಂದ ಉಜಿರೆ ಮಾರ್ಗವಾಗಿ ಮುಂಡಾಜೆ ಮೂಲಕ ಕಡಿರುದ್ಯಾವರದಿಂದ ಆಲಂದಡ್ಕ ಸಾಗುವ ಬಸ್ ಸುಮಾರು 4.30 ಕ್ಕೆ ಅಪಘಾತ ಸಂಭವಿಸಿದೆ. ಬಸ್ ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳೇ ಇದ್ದು ಬಹುತೇಕ ಮಂದಿಗೆ ಗಾಯವಾಗಿವೆ. ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ನಡೆಯುತ್ತಿರುವುದರಿಂದ ಮೋರಿ ಅಳವಡಿಸಲಾಗಿದೆ.

ಈ ಸ್ಥಳದಲ್ಲಿ ಬಸ್ ನ ಸ್ಟೇರಿಂಗ್ ಕಟ್ ಅಥವಾ ಬ್ರೇಕ್ ಫೈಲ್ ನಿಂದಾಗಿ ಬಸ್ ಸಮೀಪದ ಮೋರಿಗೆ ತಾಗಿ ನಿಂತಿದೆ. ಕೆಳಭಾಗದಲ್ಲಿ ಮನೆಯೊಂದಿದ್ದು ಅಲ್ಲಿ ಅಂಗಳದಲ್ಲಿ ಮಕ್ಕಳು ಆಟವಾಡುತ್ತಿದ್ದರು. ಬಸ್ ಜಾರಿ ಮನೆ ಮೇಲೆ ಬೀಳುತ್ತಿದ್ದರೆ ಮತ್ತಷ್ಟು ಅಪಾಯಕ್ಕೆ ಕಾರಣವಾಗುತ್ತಿತ್ತು. ಹಲವು ವಿದ್ಯಾರ್ಥಿಗಳಿಗೆ, ಬಸ್ ಪ್ರಯಾಣಿಕರಿಗೆ ಗಾಯವಾಗಿದ್ದು, ತಕ್ಷಣವೇ ಸ್ಥಳೀಯ ಆಸ್ಪತ್ರೆಗೆ ಸಾಗಿಸಲಾಗಿದೆ.

ಹೆದ್ದಾರಿ ಸಮೀಪದ ಕಾಮಗಾರಿಯಾಗುತ್ತಿದ್ದು, ಕಬ್ಬಿಣದ ಸರಳುಗಳು ತೆರೆದಿದ್ದವು. ವಿದ್ಯಾರ್ಥಿಗಳು ಮುಂಬದಿಯ ಗಾಜು ಒಡೆದು ಇಬ್ಬರು ಮಕ್ಕಳು ಚರಂಡಿಗೆ ಬಿದ್ದಿದ್ದಾರೆ. ಆದರೆ ಕಬ್ಬಿಣದ ಸರಳು ಮಕ್ಕಳಿಗೆ ತಾಗಿಲ್ಲ. ಇಲ್ಲವಾದಲ್ಲಿ ದೊಡ್ಡ ಜೀವ ಹಾನಿ ಸಂಭವಿಸುವ ಸಾಧ್ಯತೆಯಿತ್ತು. ಸ್ಥಳದಲ್ಲಿ ನೆರೆದಿದ್ದ ಸಾರ್ವಜನಿಕರು ಹಾಗೂ ಹೆದ್ದಾರಿ ಕಾಮಗಾರಿ ಸಿಬಂದಿ ತುರ್ತು ಸ್ಪಂದನೆ ನೀಡಿ ಆಸ್ಪತ್ರೆಗೆ ಸಾಗಿಸಲು ಸಹಕರಿಸಿದ್ದಾರೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 12:00 ರಿಂದ 01:30 |
| ಗುಳಿಕ ಕಾಲ | ಬೆಳಿಗ್ಗೆ | 10:30 ರಿಂದ 12:00 |
| ಯಮಗಂಡ ಕಾಲ | ಬೆಳಿಗ್ಗೆ | 07:30 ರಿಂದ 09:00 |

**ಮೇಷ** ನಿಮ್ಮಲ್ಲಿ ಚುರುಕುತನವನ್ನು ನೋಡಬಹುದು. ಆರೋಗ್ಯವು ನಿಮ್ಮನ್ನು ಸಂಪೂರ್ಣವಾಗಿ ಬೆಂಬಲಿಸುತ್ತದೆ. ನಿಮ್ಮ ತಾಯಿಯ ಬದಿಯಿಂದ ಇಂದು ಹಣಕಾಸಿನ ಲಾಭವನ್ನು ಪಡೆಯುವ ಪೂರ್ಣ ಸಾಧ್ಯತೆ ಇದೆ.

**ವೃಷಭ** ಕೆಲಸದ ಒತ್ತಡ ಸ್ವಲ್ಪ ಒತ್ತಡ ತರಬಹುದು. ವ್ಯಾಪಾರದಲ್ಲಿ ಪ್ರಯೋಜನ ಅನೇಕ ವ್ಯಾಪಾರಿಗಳ ಮುಖದ ಮೇಲೆ ಸಂತೋಷವನ್ನು ತರಬಹುದು. ನಿಮ್ಮ ಜೀವನದಲ್ಲಿ ಒಂದು ಭವ್ಯವಾದ ಲಯವನ್ನು ರೂಪಿಸಿಕೊಳ್ಳಿ.

**ಮಿಥುನ** ಒಟ್ಟಾರೆ ಆರೋಗ್ಯ ಉತ್ತಮವಾಗಿದ್ದರೂ ಪ್ರಯಾಣ ಒತ್ತಡಮಯವಾಗ ಮತ್ತು ಕಷ್ಟಕರವೂ ಆಗಿರುತ್ತದೆ. ಹಣಕಾಸಿನಲ್ಲಿ ಸುಧಾರಣೆ ನಿಶ್ಚಿತ. ಮಕ್ಕಳಿಗೆ ಅವರ ಮನೆಗೆಲಸ ಪೂರ್ಣಗೊಳಿಸಲು ಸಹಾಯ ಮಾಡುವ ಸಮಯ.

**ಕರ್ಕಾಟಕ** ಸ್ನೇಹಿತರೊಂದಿಗಿನ ಸಂಜೆ ಆಹ್ಲಾದಕರವಾಗಿದ್ದರೂ ವಿಪರೀತ ತಿನ್ನುವುದು ಮತ್ತು ಹಾರ್ಡ್ ಡ್ರಿಂಕ್ ಗಳ ಬಗ್ಗೆ ಎಚ್ಚರಿಕೆಯಿಂದಿರಿ. ಇಂದು ಸುಮ್ಮನೆ ಕುಳಿತುಕೊಳ್ಳುವ ಬದಲು – ಏಕೆ ಏನನ್ನಾದರೂ ಮಾಡಬಾರದು.

**ಸಿಂಹ** ನೀವು ಅಭಿಪ್ರಾಯ ನೀಡುವಾಗ ಇತರರ ಭಾವನೆಗಳನ್ನು ಪರಿಗಣಿಸಿ. ನೀವು ಮಾಡಿದ ಯಾವುದೇ ತಪ್ಪು ನಿರ್ಧಾರ ಅವರಿಗೆ ಮಾತ್ರ ವ್ಯತಿರಿಕ್ತ ಪರಿಣಾಮ ಉಂಟುಮಾಡದೆ ನಿಮಗೂ ಮಾನಸಿಕ ಒತ್ತಡ ನೀಡುತ್ತದೆ.

**ಕನ್ಯಾ** ಮುಂಗೋಪ ನಿಮ್ಮನ್ನು ಇನ್ನೂ ಹೆಚ್ಚು ತೊಂದರೆಯಲ್ಲಿ ಸಿಲುಕಿಸಬಹುದು. ಆಲೋಚಿಸದೆ ನೀವು ಯಾರಿಗೂ ನಿಮ್ಮ ಹಣವನ್ನು ಕೊಡಬಾರದು, ನೀವು ಮುಂಬರುವ ಸಮಯದಲ್ಲಿ ದೊಡ್ಡ ತೊಂದರೆಗೊಳಗಾಗಬಹುದು.

**ತುಲಾ** ನಿಮ್ಮ ಸಂಜೆ ವಿಭಿನ್ನ ಪ್ರತಿಕ್ರಿಯೆಗಳಿಂದ ಗುರುತಿಸಲ್ಪಡುತ್ತದೆ ಹಾಗೂ ಇದು ನಿಮ್ಮನ್ನು ಉದ್ವಿಗ್ನವಾಗಿರಿಸಬಹುದು. ನಿಮ್ಮ ಸಂತೋಷ ನಿಮಗೆ ನಿರಾಸೆಗಿಂತ ಹೆಚ್ಚು ಆನಂದ ನೀಡುತ್ತದೆ.

**ವೃಶ್ಚಿಕ** ಕೆಲವು ಹಿನ್ನಡೆ ಎದುರಿಸುವ ಸಾಧ್ಯತೆಯಿದೆ. ಧೃತಿಗೆಡಬೇಡಿ ಹಾಗೂ ನಿರೀಕ್ಷಿತ ಫಲಿತಾಂಶ ಪಡೆಯಲು ಕಠಿಣ ಪರಿಶ್ರಮವಹಿಸಿ. ಈ ಹಿನ್ನಡೆಗಳು ನಿಮ್ಮ ಯಶಸ್ಸಿನ ಸೋಪಾನಗಳಾಗಿರಲಿ.

**ಧನಸ್ಸು** ಅನಗತ್ಯ ಆಲೋಚನೆಗಳು ನಿಮ್ಮ ಮನಸ್ಸನ್ನು ಆವರಿಸಬಹುದು. ಖಾಲಿ ಮೆದುಳು ದೆವ್ವಗಳ ಕಾರ್ಯಾಗಾರವಾಗುವುದರಿಂದ ದೈಹಿಕ ವ್ಯಾಯಾಮದಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಲು ಪ್ರಯತ್ನಿಸಿ.

**ಮಕರ** ಧ್ಯಾನ ಮತ್ತು ಯೋಗ ಸಮೇತ ದೈಹಿಕವಾಗಿ ಆರೋಗ್ಯವಾಗಿ ಉಳಿಯಲು ಸಹಾಯ ಮಾಡುತ್ತದೆ. ಇಂದು ನಿಮಗೆ ದೊರಕುವ ಹೊಸ ಹೂಡಿಕೆಯ ಅವಕಾಶಗಳನ್ನು ಅನ್ವೇಷಿಸಿ.

**ಕುಂಭ** ಬಿಡುವಿರದ ಕಾರ್ಯಕ್ರಮದ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ಇಂದು ಮನೆಯ ಯಾವುದೇ ಎಲೆಕ್ಟ್ರಾನಿಕ್ ಸರಕುಗಳ ಕೆಟ್ಟು ಹೋಗುವ ಕಾರಣದಿಂದಾಗಿ ನಿಮ್ಮ ಹಣ ಖರ್ಚಾಗಬಹುದು.

**ಮೀನ** ನಿಮ್ಮ ದಯಾಳು ಪ್ರಕೃತಿ ಇಂದು ಅನೇಕ ಸಂತೋಷದ ಕ್ಷಣಗಳನ್ನು ತರುತ್ತದೆ. ಹಣದ ಚಲನೆ ದಿನವಿಡೀ ಮುಂದುವರಿಯುತ್ತದೆ ಮತ್ತು ದಿನದ ಅಂತ್ಯದ ನಂತರ ನೀವು ಉಳಿಸಲು ಸಾಧ್ಯವಾಗುತ್ತದೆ.

## ಲೋಕಾಯುಕ್ತ ಬಲೆಗೆ ಬಿದ್ದ ಸಿಪಿಐ

• ಉದಯವಾಹಿನಿ ಮಂಗಳೂರು

ಸ್ಕೂಟರ್ ಬಿಡುಗಡೆಗೆ ಪೊಲೀಸ್ ಠಾಣೆಯ ಸಿಪಿಐ ಒಬ್ಬರು ಸ್ಕೂಟರ್ ಮಾಲೀಕರ ಬಳಿ 5,000 ಲಂಚ ಸ್ವೀಕರಿಸುತ್ತಿದ್ದ ವೇಳೆ ರೆಡ್ ಹ್ಯಾಂಡ್ ಆಗಿ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿರುವ ಘಟನೆ ಮಂಗಳೂರು ಉತ್ತರ ಠಾಣೆಯಲ್ಲಿ ನಡೆದಿದೆ. ಹೌದು ನ್ಯಾಯಾಲಯದಲ್ಲಿ ಸ್ಕೂಟರ್ ಪಡೆದುಕೊಳ್ಳಲು ಅನುಮತಿ ಸಿಕ್ಕಿದ್ದರೂ, ಸ್ಕೂಟರ್ ಮಾಲಕರಿಂದ ಮಂಗಳೂರು ಉತ್ತರ ಠಾಣೆಯ ಸಿಪಿಐ ಮಹಮ್ಮದ್ ಶರೀಫ್ ಕೆ.5 ಸಾವಿರ ರೂ. ಲಂಚಕ್ಕಾಗಿ ಬೇಡಿಕೆಯಿಟ್ಟಿದ್ದು, ಹಣ ಸ್ವೀಕರಿಸುವಾಗ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದಾರೆ.ಲಂಚದ ಹಣದಲ್ಲಿ ಚೌಕಾಶಿ ನಡೆಸಿ ನಿರೀಕ್ಷಕರು ಹಾಗೂ ಸಿಬ್ಬಂದಿ 3 ಸಾವಿರ ರೂ. ಲಂಚದ ಹಣ ಸ್ವೀಕರಿಸುವಾಗ ಲೋಕಾಯುಕ್ತ ಪೊಲೀಸರು ಟ್ರ್ಯಾಪ್ ಮಾಡಿ ದಾಳಿ ನಡೆಸಲಾಗಿದ್ದು, ಸಿಪಿಐ ಮಹಮ್ಮದ್ ಶರೀಫ್ ಕೆ. ಮತ್ತು ಎಚ್‌ಸಿ ಪ್ರವೀಣ್ ನಾಯ್ಕ ಅವರನ್ನು ಬಂಧಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

## ವೈದ್ಯರ ನಿರ್ಲಕ್ಷ್ಯಕ್ಕೆ ಗರ್ಭಿಣಿ ಸಾವು: ಆಸ್ಪತ್ರೆಯ ವಿರುದ್ಧ ಆಕ್ರೋಶ ಹೊರಹಾಕಿದ ಕುಟುಂಬಸ್ಥರು

• ಉದಯವಾಹಿನಿ ಶಿವಮೊಗ್ಗ

ಎಂಸಿಹಿ ಸಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಚಿನ್ನದ ಪದಕ ಪಡೆದಿದ್ದ ಗರ್ಭಿಣಿ, ತೀವ್ರ ರಕ್ತಸ್ರಾವದಿಂದ ಸಾವನಪ್ಪಿರುವ ಘಟನೆ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ನಡೆದಿದೆ. ಹೌದು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕು ಆಸ್ಪತ್ರೆಗೆ ದಾಖಲಾಗಿದ್ದ ಗರ್ಭಿಣಿ ಸಾವನ್ನಪ್ಪಿದ್ದಾಳೆ. ಬುರಟಕ್ಟಿಯ ಒಂದುವರೆ ತಿಂಗಳ ಗರ್ಭಿಣಿ ಅಶ್ವಿನಿ (28) ಸಾವನ್ನಪ್ಪಿದ್ದಾಳೆ. ಶಿವಮೊಗ್ಗ ಹೊಸನಗರ ತಾಲ್ಲೂಕಿನ ದುಬರಟ್ಟಿ ಗ್ರಾಮದ ಅಶ್ವಿನಿ ಎಂದು ತಿಳಿದು ಬಂದಿದ್ದು, ಈಕೆ ಎಂಸಿಹಿ ಸ್ನಾತಕೋತ್ತರ ಪದವಿಯಲ್ಲಿ ಚಿನ್ನದ ಪದಕವನ್ನು ಪಡೆದಿದ್ದರು ಎನ್ನಲಾಗಿದೆ. ಕಳೆದ ಒಂದುವರೆ ವರ್ಷದ ಹಿಂದೆ ಅಶ್ವಿನಿಗೆ ಮದುವೆಯಾಗಿತ್ತು. ನಿನ್ನೆ ಸಾಗರ ಸರ್ಕಾರಿ ಆಸ್ಪತ್ರೆಗೆ ಗರ್ಭಿಣಿ ಅಶ್ವಿನಿ ದಾಖಲಾಗಿದ್ದಳು. ಅಶ್ವಿನಿಗೆ ಗರ್ಭಪಾತವಾದ ಹಿನ್ನೆಲೆಯಲ್ಲಿ ತೀವ್ರವಾಗಿ ರಕ್ತಸ್ರಾವ ಆಗಿತ್ತು. ಈ ವೇಳೆ ಖಾಸಗಿ ಆಸ್ಪತ್ರೆಗೆ ಕರೆದೊಯ್ಯುವಂತೆ ವೈದ್ಯರು ಹೇಳಿದ್ದರು. ಶಿವಮೊಗ್ಗ ಆಸ್ಪತ್ರೆಗೆ ದಾಖಲಾದ ಕೆಲವೇ ಕ್ಷಣಗಳಲ್ಲಿ ಅಶ್ವಿನಿ ಸಾವನಪ್ಪಿದ್ದಾಳೆ. ಸಾಗರ ತಾಲ್ಲೂಕು ಆಸ್ಪತ್ರೆ ವೈದ್ಯರ ವಿರುದ್ಧ ನಿರ್ಲಕ್ಷ್ಯ ಆರೋಪ ಮಾಡಿದ್ದು,ಸಾಗರ ಆಸ್ಪತ್ರೆ ವೈದ್ಯರ ವಿರುದ್ಧ ಅಶ್ವಿನಿ ಕುಟುಂಬಸ್ಥರು ಇದೀಗ ಆಕ್ರೋಶ ಹೊರಹಾಕುತಿದ್ದಾರೆ.

## ನಿಲ್ಲದ ಮೈಕ್ರೋ ಫೈನಾನ್ಸ್ ಹಾವಳಿ: ಮನೆ ಸೀಜ್ ಮಾಡಿದ್ದಕ್ಕೆ ಯುವಕ ಆತ್ಮಹತ್ಯೆಗೆ ಯತ್ನ

• ಉದಯವಾಹಿನಿ ಗದಗ

ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಸಿಬ್ಬಂದಿಗಳ ಅಟ್ಟಹಾಸ ಮಿತಿ ಮೀರಿದ್ದು ಇದೀಗ ಬ್ಯಾಂಕ್‌ನವರು ಸಾಲ ತೀರಿಸಿಲ್ಲ ಎಂದು ಮನೆ ಸೀಜ್ ಮಾಡಿದ್ದಾರೆ. ಇದರಿಂದ ನೊಂದ ಯುವಕ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ಗದಗ ಜಿಲ್ಲೆಯಲ್ಲಿ ನಡೆದಿದೆ. ಹೌದು ಬ್ಯಾಂಕ್‌ನವರು ಮನೆ ಸೀಜ್ ಮಾಡಿದಕ್ಕೆ ಯುವಕ ಆತ್ಮಹತ್ಯೆಗೆ ಯತ್ನಯತ್ನಿಸಿರುವ ಘಟನೆ ಗದಗ ಜಿಲ್ಲೆಯ ಲಕ್ಷ್ಮೇಶ್ವರದಲ್ಲಿ ಈ ಒಂದು ಘಟನೆ ನಡೆದಿದೆ. ರಂಭಾಪುರಿ ಅಕ್ಷಯ ಬಡಾವಣೆಯ ರವಿ ಆತ್ಮಹತ್ಯೆಗೆ ಯತ್ನಿಸಿದ ಯುವಕ ಎಂದು ತಿಳಿದು ಬಂದಿದ್ದು, ಮನೆಯನ್ನು ಸೀಜ್ ಮಾಡಿದ್ದಕ್ಕೆ ಯುವಕರ ರವಿ ಆತ್ಮಹತ್ಯೆಗೆ ಯತ್ನಿಸಿದ್ದಾನೆ.

ಅಸ್ವಸ್ಥಗೊಂಡ ರವಿಯನ್ನು ತಕ್ಷಣ ತಲೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು. 2017ರಲ್ಲಿ ರವಿ 7 ಲಕ್ಷ ಸಾಲ ಪಡೆದಿದ್ದ, ಅಕ್ಷಯ ಮನೆ ಕಟ್ಟಿಸಿಕೊಳ್ಳಲು ಬ್ಯಾಂಕ್ ಲೋನ್ ಪಡೆದಿದ್ದ ಎನ್ನಲಾಗಿದೆ. ಮೂರು ವರ್ಷದವರೆಗೆ 2 ಲಕ್ಷ ರೂಪಾಯಿ ಸಾಲವನ್ನು ತೀರಿಸಿದ್ದ ರವಿ ಕುಟುಂಬ. ಇನ್ನು 5 ಲಕ್ಷ ಬಾಕಿ ಇದೆ ಎಂದು ಬ್ಯಾಂಕ್‌ನವರು ನೋಟಿಸ್ ನೀಡಲಾಗಿತ್ತು ಕೋವಿಡ್ ಬಳಿಕ ಕಂತು ಕಟ್ಟಲಾಗದೆ 1 ಲಕ್ಷ ಮಾತ್ರ ಬಾಕಿ ಉಳಿದಿತ್ತು. ಒಂದು ಲಕ್ಷ ಬಾಕಿಗೆ ಇಡಿ ಮನೆ ಸೀಜ್ ಮಾಡಿದ್ದಾರೆ.

# ಪಾಲಿಕೆ ಮೇಯರ್ ಚುನಾವಣೆ: ಎಂ. ಬಿ. ಪಾಟೀಲ್ ವಿರುದ್ಧ ಬಿಜೆಪಿ ದೂರು

## ಎಂ. ಬಿ.ಪಾಟೀಲ್ ಕುಮ್ಮಕ್ಕಿನಿಂದ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಮರೆತು ಸಚಿವರ ಆಣತಿಯಂತೆ ಕೆಲಸ ಮಾಡಿದ್ದಾರೆ

• ಉದಯವಾಹಿನಿ ವಿಜಯಪುರ

ವಿಜಯಪುರ ಮಹಾನಗರ ಪಾಲಿಕೆ ಮೇಯರ್ ಹಾಗೂ ಉಪ ಮೇಯರ್ ಆಯ್ಕೆಯ ಚುನಾವಣೆ ಬಗ್ಗೆ ರಾಜ್ಯದ ಪ್ರತಿಪಕ್ಷ ಬಿಜೆಪಿ ಅಸಮಾಧಾನಗೊಂಡಿದೆ. ಮಹಾನಗರ ಪಾಲಿಕೆ ಅಧಿಕಾರಿಗಳು ಪಾರದರ್ಶಕವಾಗಿ ಚುನಾವಣೆಯನ್ನು ನಡೆಸಿಲ್ಲ ಹಾಗೂ ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ.ಪಾಟೀಲ್ ಕುಮ್ಮಕ್ಕಿನಿಂದ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಮರೆತು ಸಚಿವರ ಅಣತಿಯಂತೆ ಕೆಲಸ ಮಾಡಿದ್ದಾರೆ ಎಂದು ಬಿಜೆಪಿ ಗಂಭೀರ ಆರೋಪ ವನ್ನು ಮಾಡಿದೆ.

ಈ ಕುರಿತು ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ಸೇರಿದಂತೆ ಬಿಜೆಪಿ ಮುಖಂಡರ ನಿಯೋಗ ಪಕ್ಷದ ರಾಜ್ಯ ಕಾನೂನು ಪ್ರಕೋಷ್ಠದ ವತಿಯಿಂದ ರಾಜ್ಯ ಮುಖ್ಯ ಚುನಾವಣಾಧಿಕಾರಿಗಳಿಗೆ ದೂರು ಸಲ್ಲಿಕೆ ಮಾಡಿದೆ. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಹಾಗೂ ಜಿಲ್ಲಾ ಉಸ್ತುವಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಬಿಜೆಪಿ ಒತ್ತಾಯಿಸಿದೆ.

**ದೂರಿನ ವಿವರಗಳು:** ಈ ದೂರು ವಿಜಯಪುರ ಮಹಾನಗರ ಪಾಲಿಕೆಯ 22ನೇ ಅವಧಿಗೆ ಮಹಾಪೌರರ ಹಾಗೂ ಉಪ-ಮಹಾಪೌರರನ್ನು ಚುನಾಯಿಸಲು ದಿನಾಂಕ 27.01.2025ರ ಸೋಮವಾರದಂದು ನಡೆದ ಚುನಾವಣೆಯ ಕುರಿತು ಎಂಬ ವಿಷಯ ಒಳಗೊಂಡಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಮಹಾಪೌರರ ಹಾಗೂ ಉಪ-ಮಹಾಪೌರರನ್ನು ಚುನಾಯಿಸಲು ಪ್ರಕ್ರಿಯೆಯನ್ನು ಪ್ರಾರಂಭಿಸಿದ ಚುನಾವಣಾಧಿಕಾರಿಗಳಾದ ಅವರು ಮಹಾಪೌರ ಹುದ್ದೆಯ ಚುನಾವಣೆಯನ್ನು ನಿಯಮ ಬದ್ಧವಾಗಿ ಪೂರ್ಣಗೊಳಿಸಿರುತ್ತಾರೆ. ನಂತರ ಉಪ-ಮಹಾಪೌರರ ಚುನಾವಣೆಯ ಪ್ರಕ್ರಿಯೆಯನ್ನು ಪ್ರಾರಂಭಿಸಿದ ಚುನಾವಣಾಧಿಕಾರಿಗಳಾದ ಅವರು ಬಿಜೆಪಿ ಅಭ್ಯರ್ಥಿ ಸುಮಿತ್ರ ರಾಜು ಜಾಧವ್ ಅವರ ಆಯ್ಕೆ ಪ್ರಕ್ರಿಯೆ ನಡೆಯುವ ಸಂದರ್ಭದಲ್ಲಿ ಸುಮಿತ್ರ ರಾಜು ಜಾಧವ್ ಅವರ ಪರವಾಗಿ ಮತ ಚಲಾಯಿಸುವವರು ಕೈ ಮೇಲೆತ್ತಿಸಿದ ನಂತರ ಅವರ ಆಯ್ಕೆಗೆ ಸಂಬಂಧಿಸಿದಂತೆ ಕೈ ಎತ್ತಿದ ಎಲ್ಲಾ ಸದಸ್ಯರ ಸಹಿಯನ್ನು ಪಡೆದಿರುತ್ತಾರೆ.

ನಂತರದ ಪ್ರಕ್ರಿಯೆ ಸುಮಿತ್ರ ರಾಜು ಜಾಧವ್ ಅವರ ಆಯ್ಕೆಯ ವಿರುದ್ಧ ಮತ ಚಲಾಯಿಸುವವರ ಕೈಎತ್ತಿ ಎನ್ನುವ ಬದಲು ಕಾಂಗ್ರೆಸ್ ಅಭ್ಯರ್ಥಿಯಾದ ವಿಮಲಾ ಗಂ. ರಫೀಕ ಅಹ್ಮದ್ ಕಾಣೆ ಅವರ ವಿರುದ್ಧವಾಗಿ ಮತ ಚಲಾಯಿಸುವವರು ಕೈ ಎತ್ತಬೇಕು ಎಂದು ಹೇಳಿರುತ್ತಾರೆ. ವಿಮಲಾ ಗಂ. ರಫೀಕ್ ಅಹ್ಮದ್ ಕಾಣೆ ವಿರುದ್ಧವಾಗಿ ಮತ ಚಲಾಯಿಸಿದವರ ಸಹಿ ಪಡೆಯುವ ಸಂದರ್ಭದಲ್ಲಿ ಕಾಂಗ್ರೆಸ್ ಸದಸ್ಯರು ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ್ ಅವರ ನೇತೃತ್ವದಲ್ಲಿ ಕಾಂಗ್ರೆಸ್‌ನ ಮಹಾನಗರ ಪಾಲಿಕೆ ಸದಸ್ಯರು ಹಾಗೂ ವಿಧಾನಪರಿಷತ್ ಸದಸ್ಯರು ಚುನಾವಣಾ ಪ್ರಕ್ರಿಯೆ ನಡೆಯದಂತೆ ತಡೆಯೊಡ್ಡಿರುತ್ತಾರೆ.

ಈ ಸಂದರ್ಭದಲ್ಲಿ ಬಿಜೆಪಿ ಸದಸ್ಯರು, ಶಾಸಕರು, ಸಂಸದರು ಚುನಾವಣಾ ಪ್ರಕ್ರಿಯೆಯನ್ನು ಶಾಂತ ರೀತಿಯಲ್ಲಿ ಮುಂದುವರೆಸಿ ಪ್ರಕ್ರಿಯೆಯು ತಪ್ಪಾಗಿದ್ದಲ್ಲಿ ಸರಿಪಡಿಸಿಕೊಂಡು ಮುಕ್ತಾಯ ಮಾಡಿ ಎಂದು ಚುನಾವಣಾಧಿಕಾರಿಗಳನ್ನು ಪರಿಪರಿಯಾಗಿ ವಿನಂತಿಸಿದೆವು.

ಚುನಾವಣೆಯ ನ್ನು ತಕ್ಷಣವೇ ನಡೆಸಬೇಕೆಂದು ವಿನಂತಿಸುತ್ತೇವೆ. ಚುನಾವಣೆಯ ಪ್ರಕ್ರಿಯೆ ಪೂರ್ವಗೊಳಿಸುವ ಸಮಯ ಸಂಜೆ 5:30ರ ವರೆಗೂ ಬಿಜೆಪಿ ಎಲ್ಲಾ ಸದಸ್ಯರು ಚುನಾವಣಾ ಸ್ಥಳದಲ್ಲಿಯೇ ಉಪಸ್ಥಿತರಿದ್ದೆವು. ನ್ಯಾಯಾಲಯದ ಆದೇಶವನ್ನು ಗಂಭೀರವಾಗಿ ಪರಿಗಣಿಸಿ ಶಿಸ್ತು ಬದ್ಧವಾಗಿ ಹಾಗೂ ನಿಯಮಾನುಸಾರ ಚುನಾವಣೆಯನ್ನು ನಡೆಸದೇ ಕಾಂಗ್ರೆಸ್ ಪಕ್ಷದ ಮಹಾನಗರ ಪಾಲಿಕೆ ಸದಸ್ಯರು ಹಾಗೂ ಉಸ್ತುವಾರಿ ಸಚಿವರಾದ ಎಂ.ಬಿ. ಪಾಟೀಲ್ ಮತ್ತು ವಿಧಾನಸಭಾ ಸದಸ್ಯರ ತಾಳಕ್ಕೆ ತಕ್ಕಂತೆ ಚುನಾವಣಾಧಿಕಾರಿಗಳು ನಡೆದುಕೊಂಡಿರುವುದು ಅಕ್ಷಮ್ಯ ಅಪರಾಧವಾಗಿದ್ದು ಅವರ ವಿರುದ್ಧ ಶಿಸ್ತುಕ್ರಮ ಜಾರಿಗೊಳಿಸಬೇಕೆಂದು ಕೋರುತ್ತೇವೆ.

**ಅಧಿಕಾರಿಗಳ ವಿರುದ್ಧ ಘೋಷಣೆ**

**ತೀವ್ರವಾಗಿ ವಿರೋಧ ಮಾಡುತ್ತಾ ಚುನಾವಣಾ ಅಧಿಕಾರಿಗಳ ವಿರುದ್ಧ ಘೋಷಣೆಯನ್ನು ಕೂಗುತ್ತಾ ಚುನಾವಣಾ ಪ್ರಕ್ರಿಯೆಯನ್ನು ಮುಂದೂಡಬೇಕು ಎಂದು ಒತ್ತಡ ಹೇರಿರುತ್ತಾರೆ. ಸಭೆಯಲ್ಲಿ ಗದ್ದಲ ಸೃಷ್ಟಿಸಿ ಚುನಾವಣಾ ಅಧಿಕಾರಿಗಳ ಮೇಲೆ ತೀವ್ರ ಒತ್ತಡವನ್ನು ಒಡ್ಡಿರುತ್ತಾರೆ ಎಂದು ಬಿಜೆಪಿ ದೂರಿನಲ್ಲಿ ಹೇಳಿದೆ.**

**ಬಿಜೆಪಿ ಗಂಭೀರ ಆರೋಪ**




**ಅಧಿಕಾರ ದುರುಪಯೋಗ ಮಾಡಿಕೊಂಡಿರುವ ಕಾಂಗ್ರೆಸ್ ಪಕ್ಷದ ಮಹಾನಗರ ಪಾಲಿಕೆ ಸದಸ್ಯರು ಮತ್ತು ವಿಧಾನಪರಿಷತ್ ಸದಸ್ಯರೊಡಗೂಡಿ ಸೋಲುವ ಭೀತಿಯಿಂದ ಇಡೀ ಚುನಾವಣಾ ಪ್ರಕ್ರಿಯೆಯನ್ನು ಸ್ಥಗಿತಗೊಳಿಸುವ ಪ್ರಯತ್ನ ಮಾಡಿದ ಎಂ. ಬಿ. ಪಾಟೀಲ್ ವಿರುದ್ಧ ಕ್ರಮ ಜರುಗಿಸಬೇಕೆಂದು ವಿನಂತಿಸುತ್ತೇವೆ ಎಂದು ಬಿಜೆಪಿ ದೂರಿನಲ್ಲಿ ಆಗ್ರಹಿಸಿದೆ.**

# ಸರಕಾರ ರೈತ ಸಮಸ್ಯೆಗೆ ಸ್ಪಂದಿಸಿ, ಬೆಂಬಲ ಬೆಲೆ ನಿಗದಿ ಮಾಡಿ

• ಉದಯವಾಹಿನಿ ಯಾದಗಿರಿ

ಜಿಲ್ಲೆಯಲ್ಲಿ ಅತೀ ಹೆಚ್ಚು ರೈತರು ಸಾಲಸೂಲ ಮಾಡಿ ಒಣಮೆಣಸಿನಕಾಯಿ ಬೆಳೆದಿದ್ದು, ಸರಿಯಾದ ಬೆಂಬಲ ಬೆಲೆ ಇಲ್ಲದೆ ಸಂಕಷ್ಟಕ್ಕೆ ಸಿಲುಕಿದ್ದಾರೆ. ಮಳೆ. ನೀರಿನ ಕೊರತೆ ರೋಗಬಾಧೆಯಿಂದ ಇಳುವರಿಯು ಈ ವರ್ಷ ಅತಿಕಡಿಮೆ ಬಂದಿದ್ದು, ಸದ್ಯಕ್ಕೆ ಮೆಣಸಿನಕಾಯಿ ಬೆಲೆ ಪಾತಳಕ್ಕೆ ಕುಸಿದಿದೆ. ಸರ್ಕಾರ ಮಧ್ಯಸ್ಥಿಕೆ ವಹಿಸಿ ಬೆಂಬಲ ಬೆಲೆ ಘೋಷಿಸಿ ರೈತರ ಹಿತಕಾಯಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಶಾಹಪುರ ತಹಶೀಲ್ದಾರ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಮನವಿ ಸಲ್ಲಿಸಿ ಮಾತನಾಡಿದ ಸಂಘದ ಜಿಲ್ಲಾಧ್ಯಕ್ಷ ಎಚ್. ಆರ್ ಬಡಿಗೇರ್ ಈ ಬಾರಿ ರೈತರು ಹೆಚ್ಚಾಗಿ ಮೆಣಸಿನಕಾಯಿ ಬೆಳೆಯನ್ನು ಬೆಳೆದಿದ್ದು, ದಾಖಲೆ ಮಟ್ಟದ ಬೆಲೆ ಕುಸಿತ ಕಂಡಿದೆ. ಹಲವಾರು ರೈತರು ಮೆಣಸಿನಕಾಯಿಗಳನ್ನು ಜಮೀನಿನಲ್ಲಿ ಇಟ್ಟುಕೊಂಡು ಮುಂದಿನ ದಿನಗಳಲ್ಲಿ ಹೆಚ್ಚಿನ ಬೆಲೆ ಸಿಗಬಹುದು ಎಂಬ ನಿರೀಕ್ಷೆಯಲ್ಲಿದ್ದಾರೆ. ರಾಜ್ಯದ್ಯಂತ ಈ ಬಾರಿ ಹೆಚ್ಚು ಮೆಣಸಿನಕಾಯಿ ಬೆಳೆದಿದ್ದು ಆ ಕಾರಣ ದರ ಕುಸಿತ ಕಂಡಿದೆ. ಸದ್ಯ ಮಾರುಕಟ್ಟೆಯಲ್ಲಿ ಮೆಣಸಿನಕಾಯಿ ಕ್ವಿಂಟಲ್‌ಗೆ ಅಂದಾಜು 8 ರಿಂದ 12 ಸಾವಿರವರೆಗೆ ಇದೆ. ಕಳೆದ ಎರಡು ವರ್ಷದಿಂದ ಸುಮಾರು 20 ರಿಂದ 25 ಸಾವಿರ ವರೆಗೆ ಮೆಣಸಿನಕಾಯಿಗೆ ಬೆಲೆ ಇತ್ತು.



ಉದಯವಾಹಿನಿ ಚಿತ್ರ

**ಉದಯ ವಾಹಿನಿ ಹೈಲೆಟ್ಸ್**

- ಮೆಣಸಿನಕಾಯಿ ಬೆಲೆ ಪಾತಳಕ್ಕೆ ಕುಸಿತ.
- ಬೆಂಬಲ ಬೆಲೆ ಇಲ್ಲದೆ ಸಂಕಷ್ಟಕ್ಕೆ ಸಿಲುಕಿದ ರೈತರು.
- ರೈತರು ಆತ್ಮಹತ್ಯೆ ಮಾಡಿಕೊಳ್ಳವ ಪರಿಸ್ಥಿತಿ ನಿರ್ಮಾಣ.
- ಮೆಣಸಿನಕಾಯಿ ಬೆಲೆ 25ಸಾವಿರ ನಿಗದಿ ಮಾಡಿ :ರೈತರ ಆಗ್ರಹ.

ಈ ಬಾರಿ ಬೆಲೆ ಮತ್ತು ಇಳುವರಿಯು ಬಾರದ ಕಾರಣ ರೈತರು ಸಂಕಷ್ಟ ಎದುರಿಸುತ್ತಿದ್ದಾರೆ. ಒಂದೆಡೆ ಬರಗಾಲ ಮತ್ತೊಂದು ಕಡೆ ಬೆಳೆಗಳ ಬೆಲೆ ಕುಸಿತ. ಸರಕಾರ ಕೂಡಲೇ ರೈತರ ಸಮಸ್ಯೆಗೆ ಸ್ಪಂದಿಸಿ ಒಣ ಮೆಣಸಿನಕಾಯಿಗೆ ಬೆಂಬಲ ಬೆಲೆ 23,000 ರಿಂದ 25ಸಾವಿರಕ್ಕೆ ನಿಗದಿ ಮಾಡಿ ಖರೀದಿ ಮಾಡಬೇಕು. ಕೂಡಲೇ ಬೆಂಬಲ ಬೆಲೆ ಘೋಷಿಸಬೇಕೆಂದು ರಾಜ್ಯ ಹಾಗೂ ಕೇಂದ್ರ ಸರಕಾರಕ್ಕೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಒತ್ತಾಯಿಸುತ್ತದೆ ಎಂದು ಹೇಳಿದರು. ಎಚ್.ಆರ್.ಬಡಿಗೇರ ಜಿಲ್ಲಾಧ್ಯಕ್ಷರು, ಭೀಮಣ್ಣ ಮಾಲಿ ಬಿರೆದಾರ, ಮಾರ್ದಾನಿ ಸಲಾದ ಪೂರ, ನಾಗಣ್ಣ ಗಂಗನಾಳ, ಯಮನಪಗೌಡ ಕುಂಬಾರ ಗೌರವಾಧ್ಯಕ್ಷರು, ಮಲ್ಲಣ್ಣ ಸಾಂತಪೂರ, ಸುಭಾಸ ಹೋತಪೇಠ, ಮಾಳಪ್ಪ ಬೋಸ್ಗಿ, ಭೀಮಣ್ಣಗೌಡ ಪೋಲಿಸ್ ಪಾಟೀಲ್, ಆನಂದ ಟಣಕೆದಾರ, ಬಸವರಾಜ ನಾಟೇಕಾರ್, ಡಿಎಸ್‌ಎಸ್ ಸಂಚಾಲಕರು, ಜಿಂದಾವಾಲಿ ಡಿಎಸ್‌ಎಸ್ ಸಂಘಟನಾ ಸಂಚಾಲಕರು, ಸೋಮಲಿಂಗ ಹುಗ್ಗಿ ಸೇರಿದಂತೆ ರೈತರು ಇದ್ದರು.

**ಮುಂದಿನ ದಿನಗಳಲ್ಲಿ ಬೆಲೆ ಏರಿಕೆ ಮಾಡದೆ ಇದ್ದಲ್ಲಿ ರೈತರು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳಬಹುದಾದ ಸ್ಥಿತಿ ಇದ್ದು. ಇದಕ್ಕೆ ರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರವೇ ನೇರ ಹೊಣೆಗಾರರು. ಈ ಬಗ್ಗೆ ಬಂದ್‌ಗೆ ಕರೆ ಕೊಟ್ಟು ರಸ್ತೆಗಿಳಿದು ಉಗ್ರ ಹೋರಾಟ ಮತ್ತು ಬೃಹತ್ ಪ್ರತಿಭಟನೆ ಮಾಡಲಾಗುತ್ತದೆ**


**-ಎಚ್. ಆರ್. ಬಡಿಗೇರ್**

**(ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾಧ್ಯಕ್ಷರು ಯಾದಗಿರಿ )**

# ತೊಗರಿ ಖರೀದಿ: ನೋಂದಣಿ ಸಮಸ್ಯೆ

• ಉದಯವಾಹಿನಿ ಹನುಮಸಾಗರ

ಜಿಲ್ಲೆಯಾದ್ಯಂತ ಬೆಂಬಲ ಬೆಲೆ ಯೋಜನೆಯಡಿ ತೊಗರಿ ಖರೀದಿಗೆ ನೋಂದಣಿ ಆರಂಭಗೊಂಡಿದ್ದು ಸರ್ವರ್ ಹಾಗೂ ಲಾಗಿನ್ ಸಮಸ್ಯೆಯಿಂದ ನಿರೀಕ್ಷಿತ ನೋಂದಣಿಯಾಗದೇ ರೈತರು ಪರಿತಪಿಸುತ್ತಿದ್ದಾರೆ. ಜನವರಿ 2ರಂದು ಜಿಲ್ಲೆಯಾದ್ಯಂತ ತೊಗರಿ ಖರೀದಿಗೆ ನೋಂದಣಿ ಆರಂಭಗೊಂಡಿದೆ. ಸರ್ವರ್ ಇದ್ದರೂ ಲಾಗಿನ್ ಸಮಸ್ಯೆ ಕಾಡುತ್ತಿರುವುದರಿಂದ ಹನುಮಸಾಗರ ಎಪಿಎಂಸಿಯಲ್ಲಿರುವ ನೋಂದಣಿ ಕೇಂದ್ರದಲ್ಲಿ ಸೋಮವಾರ ಬೆಳಿಗ್ಗೆಯಿಂದ ಸಂಜೆವರೆಗೂ ಕೇವಲ ಆರು ಜನರ ನೋಂದಣಿ ಆಗಿದೆ. ಇದರಿಂದ ಇತರೆ ರೈತರು ಇತರೆ ಎಲ್ಲಾ ಕೆಲಸಗಳನ್ನು ಬದಿಗೊತ್ತಿ ಸಂಜೆವರೆಗೂ ನೋಂದಣಿ ಕಚೇರಿಯಲ್ಲಿ ಕಾಲ ಕಳೆಯುವಂತಾಗಿದೆ. ಮೊದಲು ಎಫ್‌ಐಡಿ (ಫಾರ್ಮರ್ಸ್ ಐಡೆಂಟಿಟಿ ಡಿಟೈಲ್ಸ್)ನಲ್ಲಿ ರೈತರ ಎಲ್ಲಾ ಮಾಹಿತಿ ಇದೆ. ಆದರೂ ಕೆವೈಸಿಗಾಗಿ ಮತ್ತೆಮ್ಮೆ ರೈತರ ಪೂರ್ಣ ಹೆಸರು, ಆಧಾರ್, ಬ್ಯಾಂಕ್ ಪಾಸ್ ಬುಕ್, ಪಹಣಿ ಅಪೇಟ್ ಸೇರಿದಂತೆ ಇತರೆ ಮಾಹಿತಿಗಳನ್ನು ಹಾಕಬೇಕಿರುವುದರಿಂದ ತಡವಾಗುತ್ತಿದ್ದು, ದಿನಕ್ಕೆ ನಾಲ್ಕರಿಂದ ಐದು ಜನರ ನೋಂದಣಿ ಮಾತ್ರ ಆಗುತ್ತಿದೆ.



ಉದಯವಾಹಿನಿ ಚಿತ್ರ

**ರೈತರ ಪರದಾಟ**

ಹೀಗಾಗಿ ಕೆಲಸ ಬಿಟ್ಟು ಸರತಿ ಸಾಲಿನಲ್ಲಿ ನಿಂತು ದಿನಗಟ್ಟಲೆ ಕಾಯಬೇಕಿದೆ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.ರೈತರ ಈ ಸಮಸ್ಯೆಯನ್ನು ಪರಿಹರಿಸಲು ಸಂಬಂಧಿಸಿದ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ರೈತರಿಂದ ತಕ್ಷಣದ ಮಾಹಿತಿ ಸಂಗ್ರಹಿಸಿ, ಬೆಂಬಲ ಬೆಲೆ ಯೋಜನೆಯಡಿ ತೊಗರಿ ಖರೀದಿಗೆ ಮುಂದಾಗಬೇಕು ಎಂದು ರೈತರು ಒತ್ತಾಯಿಸಿದ್ದಾರೆ.

ಸುರೇಶ್ ಪಟ್ಟದ, ಪಿಎಪಿಎಸ್ ಅಧಿಕಾರಿ, ಹನುಮಸಾಗರ ರೈತರ ಆಧಾರ್, ಬ್ಯಾಂಕ್ ಖಾತೆ, ಪಹಣಿ ವಿವರ ಸೇರಿ ಎಲ್ಲಾ ಮಾಹಿತಿಗಳನ್ನು ಅಪ್‌ಲೋಡ್ ಮಾಡಬೇಕಿರುವುದರಿಂದ ವಿಳಂಬ ಆಗುತ್ತಿದೆ. ಈ ಸಮಸ್ಯೆ ಇನ್ನೆರಡು ದಿನಗಳಲ್ಲಿ ಬಗೆಹರಿಯಲಿದೆ.


# ಶ್ರದ್ಧಾ ಭಕ್ತಿಯ ದುರ್ಗಾದೇವಿ ಹೊರಬೀಡು ಉತ್ಸವ

• ಉದಯವಾಹಿನಿ ಚಿತ್ರದುರ್ಗ

ನಗರದ ಭಾವಸಾರ ಕ್ಷತ್ರಿಯ ಸಮಾಜ ಅಯ್ಯಣ್ಣನಪೇಟೆ ಸಹಯೋಗದಲ್ಲಿ ದರ್ಜಿಕಾಲೋನಿ 3ನೇ ಕ್ರಾಸ್‌ನಲ್ಲಿರುವ ದುರ್ಗಾದೇವಿ ದೇವಸ್ಥಾನ ಸಮಿತಿಯು ಶ್ರೀ ದುರ್ಗಾದೇವಿಯ 86 ನೇ ವರ್ಷದ ಹೊರಬೀಡು ಉತ್ಸವವನ್ನು ನಗರದ ಹೊರವಲಯದ ಚಂದ್ರವಳ್ಳಿ ತೋಟದಲ್ಲಿ ಮಂಗಳವಾರ ಶ್ರದ್ಧಾಭಕ್ತಿಗಳೊಂದಿಗೆ ಆಚರಿಸಿದರು.ಉತ್ಸವದ ಅಂಗವಾಗಿ ಭಾವಸಾರ ಕ್ಷತ್ರಿಯ ಸಮಾಜದ ಯುವಕರು ಶ್ರೀದೇವಿಯ ಉತ್ಸವ ಮೂರ್ತಿಯನ್ನು ದೇವಸ್ಥಾನದಿಂದ ನಗರದ ಚಂದ್ರವಳ್ಳಿಯವರೆಗೆ ಮೆರವಣಿಗೆಯೊಂದಿಗೆ ಹೊತ್ತುತಂದು ಸಮಾಜದ ಮಹಿಳೆಯರು, ಮಕ್ಕಳು ಸೇರಿದಂತೆ ಸಮಾಜಬಾಂಧವರೆಲ್ಲ ಸೇರಿ ದೇವಿಗೆ ನಾನಾ ಧಾರ್ಮಿಕ ವಿಧಿ ವಿಧಾನಗಳಲ್ಲಿ ಶ್ರದ್ಧಾಭಕ್ತಿಯಿಂದ ಪೂಜೆ ಸಲ್ಲಿಸಿ ಸಹಭೋಜನ ಮಾಡಿ ಸಂಭ್ರಮಿಸಿದರು.



ಉದಯವಾಹಿನಿ ಚಿತ್ರ



**ದುರ್ಗಾದೇವಿ ಹೊರಬೀಡು ವಿಶೇಷತೆ:** ಭಾವಸಾರ ಸಮಾಜದಿಂದ ಆಚರಿಸಲಾಗುವ ದುರ್ಗಾದೇವಿ ಹೊರಬೀಡು ಉತ್ಸವವು ತನ್ನದೇ ಆದ ಸಂಸ್ಕೃತಿ ಮತ್ತು ಆಚರಣೆಗಳಿಂದ ಗಮನ ಸೆಳೆಯುತ್ತದೆ.

ಈ ಉತ್ಸವದಲ್ಲಿ ದೇವಿಯನ್ನು ಆರಾಧಿಸುವುದರ ಜೊತೆಗೆ, ಜನಾಂಗದ ಸುರಕ್ಷತೆ ಮತ್ತು ಸಮೃದ್ಧಿಯನ್ನು ಬೇಡಿಕೊಳ್ಳಲಾಗುತ್ತದೆ.

ಈ ಹಿಂದೆ ಗ್ರಾಮದಲ್ಲಿ ಕಾಯಿಲೆಗಳು ಹರಡಿದಾಗ, ಜನರು ಊರನ್ನು ಬಿಟ್ಟು ಬನದಲ್ಲಿ ಬಿಡಾರ ಹೂಡುತ್ತಿದ್ದರು. ಆಗ ದುರ್ಗಾದೇವಿಯ ಮೂರ್ತಿ ಉದ್ಭವಿಸಿದ್ದು, ಊರಿಗೆ ಕಾಯಿಲೆಗಳು ಬಾರದಂತೆ ಕಾಪಾಡುತ್ತಾಳೆ ಎಂಬ ನಂಬಿಕೆಯ ಮೇಲೆ ಹೊರಬೀಡು ಉತ್ಸವವನ್ನು ಈಗಲೂ ಆಚರಿಸುತ್ತಾ ಬರಲಾಗುತ್ತಿದೆ.

# ಮೆಕ್ಕಾ, ಇಟಲಿಗೆ ಹೋಗುವವರನ್ನೂ ಖರ್ಗೆ ಪ್ರಶ್ನಿಸಬೇಕಲ್ಲವೇ?

• ಉದಯವಾಹಿನಿ ಕಲಬುರಗಿ

'ಮೆಕ್ಕಾಗೆ ಹೋಗುವ ಅಲ್ಪಸಂಖ್ಯಾತರ ಹಾಗೂ ಇಟಲಿಗೆ ತೆರಳಿ ಪೋಪ್ ಅವರನ್ನು ಭೇಟಿ ಮಾಡಿ ಬರುವ ಕ್ರಿಶ್ಚಿಯನ್ನರನ್ನೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಶ್ನಿಸಬೇಕಲ್ಲವೇ' ಎಂದು ಸಂಸದ ಜಗದೀಶ ಶೆಟ್ಟರ್ ಕೇಳಿದರು.

ಗಂಗಾ ನದಿಯಲ್ಲಿ ಪವಿತ್ರ ಸ್ನಾನ ಮಾಡಿದರೆ ಬಡತನ ದೂರವಾಗಲಿದೆಯೇ ಎಂದ ಖರ್ಗೆ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಖರ್ಗೆ ಅವರ ಹೇಳಿಕೆಯು ಅವರ ಸಂಸ್ಕೃತಿಯನ್ನು ತೋರಿಸುತ್ತದೆ. ಹಿಂದೂಗಳ ಸಂಸ್ಕೃತಿ, ಪರಂಪರೆಗಳು ಆಚರಿಸುವುದು ಅವರಿಗೆ ಆಗುವುದಿಲ್ಲ ಎಂದರೆ ಅದು ಅಲ್ಪಸಂಖ್ಯಾತರ ತುಷ್ಟೀಕರಣ' ಎಂದರು.ಅಲ್ಪಸಂಖ್ಯಾತರ ವಿಚಾರ, ಧಾರ್ಮಿಕತೆಯ ಬಗ್ಗೆ ಏನೂ ಪ್ರಶ್ನಿಸಲ್ಲ. ಆದರೆ, ಧಾರ್ಮಿಕ ಆಚರಣೆಯಲ್ಲಿ ನಂಬಿಕ ಇರಿಸಿದ ಕೋಟ್ಯಂತರ ಹಿಂದೂಗಳು ಹೋಗುವುದರ(ಗಂಗಾ ನದಿಯ ಪವಿತ್ರ ಸ್ನಾನ) ಬಗ್ಗೆ ಪ್ರಶ್ನಿಸುತ್ತೀರಾ, ಇದೇ ರೀತಿ ಅಲ್ಪಸಂಖ್ಯಾತರ ವಿಚಾರ, ಧಾರ್ಮಿಕ ಕೇಂದ್ರ ಗಳ ಬಗ್ಗೆ ಮಾತನಾಡಿದರೆ ಅವರ ಅಸ್ತಿತ್ವ ಉಳಿಯುತ್ತದೆಯಾ ಇಂತಹ ಹೇಳಿಕೆ ಮೂಲಕ ಹಿಂದೂ ಸಮಾಜಕ್ಕೆ ಅಪಮಾನ ಮಾಡಿದ್ದನ್ನು ಖಂಡಿಸುತ್ತೇವೆ. ಹಿಂದೂಗಳ ಭಾವನೆಗೆ ಧಕ್ಕೆ ತರುವಂತೆ ವ್ಯಂಗ್ಯವಾಗಿ ಮಾತನಾಡುವುದನ್ನು ನಿಲ್ಲಿಸಬೇಕು ಎಂದು ಹೇಳಿದರು.



**ಕಾಂಗ್ರೆಸ್ಸಿಗರಿಗೆ ಸಿಬಿಐ ಭಯ**

**ಕಾಂಗ್ರೆಸ್ಸಿಗರಿಗೆ ಸಿಬಿಐ ಭಯ:** ಮುಡಾ ಹಗರಣ ದೊಡ್ಡದಾಗಿದ್ದು, ಮುಖ್ಯಮಂತ್ರಿಗಳೂ ಅದರಲ್ಲಿ ಭಾಗಿಯಾಗಿದ್ದಾರೆ. ಈ ಪ್ರಕರಣದ ತನಿಖೆಯನ್ನು ಸ್ಥಳೀಯ ಅಧಿಕಾರಿಗಳಿಗೆ ಕೊಟ್ಟರೆ ಪ್ರಕರಣವನ್ನು ಮುಚ್ಚಿಹಾಕಬಹುದು ಎಂಬುದು ಕಾಂಗ್ರೆಸ್ಸಿಗರ ಲೆಕ್ಕಾಚಾರ.

ಹೀಗಾಗಿ, ಸಿಬಿಐ ಕಂಡರೆ ಅವರಿಗೆ ಮೊದಲಿಂದಲೂ ಭಯ. ಈ ಹಿಂದೆ ಲೋಕಾಯುಕ್ತ ಸಂಸ್ಥೆಯನ್ನು ಮುಚ್ಚಿ ಹಾಕಿ ಭ್ರಷ್ಟಾಚಾರ ನಿಗ್ರಹ ದಳ ತಂದಿದ್ದವರು ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂದೆ ಎಸಿಬಿಯನ್ನು ರದ್ದು ಮಾಡಿದ್ದ ನ್ಯಾಯಾಲಯ, ಮತ್ತೆ ಲೋಕಾಯುಕ್ತ ಮರುಸ್ಥಾಪಿಸುವಂತೆ ಮಾಡಿತ್ತು' ಎಂದರು.

ಬಿಜೆಪಿಯ ವಿದ್ಯಮಾನಗಳು ವರಿಷ್ಠರ ಗಮನದಲ್ಲಿದ್ದು, ಎಲ್ಲವನ್ನೂ ಸರಿ ಮಾಡುತ್ತಾರೆ. ಎಲ್ಲಾ ರಾಜಕೀಯ ಪಕ್ಷಗಳಲ್ಲಿಯೂ ಇಂತಹದ್ದು ಸಹಜ ಪ್ರಕ್ರಿಯೆ. ಆದರೆ, ಬಿಜೆಪಿ ಇತ್ತೀಚಿನ ವರ್ಷಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆದಿದ್ದು, ಲಕ್ಷಾಂತರ ಕಾರ್ಯಕರ್ತರು ಕೆಲಸ ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಭಿನ್ನಾಭಿಪ್ರಾಯಗಳೂ ಸಹಜ. ಅವೆಲ್ಲದಕ್ಕೂ ಪಕ್ಷದ ವರಿಷ್ಠರು ಇತಿಶ್ರೀ ಹಾಡುತ್ತಾರೆ' ಎಂದು ಹೇಳಿದರು.

# ಗಣರಾಜ್ಯೋತ್ಸವ ಧ್ವಜಾರೋಹಣ ಸೈನಿಕ ಭಾಗಿ

• ಉದಯವಾಹಿನಿ ಮುದ್ದೇಬಿಹಾಳ

ತಾಲ್ಲೂಕಿನ ಹುಲ್ಲೂರ ಗ್ರಾಮದ ಎಸ್ ಎನ್ ಡಿ ನ್ಯಾಷನಲ್ ಪಬ್ಲಿಕ್ ಶಾಲೆಯಲ್ಲಿ 76ನೇ ಗಣರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು ಎಲ್ಲಾ ವರ್ಗದ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯ ಕ್ರಮಗಳು, ಭಾಷಣ ಮಾಡಿದರು.

ಈ ಬಾರಿ ಶಾಲೆಯಲ್ಲಿ ವಿಶೇಷ ವಾಗಿ ಸೈನಿಕ ಮಹೇಶ ಉಂಡಿ ಧ್ವಜಾರೋಹಣ ಮಾಡಿಸುವುದರ ಮೂಲಕ ಸಂವಿಧಾನ ದೇಶ ಭಕ್ತಿಯನ್ನು ಮೂಡಿಸುವ ಕಾರ್ಯ ಮಾಡಲಾಯಿತು.



ಉದಯವಾಹಿನಿ ಚಿತ್ರ

ಕಾಳಗಿ ಗ್ರಾಮದ ಮಹೇಶ್ ಉಂಡಿ ಜಮ್ಮು ಕಾಶ್ಮೀರದಲ್ಲಿ ಸೈನಿಕರಾಗಿ ಕರ್ತವ್ಯ ಸಲ್ಲಿಸುತ್ತಿದ್ದಾರೆ.

ಈ ವೇಳೆ ಸಂಸ್ಥೆಯ ಅಧ್ಯಕ್ಷ ಎಮ್ ಎಸ್ ಕೊಪ್ಪ ಅಥಿತಿಯಾಗಿವ ಮುತ್ತಣ್ಣ ಹುಗ್ಗಿ, ಸುರೇಶ ಹಳೆಮನಿ, ನಿಂಗಪ್ಪ ಓಲೇಕಾರ್ ದಿವಾಕರ್ ,ಜ್ಯೋತಿ, ಸುಮಿತ್ರಾ ಕೊಪ್ಪ, ಪವಾಡೆಪ್ಪ ಇಂಗನಾಳ ಹಾಗೂ ಶಾಲೆಯ ಮುಖ್ಯಗುರುಮಾತೆಯರು ಶಿಕ್ಷಕರು ವಿದ್ಯಾರ್ಥಿಗಳು ಪಾಲಕರು ಭಾಗವಹಿಸಿದ್ದರು.

# ಸ್ವಾಮಿ ವಿವೇಕಾನಂದ ಸದ್ಭಾವನಾ ಪುರಸ್ಕಾರ ಸಮಾರಂಭ

## ಕರ್ನಾಟಕದ ಸೇರಿದಂತೆ 5 ರಾಜ್ಯಗಳ 15 ಸಾಧಕರಿಗೆ ರಾಷ್ಟ್ರೀಯ ಮತ್ತು 23 ಸಾಧಕರು, 3 ಸಾಂಘಿಕ ಸೇರಿ 26 ಸಾಧಕರಿಗೆ ರಾಜ್ಯ ಪ್ರಶಸ್ತಿ

• ಉದಯವಾಹಿನಿ ಮುದ್ದೇಬಿಹಾಳ

ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟದಿಂದ 2024-25ನೇ ಸಾಲಿನ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಸ್ವಾಮಿ ವಿವೇಕಾನಂದ ಸದ್ಭಾವನಾ ಪ್ರಶಸ್ತಿಗೆ 38 ಸಾಧಕರು, 3 ಸಂಘ ಸಂಸ್ಥೆಗಳನ್ನು ಒಕ್ಕೂಟದ ರಾಜ್ಯಾಧ್ಯಕ್ಷ ಡಾ. ಎಸ್.ಬಾಲಾಜಿ ಅವರು ಆಯ್ಕೆ ಮಾಡಿ ಪಟ್ಟಿ ಪ್ರಕಟಿಸಿದ್ದಾರೆ ಎಂದು ಒಕ್ಕೂಟದ ಜಿಲ್ಲಾಧ್ಯಕ್ಷ ಪುಂಡಲೀಕ ಮುರಾಳ ತಿಳಿಸಿದರು.

ಇಲ್ಲಿನ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, 5 ರಾಜ್ಯಗಳ , ಕರ್ನಾಟಕದ 10 ಸೇರಿ 15 ಸಾಧಕರಿಗೆ ರಾಷ್ಟ್ರೀಯ ಮತ್ತು 23 ಸಾಧಕರು, 3 ಸಾಂಘಿಕ ಸೇರಿ 26 ಸಾಧಕರಿಗೆ ರಾಜ್ಯ ಪ್ರಶಸ್ತಿ ಸಂದಿವೆ ಎಂದರು.

ಸ್ವಾಮಿ ವಿವೇಕಾನಂದ ರಾಜ್ಯ ಸದ್ಭಾವನಾ ಸಾಂಘಿಕ ಪ್ರಶಸ್ತಿಗೆ ದಕ್ಷಿಣ ಕನ್ನಡದ ಪ್ರೇರಣಾ, ಚಿಕ್ಕಮಗಳೂರನ ಶ್ರೀ ಚಂಡಿಕೇಶ್ವರಿ ಅಂಟಿಗೆ ಪಿಂಟಿಗೆ ತಂಡ, ವಿಜಯಪುರ ಜಿಲ್ಲೆ ಮುದ್ದೇಬಿಹಾಳದ ಹಸಿರು ತೋರಣ ಗೆಳೆಯರ ಬಳಗ ಆಯ್ಕೆಯಾಗಿವೆ. ಎಲ್ಲರಿಗೂ ಮುದ್ದೇಬಿಹಾಳದಲ್ಲಿ ಫೆಬ್ರವರಿಯಲ್ಲಿ ನಡೆಯಲಿರುವ ಸ್ವಾಮಿ ವಿವೇಕಾನಂದ ಸದ್ಭಾವನಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪುರಸ್ಕರಿಸಲಾಗುತ್ತದೆ. ಒಕ್ಕೂಟದ ಬಾಗಲಕೋಟ ಜಿಲ್ಲಾಧ್ಯಕ್ಷ ದಾನಯ್ಯಸ್ವಾಮಿ ಹಿರೇಮಠ, ತಾಲ್ಲೂಕು ಗೌರವಾಧ್ಯಕ್ಷ ಅಶೋಕ ನಾಡಗೌಡ, ಅಧ್ಯಕ್ಷ ವೀರೇಶ ಗುರುಮಠ, ಉಪಾಧ್ಯಕ್ಷ ಅಪ್ಪುಗೌಡ ಪಾಟೀಲ, ಪ್ರಧಾನ ಕಾರ್ಯದರ್ಶಿ ರಾಜುಗೌಡ ತುಂಬಗಿ, ಸಂಘಟನಾ ಕಾರ್ಯದರ್ಶಿ ಪ್ರಶಾಂತ ಕಾಳೆ, ಕನ್ನಡ ಜಾನಪದ ಪರಿಷತ್ತಿನ ಮಹಿಳಾ ಘಟಕದ ಅಧ್ಯಕ್ಷೆ ಗಾಯಕಿ ದೀಪ ರತ್ನಶ್ರೀ, ಸದಸ್ಯರಾದ ಈರಮ್ಮ, ಮಹಾದೇವಿ ಹಿರೇಮಠ, ಮಹಾಂತಗೌಡ ಬಿರಾದಾರ ವಕೀಲರು, ಮಹಾಂತೇಶ ಬಿಜ್ಜೂರ, ಯುವ ಬ್ರಿಗೇಡ್‌ನ ನಗರ ಸಂಚಾಲಕ ಕೃಷ್ಣಾ ಕುಂಬಾರ, ಜಾನಪದ ಯುವ ಬ್ರಿಗೇಡ್‌ನ ತಾಲೂಕು ಸಂಚಾಲಕ ಮುತ್ತು ಚಲವಾದಿ, ಸದಸ್ಯ ಆಕಾಶ ನಾಲತವಾಡ ಪತ್ರಿಕಾಗೋಷ್ಠಿಯಲ್ಲಿದ್ದರು.



ಉದಯವಾಹಿನಿ ಚಿತ್ರ

**ರಾಜ್ಯ ಪ್ರಶಸ್ತಿ**

**ಮೈಸೂರನ ಪ್ರೊ।ಎಚ್.ಆರ್.ವೆಂಕಟೇಶ, ರಾಯಚೂರನ ತಾಯಪ್ಪ ಹೊಸೂರ, ದಕ್ಷಿಣ ಕನ್ನಡದ ಶ್ರೀಕಾಂತ ಪೂಜಾರಿ ಬಿರಾವು, ಉತ್ತರ ಕನ್ನಡದ ನಾಗರಾಜ ನಾಯಕ, ವಿಜಯಪುರದ ಮಹೇಂದ್ರ ಜಾಧವ, ಬಾಗಲಕೋಟದ ರಾಜ ಅಹ್ಮದ ನಬೀವಾಲೆ, ದಾವಣಗೆರೆಯ ಜಿ.ಎಸ್.ಷಡಾಕ್ಷರಪ್ಪ, ಕೊಡಗುನ ಕೆ.ಎಸ್.ಮೂರ್ತಿ, ಬೆಳಗಾವಿಯ ನಾಗೇಂದ್ರ ಚೌಗಲಾ, ಚಿಕ್ಕಮಗಳೂರನ ಓಣಿತೋಟ ರತ್ನಾಕರ್, ಧಾರವಾಡದ ಈರಪ್ಪ ಎಮ್ಮಿ, ಉಡುಪಿಯ ಡಾ।ಗಣೇಶ ಗಂಗೊಳ್ಳಿ, ಬೀದರನ ರಾಘವೇಂದ್ರ ಡಿ.ಎಸ್., ತುಮಕೂರನ ನರಸಿಂಹಮೂರ್ತಿ ಆರ್, ಗದಗನ ವಸಂತ ಮಡ್ಲೂರ, ಶಿವಮೊಗ್ಗದ ಡಾ।ರಾಜುನಾಯ್ಕ ಎಸ್., ವಿಜಯನಗರದ ಸ್ಯಾಮಸನ್ ಪೆಂಡೆಮ್, ಹಾಸನದ ಆರ.ಜಿ.ಗಿರೀಶ್, ಚಿತ್ರದುರ್ಗದ ಬಿ.ಮೈಲಾರಪ್ಪ, ಚಿಕ್ಕಬಳ್ಳಾಪುರದ ಡಾ।ಸೋ.ಸು.ನಾಗೇಂದ್ರನಾಥ, ಚಾಮರಾಜನಗರದ ವಿ.ರಾಮದಾಸ, ಯಾದಗಿರಿಯ ಬಸವಯ್ಯ ಸ್ವಾಮಿ, ಬಳ್ಳಾರಿಯ ಜಗದೀಶ ಪೂಜಾರ ಸ್ವಾಮಿ ವಿವೇಕಾನಂದ ರಾಜ್ಯ ಸದ್ಭಾವನಾ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.**

**ರಾಷ್ಟ್ರೀಯ ಪ್ರಶಸ್ತಿ**


**ಮಧ್ಯಪ್ರದೇಶದ ರಾಕೇಶ ಶರ್ಮಾ, ಜಾರ್ಖಂಡ್‌ನ ಮುಕೇಶ್ ಠಾಕೂರ, ಮಹಾರಾಷ್ಟ್ರದ ವಿಜಯ್ ಮಾನೆ, ಆಂಧ್ರಪ್ರದೇಶದ ಸಾದರ ನರೇಶಕುಮಾರ, ಕರ್ನಾಟಕದ ಗುಲಬರ್ಗಾದ ಡಾ. ಸೋಮಶೇಖರ ಡಿ , ರಾಮನಗರದ ಡಾ.ರಾಜು ಗುಂಡಾಪುರ, ಬೆಂಗಳೂರು ನಗರದ ಡಾ.ಶುಭ ನಂದೀಶ, ಕೋಲಾರದ ಡಾ.ಸಂತೋಷಕುಮಾರ ಆರ್.ಎಂ., ಬೆಂಗಳೂರು ಗ್ರಾಮಾಂತರದ ಪ್ರೊ.ಅಂಬಿಕಾ ಎ.ಆರ್, ಮಂಡ್ಯದ ಪ್ರೊ.ಮನೋಜ್ ಎಂ., ಹಾವೇರಿಯ ಡಾ।ಕೆ.ಸಿ.ನಾಗರಜ್ಜಿ, ಕೊಪ್ಪಳದ ಪ್ರಮೋದ ಕುಲಕರ್ಣಿ ಅವರು ಸ್ವಾಮಿ ವಿವೇಕಾನಂದ ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ರಾಷ್ಟ್ರೀಯ ಜಾನಪದ ಶ್ರೀ ಪ್ರಶಸ್ತಿಗೆ ಬೆಂಗಳೂರು ನಗರ ಜಿಲ್ಲೆಯ ಕಡಬಿಗೆರೆ ಮುನಿರಾಜು, ರಾಷ್ಟ್ರೀಯ ಯುವ ಜಾನಪದ ಶ್ರೀ ಪ್ರಶಸ್ತಿಗೆ ತುಮಕೂರು ಜಿಲ್ಲೆಯ ಬಿ.ಸಿ.ಗಂಗಣ್ಣ ಆಯ್ಕೆಯಾಗಿದ್ದಾರೆ.**

# ಕೈಲಾಸ-ಮಾನಸ ಸರೋವರ ಯಾತ್ರೆ ಮರು ಚಾಲನೆಗೆ ಸಮ್ಮತಿ

## ಭಾರತ-ಚೀನಾ ರಾಜತಾಂತ್ರಿಕ ಸಂಬಂಧದ 75ನೇ ವರ್ಷಾಚರಣೆ, ಬೀಜಿಂಗ್‌ನಲ್ಲಿ ವಿದೇಶಾಂಗ ಕಾರ್ಯದರ್ಶಿ ಮಟ್ಟದ ಸಭೆ

**ಬೀಜಿಂಗ್:** ಭಾರತ ಮತ್ತು ಚೀನಾ ಮಧ್ಯೆ ನಡೆದ ಎರಡು ದಿನಗಳ ವಿದೇಶ ಕಾರ್ಯದರ್ಶಿಗಳ ಮಟ್ಟದ ಮಾತುಕತೆಯಲ್ಲಿ, ಕೈಲಾಸ- ಮಾನಸ ಸರೋವರ ಯಾತ್ರೆಯನ್ನು ಬೇಸಿಗೆಯಲ್ಲಿ ಪುನರಾರಂಭ ಮಾಡಲು ನಿರ್ಧರಿಸಲಾಗಿದೆ. ಚೀನಾ ರಾಜಧಾನಿ ಬೀಜಿಂಗ್‌ನಲ್ಲಿ ಭಾರತ ಮತ್ತು ಚೀನಾ ದೇಶಗಳ ವಿದೇಶಾಂಗ ಕಾರ್ಯದರ್ಶಿಗಳ ಮಟ್ಟದ ಎರಡು ದಿನಗಳ ಮಾತುಕತೆ ಮುಕ್ತಾಯ ಕಂಡಿದ್ದು, ಈ ಮಾತುಕತೆಯಲ್ಲಿ ಹಲವು ಮಹತ್ವದ ಒಪ್ಪಂದಗಳಿಗೆ ಸಮ್ಮತಿ ಸೂಚಿಸಲಾಗಿದೆ. ಯಾತ್ರೆಯ ವಿಧಾನಗಳನ್ನು ಚರ್ಚಿಸಲು ಉಭಯ ದೇಶಗಳ ಅಧಿಕಾರಿಗಳು ಸಹಮತಿ ವ್ಯಕ್ತಪಡಿಸಿದ್ದಾರೆ.

ಬೀಜಿಂಗ್‌ನಲ್ಲಿ ನಡೆದ ಸೋಮವಾರ ನಡೆದ ಭಾರತ-ಚೀನಾ ವಿದೇಶಾಂಗ ಕಾರ್ಯದರ್ಶಿ, ಉಪ ವಿದೇಶಾಂಗ ಸಚಿವರ ಸಭೆಯಲ್ಲಿ, ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಶ್ರಿ ಭಾಗವಹಿಸಿದ್ದರು. ಪ್ರಧಾನಿ ನರೇಂದ್ರ ಮೋದಿ ಮತ್ತು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರು ಅಕ್ಟೋಬರ್‌ನಲ್ಲಿ ಕಜಾನ್‌ನಲ್ಲಿ ನಡೆಸಿದ ಸಭೆಯಲ್ಲಿ ಒಪ್ಪಿಕೊಂಡಂತೆ, ಭಾರತ-ಚೀನಾ ದ್ವಿಪಕ್ಷೀಯ ಸಂಬಂಧಗಳನ್ನು ಈ ಸಭೆಯು ಪರಿಶೀಲನೆ ನಡೆಸಿತು. ಉಭಯ ದೇಶಗಳ ನಡುವಿನ ಸಂಬಂಧಗಳನ್ನು ಸ್ಥಿರಗೊಳಿಸಲು ಜನಕೇಂದ್ರಿತ



ಕ್ರಮಗಳನ್ನು ಕೈಗೊಳ್ಳಲು ಸಭೆಯು ಒಪ್ಪಿಗೆ ಸೂಚಿಸಿತು. ಕೈಲಾಸ- ಮಾನಸ ಸರೋವರ ಯಾತ್ರೆ ಭಾರತೀಯರಿಗೆ ಬಹಳ ಪವಿತ್ರವಾದ ಯಾತ್ರೆಯಾಗಿದ್ದು, ಈ ಯಾತ್ರೆಗೆ ಚೀನಾ ಸಹಕಾರ ನೀಡುವ ಭರವಸೆ ನೀಡಿದೆ.

ಪ್ರಧಾನಿ ಮೋದಿ, ಕ್ಸಿ ಜಿನ್‌ಪಿಂಗ್ ಚರ್ಚೆ ಫಲ ನೀಡಿದ್ದು, ಎರಡೂ ದೇಶಗಳ ಸಂಬಂಧ ಮತ್ತಷ್ಟು ಬಲಗೊಳ್ಳಲಿ ಎಂದು ಎಲ್ಲಾರೂ ಆಶಿಸುತ್ತಿದ್ದಾರೆ. ಪ್ರಸ್ತುತ ಒಪ್ಪಂದಗಳ ಪ್ರಕಾರ ಎರಡೂ ದೇಶಗಳ ಮಧ್ಯೆ, ಒಳ್ಳೆಯ ಸಂಬಂಧ ಬೆಳೆಸಲು ಸಹಾಯಕವಾಗುತ್ತದೆ ಎಂದು ಸರ್ಕಾರದ ಅಧಿಕೃತ ಹೇಳಿಕೆಯಲ್ಲಿ ಉಲ್ಲೇಖಿಸ ಲಾಗಿದೆ. ಕೈಲಾಸ-ಮಾನಸ ಸರೋವರ ಯಾತ್ರೆಯ ಪುನರಾರಂಭವು, ಈ ದಿಕ್ಕಿನಲ್ಲಿ ಒಂದು ದೊಡ್ಡ ಹೆಜ್ಜೆ ಯಾಗಿ ಕಂಡುಬಂದಿದೆ. 2020ರ ಕೋವಿಡ್ ಹಾವಳಿ ಸಂದರ್ಭದಲ್ಲಿ ಕೈಲಾಸ-ಮಾನಸ ರೋವರ ಯಾತ್ರೆಗೆ ತಾತ್ಕಾಲಿಕ ತಡೆ ನೀಡಲಾಗಿತ್ತು. ಇದೀಗ ಈ ತಡೆಯನ್ನು ತೆರವುಗೊಳಿಸಲಾಗಿದ್ದು, ಭಾರತದ ಯಾತ್ರಾರ್ಥಿಗಳು ಕೈಲಾಸ-ಮಾನಸರೋವರ ಯಾತ್ರೆ ಯನ್ನು ಕೈಗೊಳ್ಳಬಹುದಾಗಿದೆ.

ಗಲ್ವಾನ್ ಘರ್ಷಣೆಯ ಬಳಿಕ ಭಾರತ-ಚೀನಾ ನಡುವಿನ ರಾಜತಾಂತ್ರಿಕ ಮಾತುಕತೆಗಳು ಸ್ಥಗಿತಗೊಂಡಿದ್ದವು. ಮಿಲಿಟರಿ ಮಾತುಕತೆಗಳ ಮೂಲಕ ಪರಿಸ್ಥಿತಿಯನ್ನು ತಿಳಿಗೊಳಿಸಲಾಗಿದೆಯಾದರೂ, ರಾಜತಾಂತ್ರಿಕ ಮಾತು ಕತೆಗಳ ಮೂಲಕ ಉಭಯ ದೇಶಗಳ ನಡುವಿನ ದ್ವೇಷಮಯ ವಾತಾವರಣವನ್ನು ಕಡಿಮೆ ಮಾಡುವ ಪ್ರಯತ್ನಕ್ಕೆ ಇದೀಗ ಚಾಲನೆ ನೀಡಲಾಗಿದೆ.

### ಉಭಯ ದೇಶಗಳ ನಡುವೆ ನೇರ ವಿಮಾನಯಾನ ಸಂಚಾರ

**ಚೀನಾ ರಾಜಧಾನಿ ಬೀಜಿಂಗ್‌ನಲ್ಲಿ ಭಾರತ, ಚೀನಾ ದೇಶಗಳ ವಿದೇಶಾಂಗ ಕಾರ್ಯದರ್ಶಿಗಳ ಮಟ್ಟದ ಎರಡು ದಿನಗಳ ಮಾತುಕತೆ ಆರಂಭವಾಗಿದ್ದು, ಈ ಮಾತುಕತೆಯಲ್ಲಿ ಹಲವು ಮಹತ್ವದ ಒಪ್ಪಂದಗಳಿಗೆ ಸಮ್ಮತಿ ಸೂಚಿಸಲಾಗಿದೆ. ಪ್ರಮುಖವಾಗಿ ಕೈಲಾಸ-ಮಾನಸ ಸರೋವರ ಯಾತ್ರೆಯನ್ನು ಬೇಸಿಗೆಯಲ್ಲಿ ಪುನರಾರಂಭ ಮಾಡಲು ನಿರ್ಧರಿಸಲಾಗಿದೆ. ಅದೇ ರೀತಿ ಉಭಯ ದೇಶಗಳ ನಡುವೆ ನೇರ ವಿಮಾನಯಾನ ಸಂಚಾರವನ್ನು ಪುನರಾರಂಭಿಸಲು ತಾತ್ವಿಕ ಒಪ್ಪಿಗೆ ನೀಡಲಾಗಿದೆ. ಭಾರತ ಮತ್ತು ಚೀನಾದ ನಡುವಿನ ರಾಜತಾಂತ್ರಿಕ ಸಂಬಂಧದ 75ನೇ ವರ್ಷಾಚರಣೆ ಹಿನ್ನೆಲೆಯಲ್ಲಿ, ಉಭಯ ದೇಶಗಳು ಕೈಗೊಂಡ ಸೌಹಾರ್ದ ಒಪ್ಪಂದಗಳು ಇದೀಗ ಜಾಗತಿಕವಾಗಿ ಗಮನ ಸೆಳೆದಿವೆ.**

- **ಭಾರತ-ಚೀನಾ ರಾಜತಾಂತ್ರಿಕ ಸಂಬಂಧದ 75ನೇ ವರ್ಷಾಚರಣೆ**
- **ಕೈಲಾಸ-ಮಾನಸರೋವರ ಯಾತ್ರೆ ಪುನರಾರಂಭಕ್ಕೆ ಸಹಮತಿ**
- **ಉಭಯ ದೇಶಗಳ ನಡುವೆ ವಿಮಾನ ಸಂಚಾರ ಪುನರಾರಂಭಕ್ಕೆ ತಾತ್ವಿಕ ಒಪ್ಪಿಗೆ**


**ನೇರ ವಿಮಾನ ಸಂಚಾರ:** ಇನ್ನು ಭಾರತ-ಚೀನಾ ವಿದೇಶಾಂಗ ಕಾರ್ಯದರ್ಶಿ, ಉಪ ವಿದೇಶಾಂಗ ಸಚಿವರ ಸಭೆಯಲ್ಲಿ, ಉಭಯ ದೇಶಗಳ ನಡುವಿನ ನೇರ ವಿಮಾನಯಾನ ಸೇವೆಗಳನ್ನು ಪುನರಾರಂಭಿಸಲು ತಾತ್ವಿಕ ಒಪ್ಪಿಗೆ ನೀಡಲಾಗಿದೆ. ಈ ನಿಟ್ಟಿನಲ್ಲಿ ಮತ್ತೊಂದು ಸುತ್ತಿನ ಸಭೆ ನಡೆಸಲು ನಿರ್ಧರಿಸಲಾಗಿದ್ದು, ವಿಮಾನ ಸಂಚಾರ ಪುನರಾರಂಭಕ್ಕೆ ಉಭಯ ದೇಶಗಳೂ ಉತ್ಸುಕವಾಗಿರುವುದು ಸಂತಸದ ಸಂಗತಿಯಾಗಿದೆ. ಇನ್ನು ಗಡಿ ಭಾಗದ ನದಿಗಳಿಗೆ ಸಂಬಂಧಿಸಿದ ಜಲ ಮಾಹಿತಿಯನ್ನು ಪರಸ್ಪರ ಹಂಚಿಕೊಳ್ಳಲು ಸಹಮತಿ ಸೂಚಿಸಲಾಗಿದ್ದು, ಇದಕ್ಕಾಗಿ ಭಾರತ-ಚೀನಾ ತಜ್ಞರ ಮಟ್ಟದ ಸಭೆ ನಡೆಸಲಾಗುವುದು ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಶ್ರಿ ಅವರು ತಮ್ಮ ಚೀನಾ ಭೇಟಿ ಸಂದರ್ಭದಲ್ಲಿ, ಚೀನಾದ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಪಾಲಿಟ್‌ಬ್ಯೂರೋ ಸದಸ್ಯ, ವಿದೇಶಾಂಗ ವ್ಯವಹಾರಗಳ ಕೇಂದ್ರೀಯ ಆಯೋಗದ ಕಚೇರಿಯ ನಿರ್ದೇಶಕ, ವಿದೇಶಾಂಗ ಸಚಿವ ವಾಂಗ್‌ಯಿ, ಕಮ್ಯುನಿಸ್ಟ್ ಪಕ್ಷದ ಅಂತರರಾಷ್ಟ್ರೀಯ ಇಲಾಖೆಯ ಸಚಿವರನ್ನು ಭೇಟಿ ಮಾಡಿದರು ಎಂದು ಮೂಲಗಳು ತಿಳಿಸಿವೆ. ಭಾರತ, ಚೀನಾದ ನಡುವಿನ ರಾಜತಾಂತ್ರಿಕ ಸಂಬಂಧದ 75ನೇ ವರ್ಷಾಚರಣೆ ಹಿನ್ನೆಲೆಯಲ್ಲಿ, ಉಭಯ ದೇಶಗಳು ಕೈ ಗೊಂಡ ಸೌಹಾರ್ದ ಒಪ್ಪಂದಗಳು ಇದೀಗ ಜಾಗತಿಕವಾಗಿ ಗಮನ ಸೆಳೆದಿವೆ.

## ಕೇಜ್ರಿವಾಲ್ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಲು ಸರ್ಕಾರ ನಿರ್ಧಾರ

**ನವದೆಹಲಿ:** ಎಎಪಿ ಸಂಚಾಲಕ ಅರವಿಂದ್ ಕೇಜ್ರಿವಾಲ್ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಲು ಹರಿಯಾಣ ಸರ್ಕಾರ ತೀರ್ಮಾನಿಸಿದೆ. ಬಿಜೆಪಿ ಆಡಳಿತವಿರುವ ಹರಿಯಾಣವೂ ಚುನಾವಣೆಗೆ ಮುನ್ನ ದೆಹಲಿಯ ನೀರು ಸರಬರಾಜನ್ನು ಅಡ್ಡಿಪಡಿಸಲು ಯಮುನಾ ನೀರಿಗೆ ವಿಷ ವನ್ನು ಬೆರೆಸುತ್ತಿದೆ ಎಂಬ ಆರೋಪದ ಮಾಡಿದ್ದ ಎಎಪಿ ಸಂಚಾಲಕ ಅರವಿಂದ್ ಕೇಜ್ರಿವಾಲ್ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಲು ಹರಿಯಾಣ ಸರ್ಕಾರ ಯೋಜಿಸುತ್ತಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ದೆಹಲಿಯ ಮಾಜಿ ಮುಖ್ಯಮಂತ್ರಿ ವಿರುದ್ಧ ದೂರಿನೊಂದಿಗೆ ಕೇಸರಿ ಪಕ್ಷವು ಚುನಾವಣಾ ಆಯೋಗವನ್ನು ಸಂಪರ್ಕಿಸಲಿದೆ ಎಂದು ಮೂಲಗಳು ತಿಳಿಸಿವೆ. ದೆಹಲಿಯಲ್ಲಿ ಚುನಾವಣಾ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ್ದ ಕೇಜ್ರಿವಾಲ್ ಅವರು, ಹರಿಯಾಣದಿಂದ ದೆಹಲಿ, ಇತರ ರಾಜ್ಯಗಳಿಗೆ ಹರಿಯುವ ಯಮುನಾ



ದಲ್ಲಿ ಹೆಚ್ಚಿನ ಮಟ್ಟದ ಅಮೋನಿಯಾವನ್ನು ಹರಿಯಾಣದ ನಯಾಬ್ ಸಿಂಗ್ ಸೈನಿ ಸರ್ಕಾರವು ಉದ್ದೇಶಪೂರ್ವಕವಾಗಿ ನದಿಗೆ ಬಿಡುತ್ತಿದೆ ಎಂದು ಆರೋಪಿಸಿದ್ದರು. ಹರಿಯಾಣದಿಂದ ಬರುತ್ತಿರುವ ನೀರಿನಲ್ಲಿ ಏನೋ ತಪ್ಪಾಗಿದೆ ಎಂದು ದೆಹಲಿ ಜಲ ಮಂಡಳಿ ಅಧಿಕಾರಿಗಳು ಶಂಕಿಸಿದ್ದಾರೆ. ಅದನ್ನು ಪರೀಕ್ಷಿಸಿದಾಗ ವಿಷ ಬೆರೆಸಿರುವುದು ಪತ್ತೆಯಾಗಿದೆ. ನೀವು ದೆಹಲಿಯ ಜನರನ್ನು ಕೊಲ್ಲಲು ಬಯಸುತ್ತೀರಿ. ಅವರು ಅದನ್ನು ಏಕೆ ಮಾಡಿದರು ದೆಹಲಿಯಲ್ಲಿ ಒಂದಷ್ಟು ಜನ ಸತ್ತರೆ, ನನ್ನ ಮೇಲೆ ಮಾನಹಾನಿ ಮಾಡಿ ಮತ ಗಳಿಸಲು ಎಲ್ಲ ಆಪಾದನೆಯೂ ನನ್ನ ಮೇಲೆ ಬೀಳುತ್ತದೆ ಎಂದು ಭಾವಿಸಿದ್ದರು. ನೀವು ದೆಹಲಿಯ ಜನರನ್ನು ಕೊಲ್ಲಲು ಬಯಸುತ್ತೀರಾ? ಎಂದು ಕೇಜ್ರಿವಾಲ್ ಪ್ರಶ್ನಿಸಿದ್ದರು. ಕೇಜ್ರಿವಾಲ್ ಅವರ ಹೇಳಿಕೆಯನ್ನು ಬಿಜೆಪಿ ತಕ್ಷಣವೇ ಖಂಡಿಸಿತು.

ಕೇಜ್ರಿವಾಲ್ ತಮ ಆತ್ಮಸಾಕ್ಷಿಯನ್ನು ಕಳೆದುಕೊಂಡಿದ್ದಾರೆ, ಅವರು ಜನರ ಕ್ಷಮೆಯಾಚಿಸಬೇಕು ಎಂದು ಮುಖ್ಯ ಮಂತ್ರಿ ಸೈನಿ ಹೇಳಿದ್ದಾರೆ.

**ಚುನಾವಣೆಯಲ್ಲಿ ಸಂಭವನೀಯ ಸೋಲನ್ನು ಕಂಡ ಕೇಜ್ರಿವಾಲ್ ಮಾನಸಿಕ ಸಮತೋಲನ ಕಳೆದುಕೊಂಡಿದ್ದಾರೆ. ಕೇಜ್ರಿವಾಲ್ ಅವರು ಹರಿಯಾಣ, ದೆಹಲಿಯ ಜನರಲ್ಲಿ ತಕ್ಷಣವೇ ಕ್ಷಮೆಯಾಚಿಸಬೇಕು, ಇಲ್ಲದಿದ್ದರೆ ನಾವು ಅವರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುತ್ತೇವೆ ಎಂದು ಸೈನಿ ಹೇಳಿದ್ದಾರೆ.**


ಹರಿಯಾಣದ ಜನರು ಯಮುನಾವನ್ನು ಪವಿತ್ರ ನದಿ ಎಂದು ಪರಿಗಣಿಸುತ್ತಾರೆ ಮತ್ತು ಅದನ್ನು ಪೂಜಿಸುತ್ತಾರೆ. ಹರಿಯಾಣದ ಜನರು ನದಿ ನೀರಿನಲ್ಲಿ ವಿಷವನ್ನು ಏಕೆ ಬೆರೆಸುತ್ತಾರೆ 2020ರಲ್ಲಿ ಅರವಿಂದ್ ಕೇಜ್ರಿವಾಲ್ ಅವರು ಯಮುನಾ ನದಿಯನ್ನು ಮಾಲಿನ್ಯದಿಂದ ರಕ್ಷಿಸದಿದ್ದರೆ, ಅವರು ಎಂದಿಗೂ ಮತ ಕೇಳುವುದಿಲ್ಲ ಎಂದು ಸುಳ್ಳು ಭರವಸೆ ನೀಡಿದರು.

## ರಾತ್ರಿ 11 ಗಂಟೆಯ ನಂತರ ಥಿಯೇಟರ್‌ಗೆ ಮಕ್ಕಳು ಹೋಗುವಂತಿಲ್ಲ: ತೆಲಂಗಾಣ ಹೈಕೋರ್ಟ್

**ಹೈದರಾಬಾದ್:** ರಾತ್ರಿ 11 ಗಂಟೆಯ ನಂತರ 16 ವರ್ಷದೊಳಗಿನ ಮಕ್ಕಳಿಗೆ ಚಿತ್ರಮಂದಿರ ಮತ್ತು ಮಲ್ಟಿಪ್ಲೆಕ್ಸ್‌ಗಳಲ್ಲಿ ಚಲನಚಿತ್ರ ವೀಕ್ಷಿಸಲು ಅನುಮತಿ ನೀಡಬಾರದು ಎಂದು ರಾಜ್ಯ ಸರ್ಕಾರ ಮತ್ತು ಇತರರಿಗೆ ನಿರ್ದೇಶಿಸಿರುವ ತೆಲಂಗಾಣ ಹೈಕೋರ್ಟ್, ಈ ನಿಟ್ಟಿನಲ್ಲಿ ನಿರ್ಧಾರ ತೆಗೆದುಕೊಳ್ಳುವಂತೆ ಸರ್ಕಾರಕ್ಕೆ ಸೂಚಿಸಿದೆ. ಈ ಬಗ್ಗೆ ಸಂಬಂಧಪಟ್ಟ ಎಲ್ಲಾರೊಂದಿಗೆ ಸಮಾಲೋಚನೆ ನಡೆಸಿ ಸೂಚನೆ ನೀಡಬೇಕು ಎಂದು ಸರ್ಕಾರಕ್ಕೆ ಕೋರ್ಟ್ ನಿರ್ದೇಶಿಸಿದೆ.

ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳುವವರೆಗೂ 16 ವರ್ಷದೊಳಗಿನ ಮಕ್ಕಳಿಗೆ ರಾತ್ರಿ 11 ಗಂಟೆಯ ನಂತರ ಚಿತ್ರಮಂದಿರಗಳಲ್ಲಿ ಚಲನಚಿತ್ರ ವೀಕ್ಷಿಸಲು ಅನುಮತಿಸುವುದಿಲ್ಲ ಎಂದು ಹೇಳಿದೆ. ನಟ ರಾಮ್ ಚರಣ್ ನಟನೆಯ 'ಗೇಮ್ ಚೇಂಜರ್' ಸೇರಿದಂತೆ ಇತರ ಚಿತ್ರಗಳ ಟಿಕೆಟ್ ದರ ಹೆಚ್ಚಳಕ್ಕೆ ಸಂಬಂಧಿಸಿದ ಅರ್ಜಿಗಳ ವಿಚಾರಣೆಯನ್ನು ನ್ಯಾಯಾಲಯ ಸೋಮವಾರದಿಂದ ನಡೆಸುತ್ತಿದೆ.

ಈ ವೇಳೆ ಅರ್ಜಿದಾರ ವಿಜಯ್ ಗೋಪಾಲ್



ಪರ ವಕೀಲರು, ಅಪ್ರಾಪ್ತ ವಯಸ್ಕರಿಗೆ ತಡರಾತ್ರಿ ಚಲನಚಿತ್ರ ವೀಕ್ಷಿಸಲು ಅನುಮತಿಸಬಾರದು. ಇದು ಅವರ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆಯಿದೆ ಎಂದು ನ್ಯಾಯಾಲಯದ ಗಮನ ಸೆಳೆದಿದ್ದರು. ತಡರಾತ್ರಿ ಚಿತ್ರಮಂದಿರಗಳಿಗೆ ಮಕ್ಕಳ ಪ್ರವೇಶವನ್ನು ನಿಯಂತ್ರಿಸಲು ಸರ್ಕಾರ ತ್ವರಿತ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದ ಅವರು, ಪುಷ್ಪ-2 ಚಿತ್ರ ಪ್ರದರ್ಶನ ವೇಳೆ ಕಾಲ್ತುಳಿತದಿಂದ ಮಹಿಳೆಯೊಬ್ಬಳು ಮೃತಪಟ್ಟು, ಆಕೆಯ ಮಗ ಗಾಯಗೊಂಡಿದ್ದ ಘಟನೆಯನ್ನು ಉಲ್ಲೇಖಿಸಿದ್ದಾರೆ. ಮಲ್ಟಿಪ್ಲೆಕ್ಸ್‌ಗಳಲ್ಲಿ ಕೊನೆಯ ಪ್ರದರ್ಶನವು ಬೆಳಿಗ್ಗೆ 1.30ರ ವರೆಗೆ ನಡೆಯುತ್ತದೆ. ತಡರಾತ್ರಿ ಶೋಗಳಿಗೆ ಮಕ್ಕಳು ಪ್ರವೇಶಿಸದಂತೆ ನಿಯಂತ್ರಿಸುವ ಯಾವುದೇ ನಿಯಮಗಳಿಲ್ಲ.

## ಪ್ರಿಯಾಂಕಾಗೆ ಕಾರ್ಯಕರ್ತರಿಂದ ಕಪ್ಪು ಬಾವುಟ ಸ್ವಾಗತ

**ವಯನಾಡ್:** ಹುಲಿ ದಾಳಿಯಿಂದ ಮೃತಪಟ್ಟ ಮಹಿಳೆಯ ಕುಟುಂಬವನ್ನು ಭೇಟಿಯಾಗಲು ವಯನಾಡ್‌ನ ಮನಂತವಾಡಿ ಗ್ರಾಮಕ್ಕೆ ತೆರಳಿದ್ದ ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿಗೆ ಸಿಪಿಐ (ಎಂ) ಕಾರ್ಯಕರ್ತರು ಕಪ್ಪು ಬಾವುಟ ತೋರಿದ್ದಾರೆ. ತಾವು ಗೆದ್ದ ಕ್ಷೇತ್ರದಲ್ಲಿ ಹುಲಿ ದಾಳಿಯಿಂದ ಮಹಿಳೆಯೊಬ್ಬರು ಮೃತಪಟ್ಟಿದ್ದರೂ ತಡವಾಗಿ ಕ್ಷೇತ್ರಕ್ಕೆ ಆಗಮಿಸಿದ್ದೀರಿ ಎಂದು ಆಕ್ರೋಶ ವ್ಯಕ್ತಪಡಿಸಿರುವ ಸಿಪಿಐ (ಎಂ) ಕಾರ್ಯಕರ್ತರು ಪ್ರಿಯಾಂಕಾ ಸಾಗುವ ದಾರಿಯಲ್ಲಿ ಕಪ್ಪು ಬಾವುಟ ತೋರಿಸಿ, ವಾಪಸ್ ಹೊರಡಿ ಎಂದು ಕೂಗಿದ್ದಾರೆ.

ಮಂಗಳವಾರ ಮಧ್ಯಾಹ್ನ ಪ್ರಿಯಾಂಕಾ ಅವರು ಸಂತ್ರಸ್ಥರ ಮನೆಗೆ ತೆರಳಿ ಸಾಂತ್ವನ ಹೇಳಿದ್ದಾರೆ. ಜನವರಿ 24 ರಂದು ವಯನಾಡ್‌ನ ಮಾನಂತವಾಡಿ ಗ್ರಾಮದ ಪ್ರಿಯದರ್ಶಿನಿ ಎಸ್ಟೇಟ್‌ಗೆ ಕಾಫಿ ಕೊಯ್ಯಲು ಹೊರಟಿದ್ದ ರಾಧಾ ಎನ್ನುವ ಮಹಿಳೆ ಮೇಲೆ ಹುಲಿ ದಾಳಿ



ಮಾಡಿದ್ದು, ಅವರು ಸ್ಥಳದಲ್ಲೇ ಮೃತಪಟ್ಟಿದ್ದರು. ಘಟನೆ ನಡೆದ ಕೂಡಲೇ ಸ್ಥಳೀಯರು ಪ್ರತಿಭಟಿಸಿದ್ದು, ಮಹಿಳೆಯ ಶವವನ್ನು ಮರಣೋತ್ತರ ಪರೀಕ್ಷೆಗೆ ತೆಗೆದುಕೊಂಡು ಹೋಗುವುದನ್ನು ತಡೆದಿದ್ದರು. ಬಳಿಕ ಘಟನಾ ಸ್ಥಳಕ್ಕೆ ಧಾವಿಸಿದ್ದ ಅಧಿಕಾರಿಗಳು ಹುಲಿಯನ್ನು ಸೆರೆಹಿಡಿಯಲಾಗುವುದು ಅಥವಾ ಕೊಲ್ಲಲಾಗುವುದು ಎಂದು ಭರವಸೆ ನೀಡಿದರು. ಬಳಿಕ ಮಹಿಳೆಯ ಮೃತದೇಹವನ್ನು ಮರಣೋತ್ತರ ಪರೀಕ್ಷೆ ನಡೆಸಲಾಗಿದ್ದು, ಕುತ್ತಿಗೆಯ ಬಳಿ ಹುಲಿ ತೀವ್ರವಾಗಿ ದಾಳಿ ಮಾಡಿದ ಪರಿಣಾಮ ಅವರು ಮತಪಟಿದಾರೆ ಎಂದು ತಿಳಿದುಬಂದಿತು.

## ಸನಾತನ ಮಂಡಳಿ ಸ್ಥಾಪನೆಗೆ ಋಷಿಗಳ ಕರೆ

**ಮಹಾಕುಂಭ ನಗರ:** ಇಲ್ಲಿ ನಡೆಯುತ್ತಿರುವ ಮಹಾಕುಂಭದ ನಡುವೆ ನಡೆದ ಧರ್ಮ ಸಂಸದ್‌ನಲ್ಲಿ ಸನಾತನ ಮಂಡಳಿಯನ್ನು ಸ್ಥಾಪಿಸಲು ವಿವಿಧ ಮತಮಾನ್ಯಗಳು ಮತ್ತು ಗುಂಪುಗಳನ್ನು ಪ್ರತಿನಿಧಿಸುವ ಋಷಿಗಳು ಕರೆ ನೀಡಿದ್ದಾರೆ. ಹಿಂದೂ ದೇವಾಲಯಗಳನ್ನು ಕೆಡವಿ ನಿರ್ಮಿಸಿದ ಮಸೀದಿಗಳನ್ನು ಸಂರಕ್ಷಿಸಲು ಸಮಾಲೋಚನೆಯಿಲ್ಲದೆ ಕಾನೂನನ್ನು ಹೇರಲಾಗಿದೆ ಎಂದು ಹೇಳಿದ ಜಗದ್ಗುರು ವಿದ್ಯಾಭಾಸ್ಕರ್ ಜಿ ಮಹಾರಾಜ್ ಅವರು ಪೂಜಾ ಸ್ಥಳಗಳ (ವಿಶೇಷ ನಿಬಂಧನೆಗಳು) ಕಾಯ್ದೆಯನ್ನು ರದ್ದುಗೊಳಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಒತ್ತಾಯಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಸಂಸತ್ತಿನಲ್ಲಿ ತಮ ಬಹುಮತವನ್ನು ಬಳಸಿಕೊಂಡು ಪೂಜಾ ಸ್ಥಳಗಳ ಕಾಯಿದೆಯನ್ನು ಕಿತ್ತೊಗೆಯಬೇಕು. ಆ ಸಮಯದಲ್ಲಿ ಸರಕಾರ ಯಾವುದೇ ಚರ್ಚೆಯಿಲ್ಲದೆ ಈ ಕಾನೂನನ್ನು ಜಾರಿಗೊಳಿಸಿ ರಾಷ್ಟ್ರದ ಮೇಲೆ ಹೇರಿತ್ತು



ಎಂದಿದ್ದಾರೆ. ಸನಾತನ ಧರ್ಮವನ್ನು ಉಳಿಸುವುದರ ಮೇಲೆ ಎಲ್ಲಾ ಜೀವಿಗಳ ಉಳಿವು ಅವಲಂಬಿತವಾಗಿದೆ ಎಂದು ಅವರು ಪ್ರತಿಪಾದಿಸಿದರು. ಸನಾತನ ಮಂಡಳಿಯನ್ನು ಸ್ಥಾಪಿಸುವುದು ಸನಾತನಿಯನ್ನು ರಕ್ಷಿಸಲು ಈ ಸಮಯದ ಅಗತ್ಯವಾಗಿದೆ ಎಂದು ಅವರು ಹೇಳಿದರು. ಸನಾತನ ಧರ್ಮ ಸಂಸದ್ ಅಧ್ಯಕ್ಷತೆ ವಹಿಸಿದ್ದ ನಿಂಬಾಕರ್ ಪೀಠಾಧೀಶ್ವರ ಶ್ಯಾಮ್ ಶರಣ ದೇವಾ ಚಾರ್ಯರು, ಮಂಡಳಿಯು ಸನಾತನ ಧರ್ಮವನ್ನು ಕಾಪಾಡುತ್ತದೆ ಮತ್ತು ಭವಿಷ್ಯದ ಪೀಳಿಗೆಯ ಭದ್ರತೆಯನ್ನು ಖಚಿತಪಡಿಸುತ್ತದೆ ಎಂದು ಹೇಳಿದರು.


ತಿರುಪತಿ ಬಾಲಾಜಿಯಂತಹ ದೇವಾಲಯಗಳಿಗೆ ಹೊರಗಿನವರು ನುಸುಳುವುದನ್ನು ತಡೆಯಲು ಮತ್ತು ನಮ ನಂಬಿಕೆಯನ್ನು ಭ್ರಷ್ಟಗೊಳಿಸುವುದನ್ನು ತಡೆಯಲು ಮಂಡಳಿಯು ನಿರ್ಣಾಯಕವಾಗಿದೆ. ಒಮ ಇರಾನ್, ಅಫ್ಘಾನಿಸ್ತಾನ, ನೇಪಾಳ ಮತ್ತು ಭೂತಾನ್‌ನಂತಹ ರಾಷ್ಟ್ರಗಳು ಭಾರತದೊಂದಿಗೆ ಸಾಂಸ್ಕೃತಿಕವಾಗಿ ಹೊಂದಿಕೊಂಡವು. ನಾವು ಕಾರ್ಯನಿರ್ವಹಿಸದಿದ್ದರೆ ಭಾರತವೂ ಹಿಂದೂಗಳ ಕೈಯಿಂದ ಜಾರಿಕೊಳ್ಳಬಹುದು ಎಂದು ಎಚ್ಚರಿಸಿದರು. ಇಸ್ಕಾನ್ ನಾಯಕ ಗೌರಂಗ್ ದಾಸ್ ಜಿ ಮಹಾರಾಜ್ ಅವರು ಸನಾತನಿಗಳು ಏಕೀಕತ ಸಂಸ್ಥೆಯ ಅಗತ್ಯವನ್ನು ಎತ್ತಿ ತೋರಿಸಿದರು.

## ಪೊಲೀಸರ ತಪ್ಪಿನಿಂದ ಒಬ್ಬ ಅಮಾಯಕನ ಜೀವನ ಹಾಳು

**ಥಾಣೆ:** ನಟ ಸೈಫ್ ಅಲಿ ಖಾನ್ ಮೇಲಿನ ಹಲ್ಲೆ ಪ್ರಕರಣದಲ್ಲಿ ಶಂಕಿತ ಆರೋಪಿಯಾಗಿ ಛತ್ತೀಸ್‌ಗಢದ ದುರ್ಗ್‌ನಲ್ಲಿ ಬಂಧಿತನಾಗಿರುವ ವ್ಯಕ್ತಿಯ ತಂದೆ ಪೊಲೀಸರು ತಮ ಮಗನ ಜೀವನವನ್ನು ಹಾಳು ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ.

ಥಾಣೆ ಜಿಲ್ಲೆಯ ಟಿಟ್ವಾಲಾದ ಇಂದಿರಾನಗರ ಚಾಲ್‌ನ ಚಾಲಕ, ನಿವಾಸಿ ಆಕಾಶ್ ಕನೋಜಿಯಾ (31) ಅವರನ್ನು ಮುಂಬೈ ಪೊಲೀಸರ ಸುಳಿವಿನ ನಂತರ ಜನವರಿ 18 ರಂದು ರೈಲ್ವೇ ಪ್ರೊಟೆಕ್ಷನ್ ಫೋರ್ಸ್ (ಆರ್‌ಪಿಎಫ್) ದುರ್ಗ್ ನಿಲ್ದಾಣದಲ್ಲಿ ರೈಲಿನಿಂದ ಬಂಧಿಸಲಾಗಿತ್ತು. ಜನವರಿ 19 ರಂದು, ಮುಂಬೈ ಪೊಲೀಸರು ಬಾಂಗ್ಲಾದೇಶಿ ಪ್ರಜೆ ಶರೀಫುಲ್ ಇಸ್ಲಾಂ ಶೆಹಜಾದ್ ಮೊಹಮದ್ ರೋಹಿಲ್ಲಾ ಅಮೀನ್ ಫಕೀರ್ ಅಲಿಯಾಸ್ ವಿಜಯ್ ದಾಸ್ ಅವರನ್ನು ನಟನ ಮೇಲಿನ ದಾಳಿಗಾಗಿ ನೆರೆಯ ಥಾಣೆಯಿಂದ ಬಂಧಿಸಿದ ನಂತರ ಕನೋಜಿಯಾ ಅವರನ್ನು ದುರ್ಗ್ ಆರ್‌ಪಿಎಫ್ ಬಿಡುಗಡೆ ಮಾಡಿದೆ. ಪೊಲೀಸರು ನನ್ನ ಮಗನ ಗುರುತನ್ನು ಪರಿಶೀಲಿಸದೆ ಬಂಧಿಸಿದ್ದಾರೆ.

ಈ ತಪ್ಪು ಅವನ ಜೀವನವನ್ನು ಹಾಳುಮಾ




ಡಿದೆ, ಈಗ, ಮಾನಸಿಕ ಆಘಾತದಿಂದಾಗಿ, ಆಕಾಶ್ ಕೆಲಸದ ಮೇಲೆ ಕೇಂದ್ರೀಕರಿಸಲು ಅಥವಾ ಅವನ ಕುಟುಂಬದೊಂದಿಗೆ ಸಂವಹನ ನಡೆಸಲು ಆತನಿಗೆ ಸಾಧ್ಯವಾಗುತ್ತಿಲ್ಲ. ಅವನು ಹಿಂದೆ ಸರಿದಿದ್ದಾನೆ.

ಸರಿಯಾಗಿ ಮಾತನಾಡುವುದಿಲ್ಲ, ಆತ ಎಲ್ಲಾ ಪ್ರೇರಣೆಯನ್ನು ಕಳೆದುಕೊಂಡಿದ್ದಾನೆ ಎಂದು ಅವರ ತಂದೆ ಕೈಲಾಶ್ ಕನೋಜಿಯಾ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ ಹೇಳಿದರು. ನನ್ನ ಮಗನಿಗೂ ನಿಜವಾದ ಆರೋಪಿಗೂ ಯಾವುದೇ ಸಾಮ್ಯತೆ ಇಲ್ಲ ಎಂದು ಜನರು ಹೇಳುತ್ತಿದ್ದಾರೆ, ಅವನು ಕೆಲಸ ಕಳೆದುಕೊಂಡನು ಮತ್ತು ಅವನ ಮದುವೆಯನ್ನು ರದ್ದುಗೊಳಿಸಲಾಯಿತು, ಯಾರು ಹೊಣೆ? ಪೊಲೀಸರ ವರ್ತನೆಯು ಆಕಾಶ್‌ನ ಭವಿಷ್ಯವನ್ನು ನಾಶಮಾಡಿದೆ, ಎಂದು ಅವರು ಹೇಳಿದರು. ಆಕಾಶ್ ಕೂಡ ಪೊಲೀಸ್ ಕ್ರಮದ ನಂತರ ತನ್ನ ಜೀವನವು ಸಂಪೂರ್ಣ ಅಸ್ತವ್ಯಸ್ತವಾಗಿದೆ ಎಂದು ಹೇಳಿದರು. ಅವನಿಗೆ ಕೆಲಸವಿಲ್ಲ, ಅವನ ನಿರೀಕ್ಷಿತ ವಧು, ಅವನ ಕುಟುಂಬದಿಂದ ಅವಮಾನವನ್ನು ಎದುರಿಸುತ್ತಿದೆ.

## ಎಎಪಿ ಪರ ಟಿಎಂಸಿ ಸಂಸದ ಶತ್ರುಘ್ನ ಸಿನ್ಹಾ ಪ್ರಚಾರ

**ನವದೆಹಲಿ:** ಫೆಬ್ರವರಿ 5 ರಂದು ನಡೆಯಲಿರುವ ವಿಧಾನ ಸಭಾ ಚುನಾವಣೆಗೆ ಮುನ್ನ ಕಾಂಗ್ರೆಸ್ ಸಂಸದ ಶತ್ರುಘ್ನ ಸಿನ್ಹಾ ಅವರು ದೆಹಲಿಯಲ್ಲಿ ಆಮ್ ಆದಿ ಪಕ್ಷದ ಪರ ಪ್ರಚಾರ ನಡೆಸಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ. ಅಸನ್ಸೋಲ್‌ನ ಟಿಎಂಸಿ ಸಂಸದ ಸಿನ್ಹಾ ಅವರು ಫೆಬ್ರವರಿ 1, 2 ರಂದು ಕನಿಷ್ಠ ಮೂರು ಕ್ಷೇತ್ರಗಳಲ್ಲಿ ಆಪ್ ಪರವಾಗಿ ಪ್ರಚಾರ ನಡೆ ಸಲಿದ್ದಾರೆ. ಇವುಗಳಲ್ಲಿ ಮಾಜಿ ಮುಖ್ಯಮಂತ್ರಿ ಅರ ವಿಂದ್ ಕೇಜ್ರಿವಾಲ್ ಅವರ ನವದೆಹಲಿ ಕ್ಷೇತ್ರ, ಮುಖ್ಯ ಮಂತ್ರಿ ಅತಿಶಿ ಅವರ ಕಲ್ಕಾಜಿ ಕ್ಷೇತ್ರ ಮತ್ತು ಮನೀಶ್ ಸಿಸೋಡಿಯಾ ಅವರ ಜಂಗ್‌ಪುರ ಕ್ಷೇತ್ರಗಳಲ್ಲಿ ಪ್ರಚಾರ ನಡೆಸಲಿದ್ದಾರೆ.



ಬಿಹಾರದಿಂದ ಬಂದಿರುವ ನಟ-ರಾಜಕಾರಣಿಯು ದೆಹಲಿಯ ಪೂರ್ವಾಂಚಲಿ ಮತದಾರರನ್ನು ಸಜ್ಜುಗೊಳಿಸಬಹುದು ಎಂದು ಟಿಎಂಸಿ ನಂಬುತ್ತದೆ, ಇದು ಬಿಹಾರ, ಉತ್ತರ ಪ್ರದೇಶದಿಂದ ವಲಸೆ ಬಂದವರನ್ನು ಉಲ್ಲೇಖಿಸುತ್ತದೆ. ಪೂರ್ವಾಂಚಲಿಗಳು ನಗರದಲ್ಲಿ ಬಿಹಾರಿಗಳು ಪ್ರಭಾವಿ ಮತದಾರರಾಗಿದ್ದಾರೆ. ಇನ್ನೂ ಒಬ್ಬರು ಅಥವಾ ಇಬ್ಬರು ಟಿಎಂಸಿ ನಾಯಕರು ದೆಹಲಿಯಲ್ಲಿ ಪ್ರಚಾರಕ್ಕೆ ಸೇರಬಹುದು ಎಂದು ಮೂಲಗಳು ತಿಳಿಸಿವೆ.

ದೆಹಲಿ ಚುನಾವಣೆಗೆ ಟಿಎಂಸಿ ಎಎಪಿಗೆ ಬೆಂಬಲವನ್ನು ನೀಡಿತ್ತು, ಅಲ್ಲಿ ಬಿಜೆಪಿ, ಕಾಂಗ್ರೆಸ್ ಸಹ ಕಣದಲ್ಲಿದ್ದು ತ್ರಿಕೋನ ಸ್ಪರ್ಧೆಯಾಗಿದೆ. ಟಿಎಂಸಿ ಮತ್ತು ಎಎಪಿ ಇಂಡಿ ಒಕ್ಕೂಟದ ಭಾಗವಾಗಿದ್ದು, ಕಾಂಗ್ರೆಸ್ ತನ್ನ ದೊಡ್ಡ ಪಕ್ಷವಾಗಿದೆ.

ಪಕ್ಷವು ಬಿಜೆಪಿಯ ವಿರುದ್ಧ ಮಾತ್ರವಲ್ಲದೆ ಕಾಂಗ್ರೆಸ್ ವಿರುದ್ಧವೂ ಪ್ರಚಾರ ನಡೆಸಲಿದೆ ಎಂದು ಟಿಎಂಸಿಯ ಹಿರಿಯ ನಾಯಕರೊಬ್ಬರು ಹೇಳಿದ್ದಾರೆ ಇದು ವಿರೋಧ ಪಕ್ಷದ ಮೈತ್ರಿಯೊಳಗಿನ ಬಿರುಕುಗಳನ್ನು ಪ್ರತಿಬಿಂಬಿಸುತ್ತದೆ.

## ಮಹಾರಾಷ್ಟ್ರ; ಬಾಂಗ್ಲಾದೇಶಿ, ರೋಹಿಂಗ್ಯಾಗಳಿಗೆ ನಕಲಿ ಜನನ ಪ್ರಮಾಣ ಪತ್ರ: ಸೋಮಯ್ಯ

**ಜಲ್ನಾ:** ಮಹಾರಾಷ್ಟ್ರದಲ್ಲಿ ಅಕ್ರಮವಾಗಿ ನೆಲೆಸಿರುವ ಬಾಂಗ್ಲಾದೇಶದ ವಲಸಿಗರು, ರೋಹಿಂಗ್ಯಾಗಳಿಗೆ ನಕಲಿ ಜನನ ಪ್ರಮಾಣಪತ್ರ ವಿತರಿಸಲಾಗಿದೆ ಎಂದು ಬಿಜೆಪಿ ಮುಖಂಡ ಕಿರೀಟ ಸೋಮಯ್ಯ ಮಂಗಳವಾರ ಆರೋಪಿಸಿದ್ದಾರೆ.

ಇಂಥ ಅಕ್ರಮಗಳನ್ನು ಗೃಹ ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಭೇದಿಸಿದ್ದಾರೆ.

ಜನನ ಪ್ರಮಾಣಪತ್ರ, ರೇಷನ್ ಕಾರ್ಡ್, ಶಾಲಾ ಪ್ರಮಾಣಪತ್ರದಂತ ಪ್ರಮುಖ ದಾಖಲೆಗಳನ್ನು ಬಾಂಗ್ಲಾದೇಶಿಯರು ಹಾಗೂ ರೋಹಿಂಗ್ಯಾಗಳನ್ನು ಒಳಗೊಂಡು ಕಳೆದ ಆರು ತಿಂಗಳಿಂದ 2.14 ಲಕ್ಷದಷ್ಟು ವಿತರಿಸಲಾಗಿದೆ ಎಂದು ಹೇಳಿದ್ದಾರೆ. ಒಟ್ಟಾರೆ, 1.13 ಲಕ್ಷ ಜನನ ಪ್ರಮಾಣ ಪತ್ರಗಳನ್ನು ವಿತರಿಸಲಾಗಿದೆ. ಇದರಲ್ಲಿ ಅಕ್ರಮ ಎಸಗಲಾಗಿದೆ. ಜಲ್ನಾ ಜಿಲ್ಲೆಯೊಂದರಲ್ಲೇ 7,957 ನಕಲಿ ಪ್ರಮಾಣಪತ್ರಗಳನ್ನು ವಿತರಿಸಲಾಗಿದೆ' ಎಂದು ಸೋಮಯ್ಯ ದೂರಿದ್ದಾರೆ.

## ಜೈನರ ಧಾರ್ಮಿಕ ಕಾರ್ಯಕ್ರಮದ ವೇಳೆ ಕುಸಿದ ವೇದಿಕೆ

### ಹಲವು ಸಾವು, 40ಕ್ಕೂ ಹೆಚ್ಚು ಮಂದಿ ಗಾಯ, ಸಿಎಂ ಯೋಗಿ ಆದಿತ್ಯನಾಥ್ ಪ್ರತಿಕ್ರಿಯೆ, ಮೃತರ ಕುಟುಂಬಕ್ಕೆ ಸಂತಾಪ

**ಉತ್ತರ ಪ್ರದೇಶ:** ಜೈನ ಸಮುದಾಯದ ಕಾರ್ಯಕ್ರಮವೊಂದರ ವೇದಿಕೆ ಕುಸಿದು 7 ಮಂದಿ ಸಾವನ್ನಪ್ಪಿದ್ದು, ಮಹಿಳೆಯರು ಮತ್ತು ಮಕ್ಕಳು ಸೇರಿ ಸುಮಾರು 40ಕ್ಕೂ ಹೆಚ್ಚು ಜನರು ಗಾಯಗೊಂಡಿರುವ ಘಟನೆ ಬಾಗ್‌ಪತ್‌ನ ಬದೌತ್ ಎಂಬಲ್ಲಿ ನಡೆದಿದೆ.

ಗಾಯಾಳುಗಳು ಚಿಕಿತ್ಸೆ ಪಡೆಯುತ್ತಿದ್ದು, ಸಾವಿನ ಸಂಖ್ಯೆ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎಂದು ವರದಿಯಾಗಿದೆ. ಜೈನ ಸಮುದಾಯದ ಕಾರ್ಯ ಕ್ರಮಕ್ಕೆ ಬಿದಿರು, ಮರದ ಹಲಗೆಗಳನ್ನು ಬಳಸಿ ಮಾಡಲಾಗಿದ್ದ ತಾತ್ಕಾಲಿಕ ವೇದಿಕೆ ಏಕಾಏಕಿ ಕುಸಿದು ಬಿದ್ದಿದೆ. ಜೈನ ಸನ್ಯಾಸಿಗಳ ಸಮ್ಮುಖದಲ್ಲಿ ಭಗವಾನ್ ಆದಿನಾಥನಿಗೆ ಲಡ್ಡುಗಳನ್ನು ಸಮರ್ಪಿಸಲು ನೂರಾರು ಭಕ್ತರು ಸ್ಥಳದಲ್ಲಿ ಸೇರಿದ್ದರು. ಕಳೆದ 30 ವರ್ಷಗಳಿಂದ ಬದೌತ್‌ನಲ್ಲಿ ಎಂಬಲ್ಲಿ ವಾರ್ಷಿಕ



ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ ಎಂದು ಸ್ಥಳೀಯ ಪೊಲೀಸರು ತಿಳಿಸಿದ್ದಾರೆ. ಮೃತರನ್ನು ತರಶ್ಪಾಲ್ ಜೈನ್ (75), ಅಮಿತ್ (40), ಉಷಾ (65), ಅರುಣ್ ಜೈನ್ (48), ಶಿಲ್ಪಿ ಜೈನ್ (25), ವಿಪಿನ್ (44), ಮತ್ತು ಕಮಲೇಶ್ (65) ಎಂದು ಗುರುತಿಸಲಾಗಿದೆ. ಗಾಯಾಳುಗಳನ್ನು ಸ್ಥಳೀಯ ಆಸ್ಪತ್ರೆಗೆ ಕರೆ ದೊಯ್ಯಲಾಗಿದೆ. 20 ಮಂದಿಯನ್ನು ಪ್ರಥಮ ಚಿಕಿತ್ಸೆ ನೀಡಿ ಮನೆಗೆ ಕಳುಹಿಸಲಾಗಿದೆ.

### ಸಾವಿನ ಸಂಖ್ಯೆ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ

**ಜೈನ ಸಮುದಾಯದ ಕಾರ್ಯಕ್ರಮವೊಂದರ ವೇದಿಕೆ ಕುಸಿದು 7 ಮಂದಿ ಸಾವನ್ನಪ್ಪಿದ್ದು, ಮಹಿಳೆಯರು ಮತ್ತು ಮಕ್ಕಳು ಸೇರಿ ಸುಮಾರು 40ಕ್ಕೂ ಹೆಚ್ಚು ಜನರು ಗಾಯಗೊಂಡಿರುವ ಘಟನೆ ಬಾಗ್‌ಪತ್‌ನ ಬದೌತ್ ಎಂಬಲ್ಲಿ ನಡೆದಿದೆ. ಗಾಯಾಳುಗಳು ಚಿಕಿತ್ಸೆ ಪಡೆಯುತ್ತಿದ್ದು, ಸಾವಿನ ಸಂಖ್ಯೆ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎಂದು ವರದಿಯಾಗಿದೆ. ಜೈನ ಸಮುದಾಯದ ಕಾರ್ಯಕ್ರಮಕ್ಕೆ ಬಿದಿರು, ಮರದ ಹಲಗೆಗಳನ್ನು ಬಳಸಿ ಮಾಡಲಾಗಿದ್ದ ತಾತ್ಕಾಲಿಕ ವೇದಿಕೆ ಏಕಾಏಕಿ ಕುಸಿದು ಬಿದ್ದಿದೆ. ಜೈನ ಸನ್ಯಾಸಿಗಳ ಸಮ್ಮುಖದಲ್ಲಿ ಭಗವಾನ್ ಆದಿನಾಥನಿಗೆ ಲಡ್ಡುಗಳನ್ನು ಸಮರ್ಪಿಸಲು ನೂರಾರು ಭಕ್ತರು ಸ್ಥಳದಲ್ಲಿ ಸೇರಿದ್ದರು.**

- **ಜೈನ ಸಮುದಾಯದ ಕಾರ್ಯಕ್ರಮವೊಂದರ ವೇದಿಕೆ ಕುಸಿದು 7 ಮಂದಿ ಸಾವು, ಹಲವರಿಗೆ ಗಾಯ**
- **ಉತ್ತರ ಪ್ರದೇಶದ ಬಾಗ್‌ಪತ್‌ನ ಬದೌತ್‌ನಲ್ಲಿ ಕಾರ್ಯಕ್ರಮ ನಡೆಯುತ್ತಿದ್ದ ಕುಸಿದ ತಾತ್ಕಾಲಿಕ ವೇದಿಕೆ**

ಉಳಿದವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಘಟನೆಯಲ್ಲಿ ಐದು ಮಂದಿ ಮೃತಪಟ್ಟಿದ್ದಾರೆ' ಎಂದು ಜಿಲ್ಲಾಧಿಕಾರಿ ಅಸ್ಮಿತಾ ಲಾಲ್ ಪ್ರತಿಕ್ರಿಯಿಸಿದ್ದಾರೆ.

**ಸಿಎಂ ಯೋಗಿ ಆದಿತ್ಯನಾಥ್ ಪ್ರತಿಕ್ರಿಯೆ:** ಬಾಗ್‌ಪತ್ ಜಿಲ್ಲೆಯಲ್ಲಿ ನಡೆದಿರುವ ಅಹಿತಕರ ಘಟನೆ ಅತ್ಯಂತ ದುಃಖಕರವಾಗಿದೆ. ಘಟನೆಯಲ್ಲಿ ಮೃತರ ಕುಟುಂಬಕ್ಕೆ ನನ್ನ ಸಂತಾಪ. ಶೀಘ್ರ ಪರಿಹಾರ ಕಾರ್ಯಾಚರಣೆ ನಡೆಸಿ ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆ ನೀಡುವಂತೆ ಜಿಲ್ಲಾಡಳಿತದ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಗಾಯಾಳುಗಳು ಶೀಘ್ರ, ಗುಣಮುಖರಾಗಲಿ ಎಂದು ಘಟನೆ ಕುರಿತು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

## ಮಿನಿ ನ್ಯೂಸ್

### ಫೆಬ್ರವರಿಯಲ್ಲಿ ಅಮೆರಿಕಕ್ಕೆ ಮೋದಿ ಭೇಟಿ ; ಟ್ರಂಪ್

**ವಾಷಿಂಗ್ಟನ್:** ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಮುಂದಿನ ತಿಂಗಳು ಫೆಬ್ರವರಿಯಲ್ಲಿ ಶ್ವೇತಭವನಕ್ಕೆ ಭೇಟಿ ನೀಡುವ ಸಾಧ್ಯತೆಯಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಫ್ಲೋರಿಡಾದಿಂದ ಜಾಯಿಂಟ್ ಬೇಸ್ ಆಂಡ್ರ್ಯೂಸ್‌ಗೆ ಹಿಂದಿರುಗುವಾಗ ಏರ್ ಫೋರ್ಸ್ ಒನ್‌ನಲ್ಲಿ ಸುದ್ದಿಗಾರರಿಗೆ ಟ್ರಂಪ್ ಅವರು ಮಾತನಾಡಿ, ನಾನು ಮಂಗಳವಾರ ಬೆಳಿಗ್ಗೆ ಮೋದಿ ಅವರೊಂದಿಗೆ ಸುದೀರ್ಘ ಮಾತುಕತೆ ನಡೆಸಿದ್ದೇನೆ. ಅವರು ಮುಂದಿನ ತಿಂಗಳು, ಬಹುಶಃ ಫೆಬ್ರವರಿಯಲ್ಲಿ ಶ್ವೇತಭವನಕ್ಕೆ ಬರಲಿದ್ದಾರೆ ಎಂದರು. ಪ್ರಧಾನಿ ಮೋದಿಯವರೊಂದಿಗಿನ ಅವರ ಕರೆಯ ವಿವರಗಳನ್ನು ಕೇಳಿದಾಗ ಎಲ್ಲಾವೂ ಮಾತನಾಡಿದ್ದೇವೆ, ನಾವು ಭಾರತದೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದೇವೆ ಎಂದು ಟ್ರಂಪ್ ಸುದ್ದಿಗಾರರಿಗೆ ತಿಳಿಸಿದರು. ಮೊದಲ ಅವಧಿಯಲ್ಲಿ ಅಧ್ಯಕ್ಷರಾಗಿ ಟ್ರಂಪ್ ಅವರ ಕೊನೆಯ ವಿದೇಶಿ ಪ್ರವಾಸ ಭಾರತ ಎಂಬುದು ವಿಶೇಷ. ಟ್ರಂಪ್ ಮತ್ತು ಮೋದಿ ಉತ್ತಮ ಸ್ನೇಹ ಸಂಬಂಧವನ್ನು ಹೊಂದಿದ್ದಾರೆ. ಇಬ್ಬರೂ ಸೆಪ್ಟೆಂಬರ್ 2019 ರಲ್ಲಿ ಹೂಸ್ಟನ್‌ನಲ್ಲಿ ಮತ್ತು 2020 ರ ಫೆಬ್ರವರಿಯಲ್ಲಿ ಅಹಮದಾಬಾದ್‌ನಲ್ಲಿ ಎರಡು ವಿಭಿನ್ನ ರ‍್ಯಾಲಿಗಳಲ್ಲಿ ಸಾವಿರಾರು ಜನರನ್ನು ಉದ್ದೇಶಿಸಿ ಮಾತನಾಡಿದರು. ಕಳೆದ ನವೆಂಬರ್2024ರ ಚುನಾವಣೆಯಲ್ಲಿ ಟ್ರಂಪ್‌ಅದ್ಭುತ ವಿಜಯದ ನಂತರ ಟ್ರಂಪ್ ಅವರೊಂದಿಗೆ ಮಾತನಾಡಿದ ಅಗ್ರ ಮೂರು ವಿಶ್ವನಾಯಕರಲ್ಲಿ ಮೋದಿ ಕೂಡ ಕೂಡ ಒಬ್ಬರು.

### ಇಬ್ಬರು ಭಾರತೀಯ ಮೀನುಗಾರರಿಗೆ ಗಾಯ

**ಪುದುಚೇರಿ:** ಬಂಧನದಿಂದ ಪಾರಾಗಲು ಯತ್ನಿಸಿದ ವೇಳೆ ಶ್ರೀಲಂಕಾ ನೌಕಾಪಡೆ ನಡೆಸಿದ ಗುಂಡಿನ ದಾಳಿಯಲ್ಲಿ ಇಬ್ಬರು ಭಾರತೀಯ ಮೀನುಗಾರರು ಗಾಯಗೊಂಡಿದ್ದಾರೆ ಎಂದು ಪುದುಚೇರಿ ಸರ್ಕಾರದ ಉನ್ನತ ಅಧಿಕಾರಿಗಳು ತಿಳಿಸಿದ್ದಾರೆ.

ಗಾಯಗೊಂಡ ಇಬ್ಬರು ಮೀನುಗಾರರಲ್ಲಿ ಒಬ್ಬರು ಕರೈಕಲ್ ಮೂಲದರಾಗಿದ್ದು, ಮತ್ತೊಬ್ಬರು ತಮಿಳುನಾಡಿನವರು. ಇಬ್ಬರನ್ನು ಜಾಸ್ನಾನದ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರ ಸ್ಥಿತಿ ಸ್ಥಿರವಾಗಿದೆ. ಉಳಿದ 11 ಮೀನುಗಾರರನ್ನು ಶ್ರೀಲಂಕಾ ನೌಕಾಪಡೆ ವಶಕ್ಕೆ ತೆಗೆದುಕೊಂಡಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ತನ್ನ ಜಲಗಡಿಯಲ್ಲಿ ಮೀನುಗಾರಿಕೆ ಮಾಡಿದ ಆರೋಪದ ಮೇಲೆ ಶ್ರೀಲಂಕಾ ನೌಕಾಪಡೆಯು 13 ಭಾರತೀಯ ಮೀನುಗಾರರನ್ನು ಬಂಧಿಸಿದೆ. ಮೀನುಗಾರರ ದೋಣಿಗಳನ್ನು ವಶಕ್ಕೆ ಪಡೆದುಕೊಂಡಿದೆ.

ಏತನ್ಮಧ್ಯೆ, ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರಿಗೆ ಪತ್ರ ಬರೆದಿರುವ ಪುದುಚೇರಿ ಮುಖ್ಯಮಂತ್ರಿ ಎನ್. ರಂಗಸ್ವಾಮಿ, ಮೀನುಗಾರರ ಬಿಡುಗಡೆ ಶ್ರೀಲಂಕಾ ಸರ್ಕಾರದೊಂದಿಗೆ ಮಾತುಕತೆ ನಡೆಸುವಂತೆ ಮನವಿ ಮಾಡಿದ್ದಾರೆ. ಕರೈಕಲ್ ಮೂಲದ 6 ಮತ್ತು ತಮಿಳುನಾಡಿನ 7 ಮೀನುಗಾರರನ್ನು ಶ್ರೀಲಂಕಾ ನೌಕಾಪಡೆ ಬಂಧಿಸಿದೆ ಎಂದು ಇದೇ ಪತ್ರದಲ್ಲಿ ರಂಗಸ್ವಾಮಿ ತಿಳಿಸಿದ್ದಾರೆ.

### ಪ್ಯಾಲೆಸ್ಟೀನ್ ಜನ ಗಾಜಾದತ್ತ

**ಡೇರ್ ಅಲ್ ಬಾಲಾ:** ಊರು ಸೇರುವ ತವಕ, ಮುಖದಲ್ಲಿ ಅತೀವ ಸಂತಸ, ತಮ್ಮ ಬಳಿ ಅಳಿದು ಉಳಿದ ವಸ್ತುಗಳನ್ನು ಸುತ್ತಿಕೊಂಡು, ಕುಟುಂಬದವರೊಂದಿಗೆ ಕಾಲ್‌ನಡಿಗೆಯಲ್ಲಿ ಪ್ಯಾಲೆಸ್ಟೀನ್‌ನ ಸಾವಿರಾರು ಜನರು ನೆಟ್‌ಜರಿಮ್ ಕಾರಿಡಾರ್ ಮೂಲಕ ಉತ್ತರ ಗಾಜಾವನ್ನು ತಲುಪುತ್ತಿದ್ದಾರೆ. ದಕ್ಷಿಣ ಗಾಜಾದ ಭಾಗಗಳಲ್ಲಿ ವಿವಿಧ ನಿರಾಶ್ರಿತರ ಶಿಬಿರಗಳಲ್ಲಿ ಉಳಿದುಕೊಂಡಿದ್ದ ಜನರು ಭಾನುವಾರದ ಹೊತ್ತಿಗೆ ನೆಟ್‌ಜರಿಮ್ ಕಾರಿಡಾರ್ ಬಳಿ ಜಮಾಯಿಸಲು ಶುರುವಿಟ್ಟಿದ್ದರು. ಆದರೆ, ಗಾಜಾ ಗಡಿಯನ್ನು ಇಸ್ರೇಲ್ ತೆರೆದಿರಲಿಲ್ಲ. ರಾತ್ರಿ ಇಡೀ ಕೊರೆಯುವ ಚಳಿಯಲ್ಲಿಯೇ ಗಾಜಾ ಜನರು ಕಾದು ಕುಳಿತಿದ್ದರು.

ಹಮಾಸ್ ಬಂಡುಕೋರ ಸಂಘಟನೆಯು ಒಪ್ಪಂದದಂತೆ ಒತ್ತೆಯಾಳುಗಳನ್ನು ಬಿಡುಗಡೆ ಮಾಡುತ್ತಿಲ್ಲ ಎಂದು ಇಸ್ರೇಲ್ ಆರೋಪಿಸಿತ್ತು. ಒಂದೇ ರಾತ್ರಿಯಲ್ಲಿ ಈ ಸಮಸ್ಯೆಯನ್ನು ಮಧ್ಯವರ್ತಿಗಳು ನಿವಾರಿಸಿದ್ದಾರೆ. ಈ ಕಾರಣದಿಂದ ಸೋಮವಾರ ಬೆಳಿಗ್ಗೆ 7ರ ಸುಮಾರಿಗೆ ಯಾವುದೇ ಪರಿಶೀಲನೆ ಇಲ್ಲದೆ ಗಾಜಾ ಜನರು ತಮ್ಮ ಊರು ಸೇರುತ್ತಿದ್ದಾರೆ.

15 ತಿಂಗಳ ಸುದೀರ್ಘ ಯುದ್ಧವು ಉತ್ತರ ಗಾಜಾವನ್ನು ಸಂಪೂರ್ಣವಾಗಿ ನಾಶ ಮಾಡಿದೆ. ತಮ್ಮ ಮನೆ ಅಥವಾ ಮನೆಯ ಕುರುಹು ಕೂಡ ಇಲ್ಲ ಎನ್ನುವ ಸತ್ಯ ತಿಳಿದಿದ್ದರೂ ಜನರು ಅತೀವ ಉತ್ಸಾಹದಲ್ಲಿ ಮರಳುತ್ತಿದ್ದಾರೆ.

### ಮರದ ಚಪ್ಪರ ಕುಸಿದು ಐದು ಮಂದಿ ಸಾವು, 40ಕ್ಕೂ ಹೆಚ್ಚು ಜನರಿಗೆ ಗಾಯ

**ಬಾಗ್‌ಪತ್:** ಉತ್ತರ ಪ್ರದೇಶದ ಬದೌತ್‌ನಲ್ಲಿ ನಡೆದ ಜೈನ ಸಮುದಾಯದ ಕಾರ್ಯಕ್ರಮವೊಂದರಲ್ಲಿ ಮರದಲ್ಲಿ ನಿರ್ಮಿಸಿದ ಚಪ್ಪರ ಕುಸಿದು ಐದು ಮಂದಿ ಮೃತಪಟ್ಟಿದ್ದಾರೆ. ಸುಮಾರು 40ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಮಂಗಳವಾರ ಬದೌತ್‌ನಲ್ಲಿ ಜೈನ ಸಮುದಾಯದ ಕಾರ್ಯಕ್ರಮ ನಡೆಯುತ್ತಿದ್ದ ವೇಳೆ ಮರದಲ್ಲಿ ನಿರ್ಮಿಸಿದ ಚಪ್ಪರ ಕುಸಿದಿದೆ. ಘಟನೆಯಲ್ಲಿ ಐದು ಮಂದಿ ಮೃತಪಟ್ಟಿದ್ದು, 40ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿದ್ದು, ಅವರಲ್ಲಿ 20 ಮಂದಿಯನ್ನು ಪ್ರಥಮ ಚಿಕಿತ್ಸೆ ನೀಡಿ ಮನೆಗೆ ಕಳುಹಿಸಲಾಗಿದೆ. ಉಳಿದವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಜಿಲ್ಲಾಧಿಕಾರಿ ಅಸ್ಮಿತಾ ಲಾಲ್ ಹೇಳಿದ್ದಾರೆ. ಕಳೆದ 30 ವರ್ಷಗಳಿಂದ ಬದೌತ್‌ನಲ್ಲಿ ವಾರ್ಷಿಕ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ ಎಂದರು,

### ಹುಲಿ ಹೊಟ್ಟೆಯೊಳಗೆ ಮೃತ ಮಹಿಳೆ ರಾಧಾ ಕೂದಲು, ಬಟ್ಟೆ, ಕಿವಿ ಓಲೆ ಪತ್ತೆ

**ತಿರುವನಂತಪುರ:** ಇತ್ತೀಚೆಗೆ ವಯನಾಡ್‌ನ ಕಾಫಿ ತೋಟವೊಂದರ ಕಾರ್ಮಿಕ ಮಹಿಳೆ ರಾಧಾ ಅವರನ್ನು ಬಲಿ ತೆಗೆದುಕೊಂಡಿದ್ದ ಹುಲಿಯ ಕಳೇಬರ ಸೋಮವಾರ ಬೆಳಗಿನ ಜಾವ ವಯನಾಡ್‌ನ ಅರಣ್ಯ ಪ್ರದೇಶದಲ್ಲಿ ಪತ್ತೆಯಾಗಿತ್ತು. ಅಚ್ಚರಿ ಎಂದರೆ ಕಳೇಬರದ ಪರೀಕ್ಷೆಯ ವೇಳೆ ಹುಲಿಯ ಹೊಟ್ಟೆಯಲ್ಲಿ ರಾಧಾ ಅವರ ಕೂದಲು, ಬಟ್ಟೆಯ ತುಂಡು ಹಾಗೂ ಕಿವಿ ಓಲೆಗಳು ಕಂಡುಬಂದವು ಎಂದು ಅರಣ್ಯ ಅಧಿಕಾರಿಗಳು ತಿಳಿಸಿದ್ದಾರೆ. ರಾತ್ರಿ 12.30ರ ಸುಮಾರಿಗೆ ಹುಲಿಯು ಈ ಭಾಗದಲ್ಲಿ ಇರುವ ಬಗ್ಗೆ ತಿಳಿದು ಬಂದಿತ್ತು. 2.30ರ ಸುಮಾರಿಗೆ ಹುಲಿ ಕಾಣಿಸಿಕೊಂಡಿತು. ಹುಲಿಯನ್ನು ಶಾಂತಗೊಳಿಸುವ ನಮ್ಮ ಯತ್ನ ಫಲ ನೀಡಲಿಲ್ಲ. ಬಳಿಕ ಬೆಳಗಿನ ಜಾವ ಹುಲಿಯ ಕಳೇಬರ ಪತ್ತೆಯಾಯಿತು. ಕಳೇಬರದಲ್ಲಿ ಗಾಯಗಳು ಕಂಡುಬಂದಿವೆ ಎಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕೆ.ಎಸ್. ದೀಪಾ ಮಾಹಿತಿ ನೀಡಿದ್ದಾರೆ. ಮತ್ತೊಂದು ಹುಲಿಯೊಂದಿಗೆ ಗಲಾಟೆಯಾಗಿರುವುದೇ ಈ ಹುಲಿಯ ಸಾವಿಗೆ ಕಾರಣ ಇರಬಹುದು ಎಂದು ಅಧಿಕಾರಿಗಳು ಹೇಳಿದ್ದಾರೆ.



# ಮಾಲಿವುಡ್‌ನತ್ತ ಲೈಕಾ ಪ್ರೊಡಕ್ಷನ್- L2E Empuraan ಟೀಸರ್ ಔಟ್

**ಪ್ರತಿಷ್ಠಿತ ನಿರ್ಮಾಣ ಸಂಸ್ಥೆ ಲೈಕಾ**

ಸೂಪರ್ ಸ್ಟಾರ್ ಮೋಹನ್‌ಲಾಲ್ ಹಾಗೂ ಪೃಥ್ವಿರಾಜ್ ಸುಕುಮಾರನ್ ಈ ಕ್ರೇಜಿ ಕಾಂಬಿನೇಷನ್ ಬಹುನಿರೀಕ್ಷಿತ ಸಿನಿಮಾ ರಿಲೀಸ್‌ಗೆ ಸಿದ್ಧವಾಗಿದೆ. 'ಲೂಸಿಫರ್' ಮೊದಲ ಭಾಗದ ಮುಂದುವರೆದ ಅಧ್ಯಾಯವಾಗಿರುವ L2E Empuraan ಚಿತ್ರದ ಆಕ್ಷನ್ ಪ್ಯಾಕ್ಡ್ ಟೀಸರ್ ಅನಾವರಣಗೊಂಡಿದೆ.

ಕೊಚ್ಚಿಯಲ್ಲಿ ನಿನ್ನೆ ಈ ಚಿತ್ರದ ಟೀಸರ್ ಬಿಡುಗಡೆ ಕಾರ್ಯಕ್ರಮ ನಡೆಯಿತು. ಮಾಲಿವುಡ್ ಮತ್ತೊಬ್ಬ ಸೂಪರ್ ಸ್ಟಾರ್ ಮಮ್ಮುಟ್ಟಿ ಟೀಸರ್ ಲಾಂಚ್ ಇವೆಂಟ್‌ಗೆ ವಿಶೇಷ ಅತಿಥಿಯಾಗಿ ಆಗಮಿಸಿ ಟೀಸರ್ ಅನಾವರಣ ಮಾಡಿದರು. ಕಾಲಿವುಡ್ ಚಿತ್ರರಂಗದ ಪ್ರತಿಷ್ಠಿತ ನಿರ್ಮಾಣ ಸಂಸ್ಥೆ ಲೈಕಾ ಪ್ರೊಡಕ್ಷನ್ ಈ ಚಿತ್ರದ ಮೂಲಕ ಮಾಲಿವುಡ್‌ಗೆ ಎಂಟ್ರಿಯಾಗಿದೆ. ಬಹಳ ಅದ್ದೂರಿಯಾಗಿ 'ಲೂಸಿಫರ್ ಪಾರ್ಟ್ 2' ಸಿನಿಮಾವನ್ನು ನಿರ್ಮಾಪಕ ಸುಭಾಸ್ಕರನ್ ಹಾಗೂ ಆಂಟೋನಿ ಪೆರುಂಬವೂರ್ ನಿರ್ಮಾಣ ಮಾಡಿದ್ದಾರೆ.

**ಸ್ಟೀಫನ್ ನೆಡುಂಪಲ್ಲಿ ಪಾತ್ರದಲ್ಲಿ ಮೋಹನ್**

ಲಾಲ್ ಅಬ್ಬರಿಸಿದ್ದು, ನಿರ್ದೇಶನದ ಜೊತೆಗೆ ಪೃಥ್ವಿರಾಜ್ ಸುಕುಮಾರನ್ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಇಂದ್ರಜಿತ್ ಸುಕುಮಾರನ್, ಟೊವಿನೋ ಥಾಮಸ್, ಮಂಜು ವಾರಿಯರ್, ಸಾನಿಯಾ ಅಯ್ಯಪ್ಪನ್, ಸಾಯಿ ಕುಮಾರ್ ಮತ್ತು ಬೈಜು ಸಂತೋಷ್ ತಾರಾಬಳಗದಲ್ಲಿದ್ದಾರೆ.



# ರಾಕ್ಷಸ ಬಿಡುಗಡೆಗೆ ದಿನಾಂಕ ನಿಗದಿ

ಸೋನಲ್ ಮದುವೆ ನಂತರದ ಮೊದಲ ಚಿತ್ರ 'ರಾಕ್ಷಸ' ಫೆಬ್ರವರಿ 24 ರಂದು ಬಿಡುಗಡೆಯಾಗಲಿದೆ. ಎಚ್. ಲೋಹಿತ್ ನಿರ್ದೇಶನದ 'ಟೈಮ್ ಲೂಪ್' ಕಾನ್ಸೆಪ್ಟ್‌ನ ಚಿತ್ರದಲ್ಲಿ ಪ್ರಜ್ವಲ್ ದೇವರಾಜ್ ನಾಯಕ ನಟರಾಗಿ ಕಾಣಿಸಿಕೊಂಡಿದ್ದಾರೆ. ಸ್ಟಾರ್ ನಿರ್ದೇಶಕ ತರುಣ್ ಸುಧೀರ್ ಅವರನ್ನು ಇತ್ತೀಚಿಗೆ ವಿವಾಹವಾದ ನಟಿ ಸೋನಾಲ್ ಮೊಂಥೆರೋ, ತಮ್ಮ ವೈಯಕ್ತಿಕ ಹಾಗೂ ವೃತ್ತಿ ಜೀವನವನ್ನು ಸಮಾನವಾಗಿ ಮುಂದುವರೆಸಿದ್ದಾರೆ. ಅವರು ಅಭಿನಯಿಸಿರುವ ಹಲವು ಚಿತ್ರಗಳು ರಿಲೀಸ್ ಅಥವಾ ನಿರ್ಮಾಣದ ಹಂತದಲ್ಲಿದ್ದು, ನಟನಾ ವೃತ್ತಿಯಲ್ಲಿ ಸಾಕಷ್ಟು ಬ್ಯುಸಿಯಾಗಿದ್ದಾರೆ. ಸೋನಲ್ ಮದುವೆ ನಂತರದ ಮೊದಲ ಚಿತ್ರ 'ರಾಕ್ಷಸ' ಫೆಬ್ರವರಿ 24 ರಂದು ಬಿಡುಗಡೆಯಾಗಲಿದೆ. ಎಚ್. ಲೋಹಿತ್ ನಿರ್ದೇಶನದ 'ಟೈಮ್ ಲೂಪ್' ಕಾನ್ಸೆಪ್ಟ್‌ನ ಚಿತ್ರದಲ್ಲಿ ಪ್ರಜ್ವಲ್ ದೇವರಾಜ್ ನಾಯಕ ನಟರಾಗಿ ಕಾಣಿಸಿಕೊಂಡಿದ್ದಾರೆ.

ರಾಕ್ಷಸದಲ್ಲಿನ ತನ್ನ ಪಾತ್ರ ಕುರಿತು ಅನುಭವ ಹಂಚಿಕೊಂಡ ಸೋನಲ್, ಪಾತ್ರನನ್ನು ನನ್ನನ್ನು ಸೆಳೆಯಿತು. ಲೋಹಿತ್ ಅವರ ಹಿಂದಿನ ಚಿತ್ರಗಳಲ್ಲಿ ವಿಶಿಷ್ಟ ಪರಿಕಲ್ಪನೆಗಳ ಮೂಲಕ ಬಲವಾದ ಸ್ತ್ರೀ ಪಾತ್ರ ತೋರಿಸುವಲ್ಲಿ ಹೆಸರುವಾಸಿಯಾಗಿದ್ದಾರೆ. ಈ ಚಿತ್ರವೂ ಅದಕ್ಕೆ ಹೊರತಾಗಿಲ್ಲ. ರಾಕ್ಷಸ ಕಮರ್ಷಿಯಲ್ ಅಂಶಗಳಿರುವ ಹಾರರ್ ಚಿತ್ರವಾಗಿದೆ.

ಲೋಹಿತ್ ಅವರ ಟೈಮ್-ಲೂಪ್ ಪರಿಕಲ್ಪನೆ ಆಕರ್ಷಕವಾಗಿದ್ದು, ಪ್ರಜ್ವಲ್ ದೇವರಾಜ್ ಜೊತೆಗೆ ಕೆಲವು ಅದ್ಭುತವಾದ ಆಕ್ಷನ್ ಸೀಕ್ವೆನ್ಸ್‌ಗಳಿವೆ. ನನ್ನ ಪಾತ್ರ ಪ್ರಭಾವಶಾಲಿಯಾಗಿದೆ. ನನ್ನ ಪಾತ್ರವು ನೆರೆ ಮನೆಯ ವಿವಾಹಿತ ಮಹಿಳೆಗೆ ಹೋಲುತ್ತದೆ. 10 ಮಹಿಳೆಯರಲ್ಲಿ ಆರು ಮಂದಿ ಈ ಪಾತ್ರದಲ್ಲಿ ತಮ್ಮನ್ನು ಕಂಡುಕೊಳ್ಳುತ್ತಾರೆ ಎಂದು ಈ ಹಿಂದೆಯೇ ನಾನು ಹೇಳಿದ್ದೆ. ಇದೊಂದು ಅದ್ಭುತವಾದ ಪಾತ್ರವಾಗಿದೆ. ಮದುವೆಯ ನಂತರ ಆ ಭಾಗಗಳನ್ನು ಚಿತ್ರೀಕರಿಸುವುದು ಎಕ್ಸೈಟ್ ಆಗಿದೆ ಎಂದರು.

# ಪಾರು ಪಾರ್ವತಿ ಚಿತ್ರದಲ್ಲಿ ದೀಪಿಕಾ



ರೋಹಿತ್ ಕೀರ್ತಿ ಬರೆದು ನಿರ್ದೇಶಿಸಿದ ಈ ಚಿತ್ರವು ಬೆಂಗಳೂರಿನಿಂದ ಉತ್ತರಾಖಂಡದ ನಡುವಿನ ಪ್ರಯಾಣದಲ್ಲಿ ಎರಡು ಪಾತ್ರಗಳನ್ನು ಅನುಸರಿಸುತ್ತದೆ. ನಾಗಿಣಿ ಧಾರಾವಾಹಿ ಮತ್ತು ಬಿಗ್ ಬಾಸ್ ಕನ್ನಡ ಮೂಲಕ ಖ್ಯಾತಿ ಗಳಿಸಿದ ನಟಿ ದೀಪಿಕಾ ದಾಸ್ ಚಿತ್ರ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ. ಜನವರಿ 31ರಂದು ಚಿತ್ರವು ರಾಜ್ಯದಾದ್ಯಂತ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲು ಸಿದ್ಧವಾಗಿದೆ. ಚಿತ್ರದಲ್ಲಿನ ಪಾತ್ರವು ನನಗೆ ಎಷ್ಟು ಕನೆಕ್ಟ್ ಆಗಿದೆ ಎಂಬುದನ್ನು ದೀಪಿಕಾ ಬಹಿರಂಗಪಡಿಸಿದ್ದಾರೆ. 'ಟ್ರಾವೆಲ್ ಇನ್ಫ್ಲುಯನ್ಸರ್ ಮತ್ತು ಬ್ಲಾಗರ್ ಆಗಿ ನನ್ನ ಪಾತ್ರವು ಸ್ವಾಭಾವಿಕವಾಗಿದೆ. ಏಕೆಂದರೆ, ನಿಜಜೀವನದಲ್ಲಿ ನಾನು ಕೂಡ ಹಾಗೆಯೇ ಇದ್ದೇನೆ. ಪಾತ್ರ ಹೇಗೆ ಕೇಳುತ್ತದೆಯೋ ಹಾಗೆ ನಾನು ಹೋಗಿದ್ದೇನೆ ಮತ್ತು ಈ ಪ್ರಕ್ರಿಯೆಯನ್ನು ನಿಜವಾಗಿಯೂ ನಾನು ಆನಂದಿಸಿದೆ. ಟ್ರಾವೆಲ್ ಬ್ಲಾಗಿಂಗ್ ಇಂದಿನ ಪ್ರವೃತ್ತಿಯಾಗಿದೆ. ಪ್ರತಿಯೊಬ್ಬರೂ ಅನ್ವೇಷಿಸಲು, ಹಂಚಿಕೊಳ್ಳಲು ಮತ್ತು ಪ್ರೇರೇಪಿಸಲು ಬಯಸುತ್ತಾರೆ. ಪಾಯಲ್ ಪಾತ್ರದಲ್ಲಿ ನಾನು ಕಾಣಿಸಿಕೊಂಡಿದ್ದು, ಆಕೆ ಕೇವಲ ಇನ್ಫ್ಲುಯನ್ಸರ್ ಮಾತ್ರವಲ್ಲ ಮೋಟಿವೇಷನಲ್ ಸ್ಪೀಕರ್ ಕೂಡ ಆಗಿದ್ದಾಳೆ. ಆಕೆ ಬಲಿಷ್ಟವಾದ, ಸ್ವತಂತ್ರ ಮಹಿಳೆ ಕೂಡ' ಎಂದು ದೀಪಿಕಾ ದಾಸ್ ಹೇಳುತ್ತಾರೆ.



# ಅಂದೊಂದಿತ್ತು ಕಾಲ ಬಿಡುಗಡೆಗೆ ಸಿದ್ಧತೆ

ಚಿತ್ರತಂಡ ಇದೀಗ 'ಮುಂಗಾರು ಮಳೆಯಲ್ಲಿ ತಂದಲ್ಲೇ ನೀನಿಲ್ಲಿ ಪ್ರೀತಿಯ ಮುನ್ಸೂಚನೆ' ಎಂಬ ಮೊದಲ ಹಾಡನ್ನು ಬಿಡುಗಡೆ ಮಾಡಿದೆ. ಹಾಯಾಗಿದೆ ಮತ್ತು ಜಗವೇ ನೀನು ಗೆಳತಿಯೇ ಮುಂತಾದ ಕನ್ನಡ ಗೀತೆಗಳಿಗೆ ಧ್ವನಿ ನೀಡಿರುವ ಗಾಯಕ ಸಿದ್ ಶ್ರೀರಾಮ್ ಇದೀಗ ವಿನಯ್ ರಾಜ್‌ಕುಮಾರ್ ಮತ್ತು ಅದಿತಿ ಪ್ರಭುದೇವ ಮುಖ್ಯ ಭೂಮಿಕೆಯಲ್ಲಿರುವ 'ಅಂದೊಂದಿತ್ತು ಕಾಲ' ಚಿತ್ರದ ಮತ್ತೊಂದು ಹೃದಯಸ್ಪರ್ಶಿ ಹಾಡಿಗೆ ಧ್ವನಿ ನೀಡಿದ್ದಾರೆ. ಚಿತ್ರದಲ್ಲಿ ಕ್ರೇಜಿ ಸ್ಟಾರ್ ರವಿಚಂದ್ರನ್ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. 1990ರ ದಶಕದ ಹಿನ್ನೆಲೆಯನ್ನು ಹೊಂದಿರುವ ಚಿತ್ರವು ಟೈಮ್‌ಲೆಸ್ ಪ್ರೀತಿಯನ್ನು ಹೇಳುತ್ತದೆ. ಚಿತ್ರತಂಡ ಇದೀಗ 'ಮುಂಗಾರು ಮಳೆಯಲ್ಲಿ ತಂದಲ್ಲೇ ನೀನಿಲ್ಲಿ ಪ್ರೀತಿಯ ಮುನ್ಸೂಚನೆ' ಎಂಬ ಮೊದಲ ಹಾಡನ್ನು ಬಿಡುಗಡೆ ಮಾಡಿದೆ. ಧನಂಜಯ್ ರಂಜನ್ ಬರೆದಿರುವ ಈ ಹಾಡನ್ನು ತೀರ್ಥಹಳ್ಳಿಯ ಸುಂದರವಾದ ಹಿನ್ನೆಲೆಯಲ್ಲಿ ಚಿತ್ರಿಸಲಾಗಿದೆ.

ರಘು ಆರ್.ಜೆ ನೃತ್ಯ ಸಂಯೋಜನೆ ಮಾಡಿರುವ ಈ ಹಾಡು ಈಗಾಗಲೇ ಗಮನ ಸೆಳೆದಿದ್ದು, ಮುಂಗಾರು ಮಳೆ ತಂಡದಿಂದ ಲಾಂಚ್ ಆಗಿದೆ.

ಗಣೇಶ್, ನಿರ್ದೇಶಕ ಯೋಗರಾಜ್ ಭಟ್, ನಟಿ ಪೂಜಾ ಗಾಂಧಿ ಹಾಡನ್ನು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಹಾರೈಸಿದರು. ವಿ ರಾಘವೇಂದ್ರ ಸಂಗೀತ ಸಂಯೋಜಿಸಿದ್ದಾರೆ. ಈ ಹಾಡನ್ನು 02 ಮ್ಯೂಸಿಕ್ ಗಮನಾರ್ಹ ಮೊತ್ತಕ್ಕೆ ಆಡಿಯೋ ಹಕ್ಕುಗಳನ್ನು ಪಡೆದುಕೊಂಡಿದೆ. ಈ ಯೋಜನೆಯು ವಿನಯ್ ರಾಜ್‌ಕುಮಾರ್ ಅವರ ವೃತ್ತಿಜೀವನದಲ್ಲಿ ಮೈಲಿಗಲ್ಲು ಎಂದು ಗುರುತಿಸಲಾಗಿದೆ.

# 2ನೇ ಮದುವೆಗೆ ಸಜ್ಜಾದ ಚೈತ್ರಾ ವಾಸುದೇವನ್

**ಆ ಹುಡುಗ ಯಾರು**



'ಬಿಗ್ ಬಾಸ್' ಖ್ಯಾತಿಯ ಚೈತ್ರಾ ವಾಸುದೇವನ್ ಅವರು 2ನೇ ಮದುವೆಗೆ ಸಜ್ಜಾಗಿದ್ದಾರೆ. ಈ ಮೂಲಕ ಫ್ಯಾನ್ಸ್‌ಗೆ ನಟಿ ಗುಡ್ ನ್ಯೂಸ್ ಹಂಚಿಕೊಂಡಿದ್ದಾರೆ.ಚೈತ್ರಾ ಸದ್ಯ ಪ್ಯಾರಿಸ್‌ನಲ್ಲಿ ಮದುವೆಗಾಗಿ ಭರ್ಜರಿ ಶಾಪಿಂಗ್ ಮಾಡುತ್ತಿದ್ದಾರೆ. ನಡೆಸುತ್ತಿದ್ದಾರೆ. ಇನ್ಸ್ಟಾಗ್ರಾಂ ಖಾತೆಯಲ್ಲಿ ಅವರು ಪ್ಯಾರಿಸ್‌ನಲ್ಲಿ ಪ್ರೀ ವೆಡ್ಡಿಂಗ್ ಫೋಟೋಶೂಟ್‌ನ ವಿಡಿಯೋ ಹಂಚಿಕೊಂಡಿದ್ದು, ಮದುವೆ ಸುದ್ದಿಯನ್ನು ಅಭಿಮಾನಿಗಳ ಜೊತೆ ಹಂಚಿಕೊಂಡಿದ್ದಾರೆ. ನಾನು ನಿಮ್ಮೊಂದಿಗೆ ಹೃದಯಪೂರ್ವಕವಾದ ಒಂದು ಸಂತೋಷದ ಸುದ್ದಿ ಹಂಚಲು ಉತ್ಸುಕನಾಗಿದ್ದೇನೆ. ನಾನು ಈ ವರ್ಷ 2025ರ ಮಾರ್ಚ್‌ನಲ್ಲಿ ಜೀವನದ ಹೊಸ ಹೆಜ್ಜೆ ಇಡುತ್ತಿದ್ದೇನೆ. ನನ್ನ ವಿವಾಹದ ಸುಂದರ ಪ್ರಯಾಣ ಆರಂಭವಾಗಲಿದೆ. ಈ ಮುಂದಿನ ಹೆಜ್ಜೆ ಹಾಕುವಾಗ, ನಾನು ಈ ಹೊಸ ಅಧ್ಯಾಯಕ್ಕಾಗಿ ನಿಮ್ಮ ಪ್ರೀತಿ, ಆಶೀರ್ವಾದಗಳು ಮತ್ತು ಬೆಂಬಲವನ್ನು ಕೋರುತ್ತೇನೆ ಎಂದು ಬರೆದುಕೊಂಡಿದ್ದಾರೆ. ಭಾವಿ ಪತಿಯ ಜೊತೆ ಫೋಟೋಶೂಟ್ ಮಾಡಿಸಿದ್ದಾರೆ. ಆ ಹುಡುಗ ಯಾರು ಎನ್ನುವುದನ್ನು ಅವರು ರಿವೀಲ್ ಮಾಡಿಲ್ಲ. ಮಾರ್ಚ್ ತಿಂಗಳಿನಲ್ಲಿ ಮದುವೆಯಾಗುತ್ತಿದ್ದರೂ ಮದುವೆ ದಿನಾಂಕವನ್ನು ಅವರು ಇನ್ನೂ ತಿಳಿಸಿಲ್ಲ.



# ಸ್ಕಾಟ್ಲೆಂಡ್ ವಿರುದ್ಧ ಭರ್ಜರಿ ಜಯ

## ಸೆಮಿಫೈನಲ್‌ಗೆ ಭಾರತ ತಂಡ

ಭಾರತದ ಅಂಡರ್ 19 ಮಹಿಳಾ ಕ್ರಿಕೆಟ್ ತಂಡವು ಸ್ಕಾಟ್ಲೆಂಡ್ ವಿರುದ್ಧ ಭರ್ಜರಿ ಜಯ ಸಾಧಿಸಿದೆ. ಗೊಂಗಡಿ ತ್ರಿಶಾ ಅವರ ಅದ್ಭುತ ಶತಕ (110 ರನ್‌ಗಳು) ಮತ್ತು ಮೂರು ವಿಕೆಟ್‌ಗಳ ಸಾಧನೆಯಿಂದ ಭಾರತ 208 ರನ್‌ಗಳ ಬೃಹತ್ ಮೊತ್ತವನ್ನು ಪೇರಿಸಿ, ಸ್ಕಾಟ್ಲೆಂಡ್ ತಂಡವನ್ನು 150 ರನ್‌ಗಳ ಅಂತರದಿಂದ ಸೋಲಿಸಿ ಸೆಮಿಫೈನಲ್‌ಗೆ ಪ್ರವೇಶಿಸಿದೆ. ಅಂಡರ್ 19 ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಟೀಂ ಇಂಡಿಯಾದ ವಿಜಯ ಯಾತ್ರೆ ಮುಂದುವರಿದಿದೆ. ಸೂಪರ್ ಸಿಕ್ಸ್ ಸುತ್ತಿನ ಕೊನೆಯ ಪಂದ್ಯದಲ್ಲಿ ಭಾರತ ತಂಡ ಸ್ಕಾಟ್ಲೆಂಡ್ ತಂಡವನ್ನು ಏಕಪಕ್ಷೀಯವಾಗಿ ಸೋಲಿಸಿ ಸೆಮಿಫೈನಲ್‌ಗೆ ಎಂಟ್ರಿ ಪಡೆದಿದೆ. ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಟೀಂ ಇಂಡಿಯಾ 208 ರನ್‌ಗಳ ಬೃಹತ್ ಮೊತ್ತ ಪೇರಿಸಿತು. ಇದಕ್ಕೆ ಉತ್ತರವಾಗಿ ಗುರಿ ಬೆನ್ನಟ್ಟಿದ ಸ್ಕಾಟ್ಲೆಂಡ್ ತಂಡ ಕೇವಲ 58 ರನ್ ಗಳಿಗೆ ಆಲೌಟ್ ಆಯಿತು. ಟೀಂ ಇಂಡಿಯಾ ಪರ ಆಲ್‌ರೌಂಡರ್ ಪ್ರದರ್ಶನ ನೀಡಿದ ಗೊಂಗಡಿ ತ್ರಿಶಾ ಮೊದಲು ಬ್ಯಾಟಿಂಗ್‌ನಲ್ಲಿ ಕೇವಲ 59 ಎಸೆತಗಳಲ್ಲಿ 110 ರನ್‌ಗಳ ಬಿರುಸಿನ ಇನಿಂಗ್ಸ್ ಆಡಿದರೆ, ಇದಾದ ಬಳಿಕ ಬೌಲಿಂಗ್‌ನಲ್ಲೂ ಮ್ಯಾಜಿಕ್ ಪ್ರದರ್ಶಿಸಿ 6 ರನ್ ನೀಡಿ 3 ವಿಕೆಟ್ ಕಬಳಿಸುವ ಮೂಲಕ ಟೀಂ ಇಂಡಿಯಾದ ಗೆಲುವಿನ ರೂವಾರಿ ಎನಿಸಿಕೊಂಡರು.

ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಟೀಂ ಇಂಡಿಯಾ ಪರ ಆರಂಭಿಕರಾದ ಜಿ ಕಮಿಲಿನಿ ಮತ್ತು ಗೊಂಗಡಿ ತ್ರಿಶಾ ಶತಕದ ಜೊತೆಯಾಟ ನಡೆಸಿದರು. ಇಬ್ಬರೂ ಬ್ಯಾಟ್ಸ್‌ಮನ್‌ಗಳು ಮೊದಲ ವಿಕೆಟ್‌ಗೆ 147 ರನ್‌ಗಳ ದಾಖಲೆಯ ಜೊತೆಯಾಟ ನಡೆಸಿದರು. ಕಾಮಿಲಿನಿ 42 ಎಸೆತಗಳಲ್ಲಿ 51 ರನ್ ಗಳಿಸಿದರೆ ತ್ರಿಶಾ 13 ಬೌಂಡರಿ ಹಾಗೂ 4 ಸಿಕ್ಸರ್‌ಗಳ ನೆರವಿನಿಂದ 110 ರನ್ ಗಳಿಸಿ ಕೊನೆಯವರೆಗೂ ಅಜೇಯರಾಗಿ ಉಳಿದರು. ಈ ಮೂಲಕ ಮಹಿಳೆಯರ ಅಂಡರ್-19 ಟಿ20 ವಿಶ್ವಕಪ್‌ನಲ್ಲಿ ಶತಕ ಸಿಡಿಸಿದ ಮೊದಲ ಕ್ರಿಕೆಟರ್ ಎಂಬ ದಾಖಲೆಯನ್ನು ತ್ರಿಶಾ ನಿರ್ಮಿಸಿದರು. ಅವರ ಶತಕದ ಆಧಾರದಲ್ಲಿ ಟೀಂ ಇಂಡಿಯಾ 20 ಓವರ್‌ಗಳಲ್ಲಿ 208 ರನ್ ಗಳಿಸಿದ್ದು ಈ ಟೂರ್ನಿಯ ಅತ್ಯುತ್ತಮ ದಾಖಲೆಯಾಗಿದೆ.

209 ರನ್‌ಗಳ ಗುರಿ ಬೆನ್ನಟ್ಟಿದ ಸ್ಕಾಟ್ಲೆಂಡ್‌ಗೆ ಗುರಿಯ ಅರ್ಧದಷ್ಟು ರನ್‌ಗಳನ್ನು ಕಲೆಹಾಕಲು ಸಾಧ್ಯವಾಗಲಿಲ್ಲ. ಭಾರತದ ಎಡಗೈ ಸ್ಪಿನ್ನರ್ ಗಳಾದ ಆಯುಷಿ ಶುಕ್ಲಾ ಮತ್ತು ವೈಷ್ಣವಿ ಶರ್ಮಾ ವಿಧ್ವಂಸಕ ಬೌಲಿಂಗ್‌ಗೆ ತತ್ತರಿಸಿದ ಸ್ಕಾಟ್ಲೆಂಡ್ ಕೇವಲ 13 ರನ್‌ಗಳಿಗೆ 7 ವಿಕೆಟ್‌ಗಳನ್ನು ಕಳೆದುಕೊಂಡಿತು. ಕೊನೆಯಲ್ಲಿ ಶತಕ ಬಾರಿಸಿದ ತ್ರಿಶಾ ಚೆಂಡಿನಲ್ಲೂ ಅದ್ಭುತ ಪ್ರದರ್ಶನ ನೀಡಿ ಮೂರು ವಿಕೆಟ್ ಕಬಳಿಸಿ ಸ್ಕಾಟ್ಲೆಂಡ್ ಇನ್ನಿಂಗ್ಸ್‌ಗೆ ನೋವಿನ ಅಂತ್ಯ ಹಾಡಿದರು.

### ಸ್ಫೋಟಕ ಸೆಂಚುರಿಯೊಂದಿಗೆ
# ದಾಖಲೆ ಬರೆದ ಟಾಮ್ ಬ್ಯಾಂಟನ್

**ಹೊಸ ಇತಿಹಾಸ ರಚಿಸಿದ ಬ್ಯಾಂಟನ್**



ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಎಂಐ ಎಮಿರೇಟ್ಸ್ ತಂಡದ ಪರ ಟಾಮ್ ಬ್ಯಾಂಟನ್ 105 ರನ್ ಬಾರಿಸಿದರೆ, ಆಯಂಡ್ರೆ ಫ್ಲೆಚರ್ ಅಜೇಯ 96 ರನ್ ಸಿಡಿಸಿದರು. ಈ ಭರ್ಜರಿ ಬ್ಯಾಟಿಂಗ್ ನೆರವಿನಿಂದ ಎಂಐ ಎಮಿರೇಟ್ಸ್ ತಂಡವು 20 ಓವರ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡು 228 ರನ್ ಕಲೆಹಾಕಿತು. ಅಬುಧಾಬಿಯ ಶೇಖ್ ಝೂಯೆದ್ ಸ್ಟೇಡಿಯಂನಲ್ಲಿ ನಡೆದ ಇಂಟರ್‌ನ್ಯಾಷನಲ್ ಲೀಗ್ ಟಿ20 ಟೂರ್ನಿಯಲ್ಲಿ ಸ್ಫೋಟಕ ಶತಕ ಬಾರಿಸಿ ಟಾಮ್ ಬ್ಯಾಂಟನ್ ಹೊಸ ಇತಿಹಾಸ ರಚಿಸಿದ್ದಾರೆ. ಎಂಐ ಎಮಿರೇಟ್ಸ್ ವಿರುದ್ಧದ ಈ ಪಂದ್ಯದಲ್ಲಿ ಟಾಸ್ ಗೆದ್ದ ಡೆಸರ್ಟ್ ವೈಪರ್ಸ್ ತಂಡವು ಬೌಲಿಂಗ್ ಆಯ್ದುಕೊಂಡಿತು. ಅದರಂತೆ ಇನಿಂಗ್ಸ್ ಆರಂಭಿಸಿದ ಎಂಐ ಎಮಿರೇಟ್ಸ್ ಪರ ಟಾಮ್ ಬ್ಯಾಂಟನ್ ಹಾಗೂ ಆಯಂಡ್ರೆ ಫ್ಲೆಚರ್ ಸಿಡಿಲಬ್ಬರದ ಬ್ಯಾಟಿಂಗ್ ಪ್ರದರ್ಶಿಸಿದರು. ಸ್ಫೋಟಕ ಇನಿಂಗ್ಸ್‌ಗೆ ಒತ್ತು ನೀಡಿದ ಬ್ಯಾಂಟನ್ 55 ಎಸೆತಗಳಲ್ಲಿ 7 ಸಿಕ್ಸ್ ಹಾಗೂ 9 ಫೋರ್‌ಗಳೊಂದಿಗೆ 105 ರನ್ ಬಾರಿಸಿದರು. ಇದರೊಂದಿಗೆ ಇಂಟರ್‌ನ್ಯಾಷನಲ್ ಲೀಗ್ ಟಿ20 ಟೂರ್ನಿಯಲ್ಲಿ ಎರಡು ಶತಕ ಬಾರಿಸಿದ ಮೊದಲ ಬ್ಯಾಟರ್ ಎಂಬ ದಾಖಲೆ ಟಾಮ್ ಬ್ಯಾಂಟನ್ ಪಾಲಾಯಿತು.

ಇದಕ್ಕೂ ಮುನ್ನ ಟಾಮ್ ಬ್ಯಾಂಟನ್ ಶಾರ್ಜಾ ವಾರಿಯರ್ಸ್ ವಿರುದ್ಧದ ಪಂದ್ಯದಲ್ಲಿ 102 ರನ್ ಬಾರಿಸಿದ್ದರು.

ಇದೀಗ ಮತ್ತೊಮ್ಮೆ ಸೆಂಚುರಿ ಸಿಡಿಸಿ ಇಂಟರ್‌ನ್ಯಾಷನಲ್ ಲೀಗ್ ಟಿ20 ಟೂರ್ನಿಯಲ್ಲಿ 2 ಶತಕ ಬಾರಿಸಿದ ಏಕೈಕ ಬ್ಯಾಟರ್ ಎನಿಸಿಕೊಂಡಿದ್ದಾರೆ.

**ಟಾಮ್ ಬ್ಯಾಂಟನ್ ಬ್ಯಾಟಿಂಗ್**

ಇನ್ನು ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಎಂಐ ಎಮಿರೇಟ್ಸ್ ತಂಡದ ಪರ ಟಾಮ್ ಬ್ಯಾಂಟನ್ 105 ರನ್ ಬಾರಿಸಿದರೆ, ಆಯಂಡ್ರೆ ಫ್ಲೆಚರ್ ಅಜೇಯ 96 ರನ್ ಸಿಡಿಸಿದರು. ಈ ಭರ್ಜರಿ ಬ್ಯಾಟಿಂಗ್ ನೆರವಿನಿಂದ ಎಂಐ ಎಮಿರೇಟ್ಸ್ ತಂಡವು 20 ಓವರ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡು 228 ರನ್ ಕಲೆಹಾಕಿತು. 229 ರನ್‌ಗಳ ಕಠಿಣ ಗುರಿ ಬೆನ್ನತ್ತಿದ ಡೆಸರ್ಟ್ ವೈಪರ್ಸ್ ತಂಡವು ರೋಹಿದ್ ಖಾನ್ ಹಾಗೂ ಅಲ್ಜಾರಿ ಜೋಸೆಫ್ ಅವರ ಮಾರಕ ದಾಳಿಗೆ ತತ್ತರಿಸಿದೆ. ಪರಿಣಾಮ ಡೆಸರ್ಟ್ ವೈಪರ್ಸ್ ತಂಡ 12.3 ಓವರ್‌ಗಳಲ್ಲಿ 74 ರನ್‌ಗಳಿಸಿ ಆಲೌಟ್ ಆಯಿತು. ಈ ಮೂಲಕ ಎಂಐ ಎಮಿರೇಟ್ಸ್ ತಂಡ 154 ರನ್‌ಗಳ ಭರ್ಜರಿ ಜಯ ಸಾಧಿಸಿದೆ.

**ಎಂಐ ಎಮಿರೇಟ್ಸ್ ಪ್ಲೇಯಿಂಗ್ 11:** ಕುಸಾಲ್ ಪೆರೆರಾ , ಮುಹಮ್ಮದ್ ವಸೀಮ್ , ಆಯಂಡ್ರೆ ಫ್ಲೆಚರ್ , ಟಾಮ್ ಬ್ಯಾಂಟನ್ , ನಿಕೋಲಸ್ ಪೂರನ್ (ನಾಯಕ) , ಡಾನ್ ಮೌಸ್ಲಿ , ಕೀರಾನ್ ಪೊಲಾರ್ಡ್ , ರೊಮಾರಿಯೋ ಶೆಫರ್ಡ್ , ಮುಹಮ್ಮದ್ ರೋಹಿದ್ ಖಾನ್ , ಅಲ್ಜಾರಿ ಜೋಸೆಫ್ , ಫಜಲ್ಹಕ್ ಫಾರೂಕಿ. ಡೆಸರ್ಟ್ ವೈಪರ್ಸ್ ಪ್ಲೇಯಿಂಗ್ 11: ಫಖರ್ ಝಮಾನ್ , ಡೇನಿಯಲ್ ಲಾರೆನ್ಸ್ , ಆಡಮ್ ಹೋಸ್ , ಸ್ಯಾಮ್ ಕರ್‍ರಾನ್ (ನಾಯಕ) , ಆಝಂ ಖಾನ್ ( ವಿಕೆಟ್ ಕೀಪರ್ ) , ಶೆರ್ಫೇನ್ ರುದರ್ಫೋರ್ಡ್ , ಧ್ರುವ ಪರಾಶರ್ , ನಾಥನ್ ಸೌಟರ್ , ಮೊಹಮ್ಮದ್ ಅಮೀರ್ , ಖುಜೈಮಾ ತನ್ವೀರ್ , ಡೇವಿಡ್ ಪೇನ್.

### ಅತಿಯಾದ ಆತ್ಮವಿಶ್ವಾಸದಿಂದ ಕೆಟ್ಟ ಟೀಮ್ ಇಂಡಿಯಾ!
# 3ನೇ ಟಿ20ಯಲ್ಲಿ ಹೀನಾಯ ಸೋಲು



ಭಾರತ ತಂಡ ರಾಜ್‌ಕೋಟ್‌ನಲ್ಲಿ ನಡೆದ 3ನೇ ಟಿ20ಯಲ್ಲಿ 26ರನ್‌ಗಳ ಮುಖಭಂಗ ಅನುಭವಿಸಿದೆ. ಇಂಗ್ಲೆಂಡ್ ನೀಡಿದ್ದ 172ರನ್‌ಗಳ ಗುರಿಯನ್ನ ಬೆಟ್ಟದ ಟೀಮ್ ಇಂಡಿಯಾ 20 ಓವರ್‌ಗಳಲ್ಲಿ ಬ್ಯಾಟಿಂಗ್ ವೈಫಲ್ಯ ಅನುಭವಿಸಿ 145ರನ್‌ಗಳಲಷ್ಟೆ ಶಕ್ತವಾಗಿ ಸೋಲು ಕಂಡಿತು

ಭಾರತ ತಂಡ ರಾಜ್‌ಕೋಟ್‌ನಲ್ಲಿ ನಡೆದ 3ನೇ ಟಿ20ಯಲ್ಲಿ 26ರನ್‌ಗಳ ಮುಖಭಂಗ ಅನುಭವಿಸಿದೆ. ಇಂಗ್ಲೆಂಡ್ ನೀಡಿದ್ದ 172ರನ್‌ಗಳ ಗುರಿಯನ್ನ ಬೆಟ್ಟದ ಟೀಮ್ ಇಂಡಿಯಾ 20 ಓವರ್‌ಗಳಲ್ಲಿ ಬ್ಯಾಟಿಂಗ್ ವೈಫಲ್ಯ ಅನುಭವಿಸಿ 145ರನ್‌ಗಳಲಷ್ಟೆ ಶಕ್ತವಾಗಿ ಸೋಲು ಕಂಡಿತು. ಎಲ್ಲಾ ಬ್ಯಾಟರ್‌ಗಳು ತಾಳ್ಮೆ ತೋರದೇ ಬೇಕಾಬಿಟ್ಟಿ ಶಾಟ್ ಮಾಡಿ ವಿಕೆಟ್ ಕೈಚೆಲ್ಲಿದ್ದರು. ಇನ್ನು ಆಲ್‌ರೌಂಡರ್‌ಗಳಾದ ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್ ಹಾಗೂ ವಾಷಿಂಗ್ಟನ್ ವಿಕೆಟ್ ಕಾಯ್ದುಕೊಳ್ಳುವ ಯತ್ನದಲ್ಲಿ ಹೆಚ್ಚು ಎಸೆತಗಳನ್ನು ವ್ಯರ್ಥ ಮಾಡಿ ಕೊನೆಯಲ್ಲಿ ಒತ್ತಡಕ್ಕೆ ಒಳಗಾಗಿ ದೊಡ್ಡ ಶಾಟ್ ಮಾಡುವ ಪ್ರಯತ್ನದಲ್ಲಿ ಔಟ್ ಆದರು. ಪಾಂಡ್ಯ 35 ಎಸೆತಗಳಲ್ಲಿ 40 ರನ್‌ಗಳಿಸಿ ತಂಡದ ಗರಿಷ್ಠ ಸ್ಕೋರರ್ ಎನಿಸಿಕೊಂಡರು.



# ದಕ್ಷಿಣ ಆಫ್ರಿಕಾ ತಂಡಕ್ಕೆ ಎಬಿ ಡಿವಿಲಿಯರ್ಸ್ ನಾಯಕ..!

ಮಾಜಿ ದಕ್ಷಿಣ ಆಫ್ರಿಕಾ ನಾಯಕ ಎಬಿ ಡಿವಿಲಿಯರ್ಸ್ ಅವರು ಜುಲೈ 2025 ರಲ್ಲಿ ನಡೆಯುವ ವಿಶ್ವ ಚಾಂಪಿಯನ್‌ಶಿಪ್ ಆಫ್ ಲೆಜೆಂಡ್ಸ್‌ನ ಎರಡನೇ ಆವೃತ್ತಿಯಲ್ಲಿ 'ಗೇಮ್ ಚೇಂಜರ್ಸ್ ಸೌತ್ ಆಫ್ರಿಕಾ ಚಾಂಪಿಯನ್ಸ್' ತಂಡದ ನಾಯಕರಾಗಿ ಆಡಲಿದ್ದಾರೆ.

ಇದು ಅವರ ಅಂತರಾಷ್ಟ್ರೀಯ ನಿವೃತ್ತಿಯ ನಂತರದ ಮಹತ್ವದ ಕಮ್‌ಬ್ಯಾಕ್ ಆಗಿದೆ. ಡಿವಿಲಿಯರ್ಸ್ ಸ್ವತಃ ಈ ಸುದ್ದಿಯನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ತನ್ನ ಸೌಮ್ಯ ಸ್ವಭಾವ ಹಾಗೂ ಹೊಡಿಬಡಿ ಆಟದ ಮೂಲಕವೇ ಇಡೀ ಕ್ರಿಕೆಟ್ ಲೋಕದಲ್ಲಿ ಕೋಟ್ಯಾಂತರ ಅಭಿಮಾನಿಗಳ ಆರಾಧ್ಯ ದೈವ ಎನಿಸಿಕೊಂಡಿರುವ ದಕ್ಷಿಣ ಆಫ್ರಿಕಾದ ಮಾಜಿ ನಾಯಕ ಹಾಗೂ ಆರ್‌ಸಿಬಿಯ ಆಪ್ತಾಂಧವ ಖ್ಯಾತಿಯ ಎಬಿ ಡಿವಿಲಿಯರ್ಸ್ ಇದೀಗ ಮತ್ತೊಮ್ಮೆ ಕ್ರಿಕೆಟ್ ಲೋಕದಲ್ಲಿ ಕಾಣಿಸಿಕೊಳ್ಳಲು ಸಜ್ಜಾಗಿದ್ದಾರೆ. ಸುಮಾರು 3 ವರ್ಷಗಳ ಹಿಂದೆ ಅಂತರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತರಾದ ಎಬಿ ಡಿವಿಲಿಯರ್ಸ್ ಶೀಘ್ರದಲ್ಲೇ ಮೈದಾನದಲ್ಲಿ ಬೌಲರ್‌ಗಳ ಬೆವರಿಳಿಸಲು ನಾನು ಸಿದ್ದ ಎಂಬ ಖಚಿತ ಮಾಹಿತಿ ನೀಡಿದ್ದಾರೆ. ಅಷ್ಟಕ್ಕೂ ಎಬಿ ಡಿವಿಲಿಯರ್ಸ್ ಯಾವ ಟೂರ್ನಿಯಲ್ಲಿ ಆಡಲಿದ್ದಾರೆ ಯಾವ ತಂಡದಲ್ಲಿ ಆಡಲಿದ್ದಾರೆಎಂಬ ಪ್ರಶ್ನೆ ನಿಮ್ಮ ಮನದಲ್ಲಿ ಮೂಡಿರಬಹುದು. ಅದಕ್ಕೆಲ್ಲ ಉತ್ತರ ಇಲ್ಲಿದೆ.

**ನಾಯಕನಾಗಿ ಕಣಕ್ಕಿಳಿಯುವ ಡಿವಿಲಿಯರ್ಸ್**

2021 ರಲ್ಲಿ ಎಲ್ಲಾ ಮಾದರಿಯ ಕ್ರಿಕೆಟ್‌ನಿಂದ ನಿವೃತ್ತರಾಗಿದ್ದ ಎಬಿ ಡಿವಿಲಿಯರ್ಸ್ ಇದೀಗ ಮತ್ತೊಮ್ಮೆ ಕ್ರಿಕೆಟ್‌ಗೆ ಕಮ್ ಬ್ಯಾಕ್ ಮಾಡುತ್ತಿದ್ದಾರೆ. ಆದರೆ, ಅವರು ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಮರಳುತ್ತಿಲ್ಲ. ಬದಲಿಗೆ, ಮುಂಬರುವ ಜುಲೈ ತಿಂಗಳಲ್ಲಿ ನಡೆಯಲ್ಲಿರುವ ವರ್ಲ್ಡ್ ಚಾಂಪಿಯನ್‌ಶಿಪ್ ಆಫ್ ಲೆಜೆಂಡ್ಸ್‌ನ ಎರಡನೇ ಆವೃತ್ತಿಯಲ್ಲಿ 'ಗೇಮ್ ಚೇಂಜರ್ಸ್ ಸೌತ್ ಆಫ್ರಿಕಾ ಚಾಂಪಿಯನ್ಸ್' ತಂಡದ ಪರ ಡಿವಿಲಿಯರ್ಸ್ ಆಡುವುದನ್ನು ಕಾಣಬಹುದಾಗಿದೆ. ಆಟಗಾರನಾಗಿ ಮಾತ್ರವಲ್ಲದೆ ಡಿವಿಲಿಯರ್ಸ್ ತಂಡದ ನಾಯಕತ್ವವನ್ನು ವಹಿಸಿಕೊಂಡಿದ್ದಾರೆ. ಸ್ವತಃ ಈ ವಿಚಾರವನ್ನು ಎಬಿ ಡಿವಿಲಿಯರ್ಸ್ ಅವರೇ ಸೋಶಿಯಲ್ ಮೀಡಿಯಾದಲ್ಲಿ ತಮ್ಮ ಅಭಿಮಾನಿಗಳೊಂದಿಗೆ ಹಂಚಿಕೊಂಡಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news

ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966